# ಕೆಟ್ಟಿತ್ತು ಕಲ್ಯಾಣ

[ರಂಗಪಠ್ಯ]

ಎಂ. ಎಂ. ಕಲಬುರ್ಗಿ

## ಅರಿಕೆ

ಈ ನಾಟಕವನ್ನು ಬರೆಯುವಾಗ ರಿಚರ್ಡ್ ಆ್ಯಟೆನ್ ಬರೋ ನಿರ್ದೇಶಿಸಿದ "ಗಾಂಧೀ" ಚಲನಚಿತ್ರ ನನ್ನ ಕಣ್ಣ ಮುಂದಿದೆ.

ಬಸವಣ್ಣನವರ ಜೀವನ ಮೂರು ಸಂಸ್ಕೃತಿಗಳಲ್ಲಿ ಸಾಗಿ ಬಂದಿದೆ: ಬಾಗೆವಾಡಿಯ ಅಗ್ರಹಾರ ಸಂಸ್ಕೃತಿ, ಕೂಡಲಸಂಗಮದ ದೇವಾಲಯ ಸಂಸ್ಕೃತಿ ಮತ್ತು ಕಲ್ಯಾಣದ ರಾಜಸಂಸ್ಕೃತಿ. ಇಲ್ಲೆಲ್ಲ ಆತ ಸ್ಥಾವರದಿಂದ ಜಂಗಮವಾಗುತ್ತ, ಸ್ಥಾವರವನ್ನು ಜಂಗಮಗೊಳಿಸುತ್ತ ಸಾಗಿಬಂದಿದ್ದಾನೆ. ಬಾಗೆವಾಡಿಯಲ್ಲಿ ಕರ್ಮದಿಂದ ಧರ್ಮಕ್ಕೆ, ಸಂಗಮದಲ್ಲಿ ಅಂಗದಿಂದ ಲಿಂಗಕ್ಕೆ, ಕಲ್ಯಾಣದಲ್ಲಿ ಲಿಂಗದಿಂದ ಜಂಗಮಕ್ಕೆ ಆತನು ಹೆಜ್ಜೆ ಹಾಕಿದ್ದಾನೆ. ಮೊದಲಿನ ಎರಡು ಪರಿಸರಗಳಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಹರಿದುಕೊಂಡ ಬಸವಣ್ಣ, ಮೂರನೆಯ ಪರಿಸರಕ್ಕೆ ಬರುವಲ್ಲಿ, ಈ ಮೂರೂ ಒಂದುಗೂಡಿ ಅವನನ್ನು ದಂಡಿಸಿದವು.

ಅಗ್ರಹಾರ ಸಂಸ್ಕೃತಿಯನ್ನು ಧಿಕ್ಕರಿಸಿದ ಬಸವಣ್ಣನ ಬಗೆಗೆ ಬಾಗೆವಾಡಿಯ ಬ್ರಾಹ್ಮಣರು ಹೇಗೆ ನಡೆದುಕೊಂಡಿರಬಹುದು? ದೇವಾಲಯ ಸಂಸ್ಕೃತಿ - ಮಠ ಸಂಸ್ಕೃತಿಗಳನ್ನು ನಿರಾಕರಿಸಿದ ಅವನನ್ನು ಕೂಡಲಸಂಗಮದ ಶೈವಮಠ ಹೇಗೆ ನಡೆಸಿಕೊಂಡಿರಬಹುದು? ಭಂಡಾರಸಚಿವ ಬಸವಣ್ಣನ "ಜಂಗಮನೀತಿ"ಯನ್ನು ಬಿಜ್ಜಳನ "ಸ್ಥಾವರ ಅರ್ಥನೀತಿ" ಹೇಗೆ ಪ್ರತಿಭಟಿಸಿರಬಹುದು? ಕೊನೆಯದಾಗಿ ಜ್ಞಾನಿಯಾದ ಶೂದ್ರ ಅಲ್ಲಮನನ್ನು ಜಂಗಮನೆಂದು ಪರಿಗಣಿಸಿದುದಕ್ಕೆ, ಅದನ್ನು ಅಧಿಕೃತಗೊಳಿಸುವಂತೆ ಅವನನ್ನು ಶೂನ್ಯಪೀಠದ ಮೇಲೆ ಕುಳ್ಳಿರಿಸಿದುದಕ್ಕೆ ಶೈವ ಜಾತಿಜಂಗಮರು ಹೇಗೆ ಪ್ರತಿಕ್ರಿಯಿಸಿರಬಹುದು? ಎಂದು ಹಾಕಿಕೊಂಡ ಪ್ರಶ್ನೆಗಳಿಗೆ ಹೊಳೆದ ಸಹಜ ಉತ್ತರಗಳು ಇಲ್ಲಿವೆ. ಅಲ್ಲಲ್ಲಿಯ ಸಣ್ಣ-ಪುಟ್ಟ ಪ್ರಸಂಗಗಳು ವಚನಗಳನ್ನವಲಂಬಿಸಿ, ಶರಣಸಿದ್ಧಾಂತವನ್ನವಲಂಬಿಸಿ, ಇತಿಹಾಸದ ಮೌನದಿಂದ ಹೊರಡಿಸಿದ ಮಾತುಗಳಾಗಿವೆ. ಹೀಗಿದ್ದೂ ಸೃಜನಶೀಲ ಸಾಹಿತ್ಯಕೃತಿಗೆ ಅವಶ್ಯವಿರುವ ಸೂಕ್ತ ಸ್ವಾತಂತ್ರ್ಯವನ್ನು ಈ ನಾಟಕ ಅಲ್ಲಲ್ಲಿ ಪಡೆದಿದೆ. ಇಲ್ಲಿಯ ಕೆಲವು ಪ್ರಸಂಗಗಳನ್ನು ಈ ದೃಷ್ಟಿಯಿಂದ ನೋಡಬೇಕೆಂದು ಬಿನ್ನವಿಸಿಕೊಳ್ಳುತ್ತೇನೆ.

ಬಸವಣ್ಣನವರ ಆತ್ಮತತ್ವಜ್ಞಾನವನ್ನು ಬಿಡದೆ, ಸಮಾಜತತ್ವಜ್ಞಾನವನ್ನು ಆಧರಿಸಿ ಬರೆದ ನಾಟಕವಿದು. ಅವರ ಸಮಗ್ರ ವ್ಯಕ್ತಿತ್ವಕ್ಕೆ ಬಿಡಿಸಿದ ದೃಶ್ಯರೂಪದ ವ್ಯಾಖ್ಯಾನವಿದು. ಸ್ಥಾವರಪರಿಸರ, ಅದಕ್ಕೆ ಬಸವಣ್ಣ ತೋರಿಸಿದ ಪ್ರತಿಕ್ರಿಯೆ; ಅದರಿಂದ ಆಕಾರಗೊಂಡ ಜಂಗಮಪರಿಸರ, ಇದನ್ನು ಸ್ಥಾವರಪರಿಸರ ನಾಶಮಾಡಿದ ರೀತಿ -ಇಷ್ಟು ಈ ನಾಟಕದ ಮೈ, ಮನಸ್ಸು.

ಕಾವ್ಯ ರಚಿಸುವವ ಕವಿ, ನಾಟಕ ರಚಿಸುವವ ನಾಟಕಕಾರನಲ್ಲ, ನಿರ್ದೇಶಕ. ಹೀಗಾಗಿ ಕವಿ ಬರೆದ ನಾಟಕ ಕೃತಿ ಎಷ್ಟೇ ಸಾಹಿತ್ಯಿಕವಾಗಿದ್ದರೂ ಕಚ್ಚಾ ಸರಕು, ಅದು ಪಕ್ಕಾ ಸರಕಾಗುವುದು ರಂಗಭೂಮಿಯ ಮೇಲೆ. ಈ ಎಚ್ಚರವನ್ನು ಉದ್ದಕ್ಕೂ ಕಾಯ್ದುಕೊಳ್ಳಲು ಪ್ರಯತ್ನಿಸಿದ್ದೇನೆ. ಜನರಿಗೆ ಬಸವಣ್ಣನವರ ಹೋರಾಟವನ್ನು ತೋರಿಸಿಕೊಡಬೇಕು, ಸಿದ್ಧಾಂತಗಳನ್ನು ಕೇಳಿಸಿಕೊಡಬೇಕು- ಎಂಬ ಉದ್ದೇಶ ಹೊಂದಿರುವ ಈ ನಾಟಕದ ಪ್ರದರ್ಶನ ಪ್ರಸಂಗದಲ್ಲಿ ಅಭಿನಯದಷ್ಟೇ ಮಾತುಗಳಿಗೂ ಮಹತ್ವಕೊಡಬೇಕು. ಅಲ್ಲಲ್ಲಿ ಈ ನಾಟಕವನ್ನು ಪ್ರಾದೇಶಿಕ ಆಡುಮಾತಿಗೆ ತಿರುಗಿಸಿಕೊಳ್ಳಬೇಕು. ಆಗಾಗ ಪ್ರವಾಹಧ್ವನಿ ಹಿನ್ನೆಲೆಯಾಗಿ ಕೆಲಸ ಮಾಡಬೇಕು. ಸಶಬ್ದವಾಹಿನಿ, ಅಶುದ್ಧನೀರು-ಶುದ್ಧನೀರು, ಸ್ಥಗಿತಜಲ-ಚಲನಶೀಲಜಲ, ಅನೇಕ ಪ್ರವಾಹ-ಏಕೀಕೃತ ಪ್ರವಾಹ-ಇತ್ಯಾದಿ ಪ್ರವಾಹದೃಶ್ಯಗಳನ್ನು ಸಂದರ್ಭೋಚಿತವಾಗಿ, ಸಾಂಕೇತಿಕವಾಗಿ ಬಳಸಿಕೊಳ್ಳಬೇಕು. ಜೊತೆಗೆ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಧ್ಯೇಯವಾಕ್ಯ ಮತ್ತೆ ಮತ್ತೆ ಕೇಳಿಸುತ್ತ ಹೋಗಬೇಕು.

ಈ ನಾಟಕವನ್ನು ಬರೆದವನು ನಾನಾಗಿದ್ದರೂ ಬರೆಸಿಕೊಂಡವನು ನನ್ನೊಳಗಿರುವ ಬಸವಣ್ಣ. ಅವನನ್ನು ಕುರಿತು ನಾಟಕ ಬರೆಯಬೇಕೆಂದಿದ್ದ ನನ್ನ ಬಹುದಿನಗಳ 'ಬಯಕೆ' ಬರೆವಣಿಗೆಗೆ ಇಳಿಯಲು ಹವಣಿಸಿತು. ಅದರ ಫಲ, ಈ ನಾಟಕ.

ಚಂದ್ರಶೇಖರ ಪಾಟೀಲ, ಗಿರಡ್ಡಿ, ಪಟ್ಟಣಶೆಟ್ಟಿ, ಕೋತಿನ, ತೋಂಟದಾರ್ಯ, ಮುರಿಗೆಪ್ಪ, ಏಣಗಿ ನಟರಾಜ, ಮೋಹನ ನಾಗಮ್ಮನವರ, ಬಂಡು ಕುಲಕರ್ಣಿ, ಮಳಿಮಠ, ಸಮುದಾಯದ ಗಂಗಾಧರಸ್ವಾಮಿ, ಲಿಂಗದೇವರು ಹಳೆಮನಿ ಮೊದಲಾದವರು ಓದು-ವಾದಗಳ ಮೂಲಕ ಈ ನಾಟಕದ ಉತ್ತಮಿಕೆಗೆ ಕಾರಣರಾಗಿದ್ದಾರೆ. ತೋಂಟದಾರ್ಯ, ಮುರಿಗೆಪ್ಪ ತಮ್ಮ 'ಸಹೃದಯ ಸಾಂಸ್ಕೃತಿಕ ಅಕಾಡೆಮಿ'ಯ ಮೂಲಕ ಇದನ್ನು ಪ್ರಕಟಿಸಿದ್ದಾರೆ. ಈ ಗೆಳೆಯರಿಗೆ ಕೃತಜ್ಞ.

**ಧಾರವಾಡ** **-ಎಂ.ಎಂ. ಕಲಬುರ್ಗಿ**

## ದ್ವಿತೀಯ ಆವೃತ್ತಿ

೧೯೫೫ರಲ್ಲಿ ಪ್ರಕಟವಾದ ಈ ನಾಟಕದ ಓದುವ ಪಠ್ಯವನ್ನು ಈಗ ಕೇಳುವ ಪಠ್ಯಕ್ಕೆ ಅಳವಡಿಸಲಾಗಿದೆ. ಮತ್ತು ಹೊಸ ಶೋಧದ ಬೆಳಕಿನಲ್ಲಿ ಬಸವಣ್ಣನು ಮೂಲತಃ ಆಗಮಿಕ ಶೈವಬ್ರಾಹ್ಮಣನೆಂದೂ ಅವನು ಜನ್ನಿವಾರ ಹರಿದುಕೊಂಡು ಜಾತಿಭೇದ-ಲಿಂಗಭೇದ ನಿರಾಕರಣೆಯ ನಾಥಶೈವದ ಕೇಂದ್ರವಾಗಿದ್ದ ಸಂಗಮನಾಥನ ಕಪ್ಪಡಿಗೆ ಹೋದನೆಂದೂ ಆ ಸಂದರ್ಭದಲ್ಲಿ ಆ ಕೇಂದ್ರವನ್ನು ಆಗಮಿಕ ಶೈವರು ಆಕ್ರಮಿಸಲಾರಂಭಿಸಿ, ಕೆಲದಿನಗಳಲ್ಲಿ ಕೈವಶಮಾಡಿಕೊಂಡರೆಂದೂ ಪ್ರತಿಪಾದಿಸಲಾಗಿದೆ. ಪ್ರಥಮ ಆವೃತ್ತಿಯಲ್ಲಿದ್ದ ತಂದೆಯ ಶವಸಂಸ್ಕಾರ ಪ್ರಸಂಗ ಕೈಬಿಡಲಾಗಿದೆ.ಅಲ್ಲಲ್ಲಿ ಸಣ್ಣ ಪುಟ್ಟ ತಿದ್ದುಪಡಿ ಮಾಡಲಾಗಿದೆ.

**ಧಾರವಾಡ** **-ಎಂ.ಎಂ. ಕಲಬುರ್ಗಿ**

## ದೃಶ್ಯ -೧

(ಆಗಮಿಕ ಶೈವಬ್ರಾಹ್ಮಣ ಮತ್ತು ಬಾಗೇವಾಡಿಯ ಪುರವರಾಧೀಶ್ವರನಾದ ಮಾದರಸನ ಭವ್ಯ, ಸಾಂಪ್ರದಾಯಿಕ ಮನೆ. ಒಳಗೆ "ಯಜ್ಞೋಪವೀತಂ ಪರಮಂ ಪವಿತ್ರಂ! ಪ್ರಜಾಪತೇಃ ಯತ್ಸಹಜಂ ಪುರಸ್ತಾತ್" ಮಂತ್ರಘೋಷ ಮತ್ತು ಪರಿವಾರದವರ ಸಡಗರದ ಮಧ್ಯೆ ಒಮ್ಮೆಲೇ ಗೊಂದಲ, ಗದ್ದಲ. "ಬಸವಣ್ಣಾ, ಬಸವಣ್ಣಾ ಜನಿವಾರ ಹರಿಬ್ಯಾಡ, ಜನಿವಾರ ಹರಿಬ್ಯಾಡ, ಹರಿಬ್ಯಾಡ. ಅದು ಪವಿತ್ರ ಯಜ್ಞೋಪವೀತ..." ಎಂಬ ಧ್ವನಿ ಪದೇ ಪದೇ ಕೇಳಿಸುತ್ತದೆ. ೧೫ ವರ್ಷ ವಯಸ್ಸಿನ ಬಸವಣ್ಣ ಜನ್ನಿವಾರವನ್ನು ಹರಿದುಕೊಳ್ಳಲು ಕೈಗೆ ಸುತ್ತಿಹಿಡಿದು, ತಪ್ಪಿಸಿಕೊಳ್ಳಲು ಮನೆಯಲ್ಲಿ ಓಡಾಡುತ್ತಿದ್ದಾನೆ. ಬೆನ್ನಟ್ಟಿ ಅವನನ್ನು ಹಿಡಿದ ಇಬ್ಬರು ಆಗಮಿಕ ಶೈವ ಪುರೋಹಿತರು ಎಡಬಲದಲ್ಲಿ ಅವನ ತೋಳು ಹಿಡಿದು ಅಡ್ಡಿಪಡಿಸುತ್ತಲಿದ್ದಾರೆ. ಅವರು ಬಸವಣ್ಣನನ್ನು ಹಿಂದೆ ಎಳೆಯುವ ಸ್ಥಿತಿಯಲ್ಲಿ, ಹೊಸ್ತಿಲ ಒಳಮಗ್ಗುಲಿಗೆ ಕಾಲುಕೊಟ್ಟು ನಿಂತಿದ್ದಾರೆ. ಅವರನ್ನು ಎಳೆದುಕೊಂಡು ಬಂದ ಬಸವಣ್ಣ, ಹೊಸ್ತಿಲ ದಾಟಿದ್ದಾನೆ. ಚಟ್ಟನೇ ಜನ್ನಿವಾರ ಹರಿದುಕೊಳ್ಳುವುದರೊಂದಿಗೆ ದೃಶ್ಯ ತೆರೆದುಕೊಳ್ಳುತ್ತದೆ. ಹರಿದುಕೊಂಡ ಜನ್ನಿವಾರ ಬಸವಣ್ಣನ ಮೈಮೇಲೆ ನೇತಾಡುತ್ತಿದೆ).

**ಬಸವಣ್ಣ :** ಬ್ಯಾಡ, ಈ ಜನಿವಾರ ನನಗ ಬ್ಯಾಡ. ನಾನು ಮಾನವ ಆಗಬೇಕಾಗ್ಯಾದ. ಈ ಜನಿವಾರ ಬಿಗದು ಆಗಮಿಕ ಶೈವಬ್ರಾಹ್ಮಣ ಮಾಡಬ್ಯಾಡರಿ. ಧರ್ಮದ ದಾರ್‍ಯಾಗ ನಡೀಬೇಕಾಗ್ಯಾದ, ನನಗ ಈ ದಾರ ಕಟ್ಟಿ ಕರ್ಮದ ಕೆಸರಿಗಿ ತಳ್ಳಬ್ಯಾಡರಿ, ತಳ್ಳಬ್ಯಾಡರಿ. ಕೊರಳಿಗಿ ಉರುಳ ಹಾಕಬ್ಯಾಡ್ರಿ, ಉರುಳ ಹಾಕಬ್ಯಾಡ್ರಿ. (ಗದ್ದಲ ಕೇಳಿ ಕೇರಿಯ ಆಗಮಿಕ ಶೈವಬ್ರಾಹ್ಮಣರು ಓಡಿಬರುತ್ತಾರೆ).

**ಬ್ರಾಹ್ಮಣರು :** ಏನು? ಯಾಕ ಗದ್ದಲ? ಇಷ್ಟ್ಯಾಕ ಗೊಂದಲ ?

**ಪುರೋಹಿತ ೧ :** ನೋಡ್ರಿ, ಇವತ್ತ ನೂಲಹುಣ್ಣಿವಿ. ಆಗಮಿಕ ಶೈವಬ್ರಾಹ್ಮಣರು ಹೊಸ ಜನಿವಾರ ಹಾಕಿಕೊಳ್ಳೂ ವಾರ್ಷಿಕ ಸಮಾರಂಭ. ಹೊಸ ಜನಿವಾರ ಯಾಕ? ಹಳಿ ಜನಿವಾರನೂ ಬ್ಯಾಡ ಅಂತ ಹರದ ಹಾಕ್ಯಾನ. (ಬಸವಣ್ಣನನ್ನು ಉದ್ದೇಶಿಸಿ) ಬಸವಣ್ಣಾ, ಆರು ವರ್ಷದಿಂದ ಕಟಗೊಂಡು ಬಂದ ಈ ಜನಿವಾರ ಧಿಕ್ಕರಿಸಬ್ಯಾಡ, ಸಂಪ್ರದಾಯದ ಗೆರಿ ದಾಟಬ್ಯಾಡ (ಎನ್ನುತ್ತ ಹೊಸ್ತಿಲ ಒಳಗೆ ಎಳೆಯುತ್ತಾರೆ).

**ಬಸವಣ್ಣ :** ದಾಟತೀನಿ, ದಾಟತೀನಿ (ಎನ್ನುತ್ತ ಹೊಸ್ತಿಲ ದಾಟಿ, ಇಬ್ಬರನ್ನೂ ಎಳೆದುಕೊಂಡು ಹೊರಬರುತ್ತಾನೆ). ಕಳೆದ ಆರು ವರ್ಷಗಳಿಂದ ಈ ಜನಿವಾರ ಅರ್ಥಮಾಡಿಕೊಂಡೀನಿ. ಇದು ನನಗ ಆಗಮಿಕ ಶೈವಬ್ರಾಹ್ಮಣ ಸಂಸ್ಕೃತಿಗೆ ಬಂಧಿಸೂ ದಾರ ಅನಸ್ಯಾದ. ಇದನ್ನ ಕಟಗೊಂಡಾಗಿನಿಂದ ಉಸಿರ ಕಟ್ಟಿದಂತಾಗಿ, ನನ್ನ ಬೆಳವಣಿಗೀನs ನಿಂತುಹೋಗ್ಯಾದ.

**ಪುರೋಹಿತ ೨:** ಇಲ್ಲ. ಇದು ನಮ್ಮ ಜ್ಞಾನ ಬೆಳಸ್ತದ.

**ಬಸವಣ್ಣ :** ಇಲ್ಲ, ಬೆಳಸೂದಿಲ್ಲ. ಈ ಮಡಿ, ಈ ಮೈಲಿಗಿ, ಈ ಹಿಂಸೆ, ಈ ಸ್ವಸ್ತಿವಾಚನ, ಈ ಮಂತ್ರಪಠಣ - ಮೊದಲಾದ ನಿತ್ಯಕರ್ಮಗಳನ್ನ ಕುರುಡನ ಹಾಂಗ ಅನುಸರಿಸಿ, ನನ್ನ ಜ್ಞಾನ ಬೆಳಿಯೂದಿರಲಿ, ನನ್ನ ಸೃಜನಶೀಲತೀನs ಕಳಕೊಂಡೀನಿ.

**ಪುರೋಹಿತ ೧ :** ಇಲ್ಲ. ಇವುಗಳಿಂದ ಏನೂ ಕಳಕೊಳ್ಳೂದಿಲ್ಲ, ಎಲ್ಲಾ ಗಳಿಸಿಕೊಳ್ತೀವಿ.

ವೈದಿಕ ಬ್ರಾಹ್ಮಣರ ಹಾಂಗ ಭೂಮಿ ಮ್ಯಾಲಿನ ದೇವತೆ ಎಂಬೂ ಪ್ರತಿಷ್ಠೆ ಕೂಡ ನಾವು ಗಳಿಸಿಕೊಳ್ತೀವಿ.

**ಬಸವಣ್ಣ :** ಹೌದು, ಪ್ರತಿಷ್ಠೆ ಗಳಿಸಿಕೊಳ್ತೀವಿ, ಸಾಧನೆಯಿಂದಲ್ಲ. ಜಾತಿಭೇದ ಪದ್ಧತಿಯಿಂದ. ಈ ಜಾತಿಭೇದ ಪದ್ಧತಿ ಸಮಾಜವನ್ನು ಸೀಳತದ, ಪೂರ್ವಕರ್ಮ-ಪುನರ್ಜನ್ಮ ಸಿದ್ಧಾಂತ ಅದನ್ನ ಗಟ್ಟಿಗೊಳಿಸ್ತದ.

**ಪುರೋಹಿತ ೨ :** ಅವಿವೇಕಿ, ನಿನಗೇನು ಗೊತ್ತು. ಈ ಜಾತಿಪ್ರತ್ಯೇಕತೆಯಿಂದ ನಮ್ಮ ಆಗಮಿಕ ಬ್ರಾಹ್ಮಣ ಸಮಾಜಕ್ಕ ಘನತೆ -ಗೌರವ ಪ್ರಾಪ್ತ ಆಗ್ಯಾದ.

**ಬಸವಣ್ಣ :** ಇಲ್ಲ. ಈ ಪ್ರತ್ಯೇಕತೆಯಿಂದ ವೈದಿಕ ಬ್ರಾಹ್ಮಣ ಸಮಾಜದ ಹಾಂಗ ಆಗಮಿಕ ಬ್ರಾಹ್ಮಣ ಸಮಾಜವೂ ಸೃಜನಶೀಲತೆ ಕಳಕೊಂಡಾದ. ಸೃಜನಶೀಲತೆ ಬತ್ತಿಹೋಗಿ ಯಾಂತ್ರಿಕತೆ ಆರಂಭವಾಗೂದೇ ಜನಿವಾರ ಧಾರಣೆಯ ದಿನದಿಂದ. ಅದಕ್ಕs ನಾನು ಈ ದಾರ ಕಟ್ಟಗೊಳ್ಳಲಾರೆ.

**ಪುರೋಹಿತ ೧ :** ನಿನ್ನ ತಿಳುವಳಿಕೆ ತಪ್ಪು. ಇದು ದಾರ ಅಲ್ಲ. ಉದ್ಧಾರದ ಸಾಧನ.

**ಬಸವಣ್ಣ :** ಉದ್ಧಾರದ ಸಾಧನ ? ಹಾಂಗಾದರ ಶೂದ್ರರ ಉದ್ಧಾರ, ಸ್ತ್ರೀಯರ ಉದ್ಧಾರ ಈ ಜನಿವಾರದಿಂದ ಸಾಧ್ಯವೇ?

**ಪುರೋಹಿತ ೨ :** (ಅಪ್ರತಿಭನಾಗಿ) ಇಲ್ಲ, ಅವರು ಅಪವಿತ್ರರು, ಯಜ್ಞೋಪವೀತ ಅವರಿಗಿ ಕೊಡಬಾರದು.

**ಬಸವಣ್ಣ :** ಏನು? ಆಗಮಿಕ ಬ್ರಾಹ್ಮಣರು ಪವಿತ್ರ, ಶೂದ್ರರು ಅಪವಿತ್ರ? ಗಂಡಸರು ಪವಿತ್ರ, ಹೆಂಗಸರು ಅಪವಿತ್ರ? ಯಾರ ಹೇಳಿದರು? ನಾನು ಪವಿತ್ರ, ನನ್ನ ತಂಗಿ ನಾಗಲಾಂಬೆ ಅಪವಿತ್ರ? ಅದಕ್ಕs ನಾ ಹೇಳೂದು; ಈ ಜನಿವಾರ ದಾರ ಅಷ್ಟs ಅಲ್ಲ, ಬದುಕಿನ ಬಗ್ಗೆ ಒಂದು ಅನುದಾರ ಸೂತ್ರ.



**ಮಾದರಸ :** (ಸಂತಯಿಸುತ್ತ) ಬಸವಾ, ಪುರೋಹಿತರ ಕೂಡ ವಾದಿಸಬಾರದು.ಇವರು ನಮಗಿಂತ ದೊಡ್ಡವರು. ವೇದಾಗಮ ವಿದ್ವಾಂಸರು. ಧರ್ಮಶಾಸ್ತ್ರದ ದಾರ್‍ಯಾಗ ಸಮಾಜ ಮುನ್ನಡೆಸವ್ರು.

**ಬಸವಣ್ಣ :** ಅಪ್ಪಾ, ಇವರು ಸಮಾಜವನ್ನು ಮುನ್ನಡೆಸವ್ರಲ್ಲ, ಹಿನ್ನಡೆಸವ್ರು. ಇವರು ದೊಡ್ಡವರಿರಬಹುದು. ಸತ್ಯ ಇವರಿಗಿಂತ ದೊಡ್ಡದು. ಇವರ ಧರ್ಮಶಾಸ್ತ್ರಕ್ಕಿಂತ ದೊಡ್ಡದು. ಆ ಸತ್ಯಕ್ಕಾಗಿ ನನ್ನ ಆತ್ಮ ಹಂಬಲಿಸತಾ ಇದೆ. ಕಂಡೂ ಕಂಡು ಸತ್ಯ ಕೈಬಿಡಲಾರೆ. ನನ್ನ ಕೈ ಬಿಡ್ರಿ. (ಒಂದು ಕೈ ಬಿಡಿಸಿಕೊಳ್ಳುತ್ತಾನೆ).

**ಪುರೋಹಿತ ೧ :** (ಒಂದು ಕೈಹಿಡಿದು) ಬಿಡೂದಿಲ್ಲ.

**ಬಸವಣ್ಣ :** ಬಿಡೂದಿಲ್ಲ ? ಹೀಂಗs ನನ್ನನ್ನು ಎಷ್ಟ ದಿನ ಹಿಡಿತೀರಿ ? ಹಿಂದಕ ಎಳೀತೀರಿ? ನೀವು ಹಿಂದ ಎಳೆದಷ್ಟೂ ಮುಂದ ಹೋಗೂ ಹಂಬಲ ನನ್ನಲ್ಲಿ ಹೆಚ್ಚತದ.

**ಮಾದಲಾಂಬೆ :** ಮಗs ನನ ಮಾತ ಕೇಳು. ನೀನು ಹೇಳೂದು ನಿಜವಿರಬಹುದು. ವಾಸ್ತವ ಬ್ಯಾರೆ, ಆದರ್ಶ ಬ್ಯಾರೆ. ನಾವು ಈ ಊರಿನ ಒಂದು ಭಾಗವಾಗಿರುವ 'ಪುರ'ದ ಒಡೆಯರಿರಬಹುದು. ಆದರೆ ಈ ಅಗ್ರಹಾರದ ಭಾಗ, ಸಂಪ್ರದಾಯದ ಭಾಗ. ಅದರ ರೂಢಿಗಳನ್ನು ಒಪ್ಪದಿದ್ದರ ಹ್ಯಾಂಗ? ನಾಳೆ ಊರಿನ ಅಗ್ರಹಾರದ ಮಹಾಸಭೆಗೆ ನಾವು ಏನು ಹೇಳೂದು ?

**ಬಸವಣ್ಣ :** ಅಗ್ರಹಾರ? ಯಾವುದು ಅಗ್ರಹಾರ? ಯಾರು ಮಾಡಿದರು ಈ ಭೇದನೀತಿಯ ಅಗ್ರಹಾರವನ್ನು? ಇದರ ಭಾಗವಾಗಿ ಬದುಕಿ, ನಾನು ವ್ಯಕ್ತಿತ್ವ ಮಲಿನಗೊಳಿಸಿಕೊಳ್ಳಲಾರೆ. ಈ ಅಗ್ರಹಾರ ಮಹಾಸಭೆಯ ನೀತಿ ನಿಯಮ ದಾಟತೀನಿ, ಸಮಾಜ ಧಿಕ್ಕರಿಸತೀನಿ.

**ಪುರೋಹಿತ :** ಸಮಾಜ ಧಿಕ್ಕರಿಸೂ ಉದ್ಧಟತನ ಮಾತಾಡಬ್ಯಾಡ, ಬಹಿಷ್ಕಾರಕ್ಕೆ ಗುರಿಯಾಗಬೇಕಾದೀತು.

**ಬಸವಣ್ಣ :** ನಿಮ್ಮ ಸಮಾಜವೇ ಬ್ಯಾಡ ಅಂತ ನಾನೇ ಹೇಳತಿರುವಾಗ, ನೀವು ಬಹಿಷ್ಕಾರ ಹಾಕೂದು ಎಲ್ಲಿ ಬಂತು ? ನಿಮ್ಮ ನೀರ ಬ್ಯಾಡ, ಬೆಂಕಿ ಬ್ಯಾಡ, ಜನಿವಾರವೂ ಬ್ಯಾಡ, ಹಿಡೀರಿ (ಬಿಡಿಸಿಕೊಂಡ ಕೈಯಿಂದ ಜನಿವಾರವನ್ನು ಮುದ್ದಿ ಮಾಡಿ, ಪುರೋಹಿತರ ಕೈಗೆ ಕೊಡಲು ಕೈಚಾಚುತ್ತಾನೆ).

**ಬಲದೇವ :** (ಬೆನ್ನ ಮೇಲೆ ಕೈಯಾಡಿಸುತ್ತ) ಬಸವಣ್ಣಾ, ಸಮಾಜ ಸಿಟ್ಟಾಗೂ ಹಾಂಗ ಮಾಡಬ್ಯಾಡ. ಆ ಸಿಟ್ಟಿನ ಬೆಂಕಿ ನಿನ್ನೊಬ್ಬನನ್ನs ಅಲ್ಲ, ನಮ್ಮೆಲ್ಲರನೂ ಸುಟ್ಟು ಹಾಕ್ತದ.

**ಬಸವಣ್ಣ** : ನೀವು ಹೇಳೂದೆಲ್ಲ ನಿಜ. **ಇವರ ಬೆಂಕ್ಯಾಗ ಸುಟುಗೊಂಡು ಬೆಳಕ ಹುಟ್ಟಿಸಬೇಕಾಗ್ಯಾದ. ನಾನು ಸತ್ತು ಸತ್ಯ ಬದುಕಿಸಬೇಕಾಗ್ಯಾದ.** ಕೈ ಬಿಡಿರಿ, ಬಿಡಿರಿ (ಬಸವಣ್ಣ ಇನ್ನೊಂದು ಕೈಯನ್ನೂ ಬಿಡಿಸಿಕೊಂಡು ಜನಿವಾರ ಎಸೆದು ಓಡಿಹೋಗುತ್ತಾನೆ).

## ದೃಶ್ಯ -೨

(ಮಾದರಸರ ಮನೆಯ ಪಡಸಾಲೆ, ಮಾದರಸ ಮಾದಲಾಂಬಿಕೆ, ಬಲದೇವ ಮೊದಲಾದ ಪರಿವಾರದ ಜನ ಅಲ್ಲಲ್ಲಿ ಕುಳಿತಿದ್ದಾರೆ. ಚಿಂತೆ ಆವರಿಸಿದೆ).

**ಬಲದೇವ** : ಮಾವ ಹೀಂಗs ಎಷ್ಟು ದಿನ ಚಿಂತಿ ಮಾಡ್ತೀರಿ? ನಾನೂ ಹೇಳಿ ನೋಡ್ದೆ. ಹುಡುಗ ಕೇಳತಿಲ್ಲ. ಈ ಆಗಮ ಸಂಸ್ಕೃತಿಗಿಂತ ನಾಥಪಂಥದ ಸಂಸ್ಕೃತಿ ಉದಾರ ಅಂತ ವಾದಸ್ತಾನ.

**ಮಾದಲಾಂಬೆ** : (ದುಃಖಿಸುತ್ತ) ಬರೀ ವಾದಿಸೂದಲ್ಲ. ಮನಿ ಬಿಟ್ಟು ನಾಥಯೋಗಿಗಳ ಸಂಗಮನಾಥನ ಕಪ್ಪಡಿ ಸಂಗಮಕ್ಕೆ ಹೋಗೂ ಸಿದ್ಧತ್ಯಾಗ ಅದಾನ (ಅಷ್ಟರಲ್ಲಿ ಬಸವಣ್ಣ ಬರುತ್ತಾನೆ).

**ಬಸವಣ್ಣ** : ಅಪ್ಪಾ, ನನ್ನs ಬಿಟ್ಟುಬಿಡ್ರಿ. ನನ್ನಿಂದ ನಿಮಗೂ ತೊಂದರೆ. ಆಗಮಿಕ ಶೈವ ಬ್ರಾಹ್ಮಣರಾದ ನೀವು ವೈದಿಕ ಶೈವಬ್ರಾಹ್ಮಣರ ಭ್ರಮೆಯಲ್ಲಿರುವಿರಿ. ನಿಮ್ಮ ದೇವಾಲಯ ಸಂಸ್ಕೃತಿಯ ಮೇಲೆ ಯಜ್ಞಸಂಸ್ಕೃತಿ ಸವಾರಿ ಮಾಡಿದೆ. ನೀವೂ ಇದನ್ನು ಒಪ್ಪಿ ಭಕ್ತಿ-ಕರ್ಮಗಳೆಂಬ ಉಭಯಮಾರ್ಗದ ಗೊಂದಲದಲ್ಲಿರುವಿರಿ. ಈ ಕರ್ಮ, ಈ ಜಾತಿ, ಈ ಮಡಿ, ಈ ಮೈಲಿಗಿ -ಇವುಗಳ ನಡುವ ನಾನು ಬದುಕಲಾರೆ. ಪುರೋಹಿತರ ಹಿಡಿತದಾಗ ನಾನು ಬಾಳಲಾರೆ. ಊರು ಬಿಟ್ಟು ಹೋಗ್ತೀನಿ. ಆಶೀರ್ವದಿಸಿರಿ.

**ಮಾದಲಾಂಬೆ** : ಹೋಗೂದು ಎಲ್ಲಿಗಿ? ಏನು ಹುಚ್ಚು. ನಿನ್ನ ಮನಸ್ಸಿನ್ಯಾಗಿರೂದಾದರೂ ಏನು ?

**ಬಸವಣ್ಣ** : ಅಮ್ಮಾ, ನನ್ನ ಉತ್ತರ ನಿಮ್ಮನ್ನ ಇನ್ನೂ ಅಸಮಾಧಾನಕ್ಕ ಗುರಿ ಮಾಡ್ತಾದ. ನನ್ನ ಪಾಲಿಗಿ ನನ್ನ ಬಿಟ್ಟುಬಿಡ್ರಿ.

**ಬಲದೇವ** : ಬಿಟ್ಟು ಬಿಡ್ತೀವಿ, ಬಸವಣ್ಣಾ. ಆದರ ಈ ಅಗ್ರಹಾರದ ಕಟ್ಟಳೆ ಮುರಿದು ಬದುಕೂದು ತುಂಬ ಕಷ್ಟ. ಮುರಿಬಾರ್ದು . . . .

**ಬಸವಣ್ಣ** : ಮುರೀತೀನಿ (ಸಿಟ್ಟಿನಿಂದ ಕೈಯಲ್ಲಿಯ ಕೋಲನ್ನು ಮುರಿದು ಒಗೆಯುತ್ತ) ಈ ಆಗಮಿಕ ವೈದಿಕ ಎರಡೂ ಬ್ರಾಹ್ಮಣ ಸಂಸ್ಕೃತಿ ಮುರಿದು ಬದುಕಿ ತೋರಸತೀನಿ. ಇದು ನನ್ನ ಕೊನೆ ನಿರ್ಧಾರ.



**ಮಾದಲಾಂಬೆ** : ನೀನು ಮೊದಲಿನಿಂದಲೂ ಹಟಮಾರಿ. ಯಾರ ಮಾತೂ ಕೇಳವ ಅಲ್ಲ. ನಿನ್ನ ವಿವೇಕ ಹೇಳಿಧಾಂಗ ನಡ್ಯಾವ. ನೀ ಹ್ವಾದರ ನಿನ್ನ ಹೆಂಡತಿ ಗಂಗಾಂಬೆಯ ಗತಿ ?

**ಬಸವಣ್ಣ** : ಇದೇನು ದೊಡ್ಡ ಸಮಸ್ಯೆ ? ಅವಳು ಇನ್ನೂ ಸಣ್ಣವಳು. ಕೆಲವು ದಿನ ತವರ ಮನ್ಯಾಗ ಇರಲಿ. (ಅಷ್ಟರಲ್ಲಿ ಮನೆಯ ಮುಂದಿನ ರಸ್ತೆಯ ಮೇಲೆ ಡಂಗುರದವನ ಪ್ರವೇಶ).

**ಡಂಗುರದವ** : ಕೇಳ್ರಿ, ಕೇಳ್ರಿ ಎಲ್ಲಾ ಬ್ರಾಹ್ಮಣರು ಕೇಳ್ರಿ. ಜನಿವಾರ ಹರಿದು ಹಾಕಿದ ಬಸವಣ್ಣನ ಬಗ್ಗೆ ಅಗ್ರಹಾರ ಮಂಟಪದಾಗ ಇವತ್ತ ಸಂಜೆ ಸಭೆ ಅದ. ಎಲ್ಲರೂ ಬರಬೇಕು. ಎಲ್ಲರೂ ಬರಬೇಕು (ಎಂದು ಸಾರುತ್ತ ಹೋಗುತ್ತಾನೆ. ಸೇವಕನ ಪ್ರವೇಶ).

**ಸೇವಕ** : ಬಸವಣ್ಣ ಜನಿವಾರ ಹರಕೊಂಡ ಬಗ್ಗೆ ಅಗ್ರಹಾರಮಂಟಪದಾಗ ಇವತ್ತ ಸಂಜೆ ಮತ್ತ ಸಭೆ ಇಟಗೊಂಡಾರ. ನೀವೆಲ್ಲ ಬರಬೇಕಂತ. ಈ ಮೊದಲಿನ ಹಾಂಗ ತಪ್ಪಿಸಬಾರದಂತ ವೇದಭಟ್ಟರು ತಿಳಿಸ್ಯಾರ. ಇದು ಮೂರನೆಯ ಸಲ ಕರಿಯೋದು; ಇದೇ ಕೊನೆಯ ಕರೆ ಅಂತ ಹೇಳ್ಯಾರ.

**ಮಾದರಸ** : ಬಲದೇವಾ, ಏನು ಮಾಡೂದು?

**ಬಲದೇವ** : ಇದು ಕೊನೆಯ ಕರೆ. ನಾವು ಹೋಗದಿದ್ರ ಅವರೇ ನಿರ್ಣಯ ತಗೋತಾರ. ಹೋಗೂದೇ ಒಳ್ಳೇದು. ನಮ್ಮ ತೊಂದರೆ ಹೇಳಿ ನೋಡೋಣ.

**ಬಸವಣ್ಣ** : ನಾ ಬರೂದಿಲ್ಲ, ತ್ಯಾಳಿನ ಮುಂದ ಕುರಿ ನ್ಯಾಯ ವಿಚಾರಣೆ.

**ಮಾದರಸ** : ಬಿಡು, ನಾವೆಲ್ಲ ಹೋಗತೀವಿ. (ಸೇವಕನಿಗೆ) ಆಗಲಿ ಬರತೀವಿ. (ಸೇವಕ ಹೋಗುತ್ತಾನೆ).

**ಮಾದಲಾಂಬೆ** : ಹೊತ್ತಾತು ನಡೀರಿ. ಊಟಕ್ಕ ಏಳ್ರಿ (ಎಲ್ಲರೂ ಎದ್ದು ಒಳಗೆ ಹೋಗುವರು).

## ದೃಶ್ಯ - ೩

(ಅಗ್ರಹಾರದ ಸಭಾಮಂಟಪ, ಬ್ರಾಹ್ಮಣರ ಸಭೆ)

**ವೇದಭಟ್ಟ** : ಮಾದರಸರು ಇವತ್ತಿನ ಸಭೆಗೆ ಬರತೀನಂತ ಹೇಳಿಕಳಿಸ್ಯಾರ. ಅವರ ಮಗ ಧರ್ಮಬಾಹಿರ ಬಸವಣ್ಣನ ಬಗ್ಗೆ ಚರ್ಚಿಸಿ, ನಾವು ತೀರ್ಪು ತಗೋಬೇಕು. ಬಾಗೇವಾಡಿ ಅಗ್ರಹಾರ ಅಂದರ ದಕ್ಷಿಣಕಾಶಿ. ನಾವು ಐದುನೂರು ಮಹಾಜನರು ಇಂದಿನ ತನಕ ಮನುಸ್ಮೃತಿ ಹೇಳಿದ್ಹಂಗ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಸಮಾಜ ಮುನ್ನಡಿಸ್ತಾ ಬಂದೀವಿ. ಇಂದಿನ ತನಕ ಯಾರೂ ಇದನ್ನ ಮೀರಲಿಲ್ಲ. ಹೀಗಿದ್ದೂ, ಕಳೆದ ವಾರ ಮಾದರಸರ ಮಗ ಜನಿವಾರ ಹರಿದುಹಾಕಿ, ಮನುಸ್ಮೃತಿಗೆ ಧಿಕ್ಕಾರ ಹೇಳದ.

**ಪುರೋಹಿತ ೧ :** ನಮ್ಮೆಲ್ಲರಿಗಿ ಮನುಸ್ಮೃತಿನಃ ಅಂತಿಮ ಪ್ರಮಾಣ. (ಕೈಯಲ್ಲಿರುವ ಗ್ರಂಥವನ್ನು ಎತ್ತಿ ತೋರಿಸುತ್ತ) ಇದನ್ನು ಹರಿಬ್ರಹ್ಮರೂ ಮೀರೂ ಹಾಂಗಿಲ್ಲ. (ಅಷ್ಟರಲ್ಲಿ ದುಗುಡ ಹೊತ್ತ ಮಾದರಸ, ಬಲದೇವ ಪ್ರವೇಶಿಸುತ್ತಾರೆ) .

**ಮಾದರಸ :** ನಮಸ್ಕಾರ ಮಹಾಜನರೇ.

**ಮಹಾಜನರು :** ನಮಸ್ಕಾರ, ಕೂತಕೊಳ್ರಿ. (ಮಾದರಸ ಮತ್ತು ಬಲದೇವ ವಿಚಾರಣಾ ಸ್ಥಾನದಲ್ಲಿ ಕುಳಿತುಕೊಳ್ಳುತ್ತಾರೆ).

**ಮಾದರಸ :** ವೇದಭಟ್ಟರೇ, ನಾನು ತಮ್ಮಲ್ಲಿ ಒಂದು ಉಪಕಾರ ಬೇಡಲಾಕ ಬಂದೀನಿ. ನಿಮಗ ಗೊತ್ತಿರೂ ಹಾಂಗ, ಮಂಡಿಗೆ ಗ್ರಾಮದಿಂದ ಬಾಗೇವಾಡಿಗೆ ಬಂದ ಆಗಮಿಕ ಶೈವ ಬ್ರಾಹ್ಮಣರಾದ ನಮ್ಮದು ಪುರವರಾಧೀಶ್ವರ ಮನೆತನ. ಆದರೂ, ಅದು ಅಗ್ರಹಾರದ ಒಂದು ಭಾಗ ಅಂತ ಈ ವರೆಗೂ ಭಾವಿಸ್ತ ಬಂದೀವಿ.

**ವೇದಭಟ್ಟ :** (ಮಧ್ಯೆ ಬಾಯಿ ಹಾಕಿ) ಅದೆಲ್ಲ ಪುರಾಣ ಬಿಚ್ಚಬ್ಯಾಡ್ರಿ. ನೇರವಾಗಿ ವಿಷಯಕ್ಕ ಬರ್ರಿ.

**ಮಾದರಸ :** ವಿಷಯ ನಿಮಗ ತಿಳಿದೇ ಅದ. ಮಗ ನನ್ನ ಮಾತ ಕೇಳತಿಲ್ಲ. ನಾವೆಲ್ಲ ಹೇಳಿ ನೋಡಿದೆವು. ಕೆಲವು ದಿನ ತಡೀರಿ, ಅಷ್ಟರಾಗ ದಾರಿಗಿ ಬರಬಹುದು. (ಮಹಾಜನರು ಒಟ್ಟಾಗಿ "ಇಲ್ಲ, ಇಲ್ಲ, ಸಾಧ್ಯವಿಲ್ಲ" ಎಂದು ಗದ್ದಲ ಮಾಡುತ್ತಾರೆ).

**ವೃದ್ಧ ಪುರೋಹಿತ :** ಸಮಾಧಾನದಿಂದ ವರ್ತಿಸರಿ. ಬಂದವರು ಪುರವರಾಧೀಶ್ವರರು. ಅವರು ಧರ್ಮಶಾಸ್ತ್ರ ಬಾಹಿರವಾಗಿ ವರ್ತಿಸಿದವರಲ್ಲ. ಹಟಮಾರಿ ಮಗನಿಂದಾಗಿ ಸಂಕಟಕ್ಕ ಸಿಲುಕ್ಯಾರ.

**ಪುರೋಹಿತ ೧ :** ಪುರವರಾಧೀಶ್ವರರಿರಬಹುದು. ಆದರೆ ಅಗ್ರಹಾರಕ್ಕಿಂತ ಇವರೇನು ದೊಡ್ಡವರಲ್ಲ. ಮನುಸ್ಮೃತಿ ಎದುರು ಎಲ್ಲರೂ ಸಮಾನರು.

**ವೃದ್ಧ ಪುರೋಹಿತ :** ಅದೆಲ್ಲ ನನಗ ಗೊತ್ತದ. ಒಂದಿಷ್ಟು ಸಮಯ ಕೇಳಲಾಕ ಬಂದಾರ. ಸಮಾಧಾನದಿಂದ ವರ್ತಿಸಿರಿ.

**ವೇದಭಟ್ಟ :** ಸುಮ್ಮನಿರಿ. (ಮಾದರಸರ ಕಡೆಗೆ ತಿರುಗಿ) ಮಾದರಸರೇ, ಜನಿವಾರ ಹರಿದುಕೊಳ್ಳೂದು ಮನುಸ್ಮೃತಿಗೇ ಅಪಮಾನ. ಆಗಮಿಕ ಶೈವಬ್ರಾಹ್ಮಣರೇ ಆಗಲಿ, ವೈದಿಕ ಶೈವಬ್ರಾಹ್ಮಣರೇ ಆಗಲಿ, ಹೀಂಗ ಬ್ರಾಹ್ಮಣ್ಯದ ಒಂದೊಂದು ಕಟ್ಟು ಕಳಚತಾ ಹೋದರ, ಮನುವಿನ ಮಕ್ಕಳಾದ ನಾವು ಅವನ ಸ್ಮೃತಿಗ್ರಂಥಕ್ಕ ಅಗೌರವ ತೋರಿಸಿದಂತಾಗ್ತದ.

**ಪುರೋಹಿತ ೧ :** ಬಲದೇವ ಮಂತ್ರಿಗಳೇ, ಬಸವಣ್ಣ ಜನಿವಾರ ಧರಿಸದಿದ್ದರ ಬಹಿಷ್ಕಾರ ಹಾಕಬೇಕಾದೀತು. ಬಹಿಷ್ಕಾರದ ಬೆಂಕಿ ಭುಗಿಲೆನ್ನಲು ಅವಕಾಶ ಕೊಡಬ್ಯಾಡರಿ. ನಿಮ್ಮ ಮಾವಗ ತಿಳಿಸಿ ಹೇಳ್ರಿ.



**ಬಲದೇವ :** ಪುರವರಾಧೀಶ್ವರರಾಗಿಯೂ ನನ್ನ ಮಾವನವರು ಒಂದು ವಾರದಿಂದ ಸಂಕಟ ಎದುರಿಸ್ತ ಇದ್ದಾರ. ಇಂಥವರೊಂದಿಗೆ ಸರಿಯಾಗಿ ಮಾತನಾಡೂ ಸೌಜನ್ಯವೂ ಈ ಸಭೆಗೆ ಇಲ್ಲದುದು ದುರ್ದೈವದ ಸಂಗತಿ.

**ಪುರೋಹಿತ ೧ :** (ಸಿಟ್ಟು, ತಾತ್ಸಾರದಿಂದ) ಸೌಜನ್ಯದ ಬುದ್ಧಿವಾದ ನಿಮ್ಮಿಂದ ನಾವು ಕಲೀಬೇಕಿಲ್ಲ. ಮಹಾಮಂತ್ರಿ ಅನ್ನೂ ದರ್ಪ ಇಲ್ಲಿ ಪ್ರಯೋಗಿಸಬ್ಯಾಡ್ರಿ. ಇದು ಕ್ಷತ್ರಿಯರ ಕಲ್ಯಾಣ ಅಲ್ಲ. ಬ್ರಾಹ್ಮಣರ ಬಾಗೆವಾಡಿ.

**ಬಲದೇವ :** ನಾಲಗಿ ಬಿಗಿ ಹಿಡಿದು ಮಾತಾಡ್ರಿ. ಬ್ರಾಹ್ಮಣರ ಬಾಯಾಗ ಶೂದ್ರ ನಾಲಗಿ!

**ವೇದಭಟ್ಟ :** ಈ ಉದ್ಧಟ ಅಧಿಕಾರಿ ಕೂಡ ಮಾತ ಸಾಕು. "ಜನಿವಾರ ಹರಿದುಹಾಕಿದ ಬಸವಣ್ಣಗ ಬಹಿಷ್ಕಾರ. ಇದು ದೇವದ್ವಿಜರ ತೀರ್ಪು. ತೀರ್ಪಿನ ಗಂಟೆ ಬಾರಿಸಿರಿ."

**ಮಾದರಸ :** (ನಡುವೆಯೇ ಬಾಯಿ ಹಾಕಿ) ವೇದಭಟ್ಟರೇ ತಡೀರಿ. ತಡೀರಿ. ಒಂದು ವಾರ ಸಮಯ ಕೊಡ್ರಿ. ಅವನನ್ನು ತಿದ್ದಲು ಪ್ರಯತ್ನಿಸ್ತೀನಿ. ಒಂದು ವಾರ ದಯ ತೋರಿರಿ.

**ವೇದಭಟ್ಟ :** ಸಾಧ್ಯವಿಲ್ಲ. ನೀವು ಹೇಳಿದ್ಹಾಂಗ ಕೇಳ್ತ ಹ್ವಾದರ ಮಿಕ್ಕವರಿಗೂ ಅವಕಾಶ ಸಿಕ್ಕು, ಪೂರಾ ಬ್ರಾಹ್ಮಣ ವ್ಯವಸ್ಥೆ ಹಾಳಾದೀತು. 'ಬಸವಣ್ಣನಿಗೆ ಬಹಿಷ್ಕಾರ....."(ಅಷ್ಟರಲ್ಲಿ ಬಸವಣ್ಣ ಬಟ್ಟೆ ಗಂಟನ್ನು ತುದಿಗೆ ಕಟ್ಟಿರುವ ಕೋಲನ್ನು ಹೆಗಲ ಮೇಲೆ ಹೊತ್ತು ಬರುತ್ತಾನೆ).

**ಬಸವಣ್ಣ :** ಏನು ? ಹೇಳಿ.

**ವೇದಭಟ್ಟ :** ನಿನಗ ಬಹಿಷ್ಕಾರ....

**ಬಸವಣ್ಣ :** ನನಗ ಬಹಿಷ್ಕಾರ ? ಧರ್ಮದ ಹೆಸರಿನ್ಯಾಗ ದುರಾಡಳಿತ. ನಾನು ಇದನ್ನು ಧಿಕ್ಕರಿಸಿ, ಅಗ್ರಹಾರದ ಸಹಾಯ -ಸಂಪರ್ಕ ಇಲ್ಲದೆ ಬದುಕಬಲ್ಲೆ. ಧೈರ್ಯ ಇದ್ದರ ಬಹಿಷ್ಕಾರ ಘೋಷಿಸಿರಿ.

**ಮಾದರಸ :** (ಎದ್ದು ಹೋಗಿ ಬಸವಣ್ಣನನ್ನು ಅಪ್ಪಿಕೊಂಡು ದುಃಖಿಸುತ್ತ) ಬ್ಯಾಡ ಮಗು, ಬ್ಯಾಡ.

**ವೇದಭಟ್ಟ :** ಇದು ಮಹಾಸಭೆಯ ನಿರ್ಧಾರ. ಇನ್ನ ಮ್ಯಾಲ ಈ ಊರಿನ ವೈದಿಕ, ಆಗಮಿಕ ಬ್ರಾಹ್ಮಣರು ಬಸವಣ್ಣನ ಕೂಡ ಯಾವುದೆ ಸಂಪರ್ಕ ಇಟ್ಟುಕೊಳ್ಳಬಾರದು. ಇದು ಅಗ್ರಹಾರದ ಅಂತಿಮ ತೀರ್ಪು.

**ಪುರೋಹಿತ ೧ :** (ಸ್ಮೃತಿಗ್ರಂಥ ಎತ್ತಿ ಹಿಡಿದು) "ಈ ಮನುಸ್ಮೃತಿ ಸಮ್ಮತವಾಗಿ ನೀಡಿದ ತೀರ್ಪು". (ತೀರ್ಪಿನ ಗಂಟೆ ಬಾರಿಸುತ್ತದೆ).

**ಬಸವಣ್ಣ :** ನಾನು ಈ ಮನುಸ್ಮೃತಿ ಮನ್ನಿಸೂದಿಲ್ಲ. ಧಿಕ್ಕರಿಸತೀನಿ. (ಕಸಿದುಕೊಂಡು ಎಸೆದ ತಾಳೆಗ್ರಂಥ ಹೋಮಕುಂಡಕ್ಕೆ ಬಿದ್ದು ಧಗಧಗ ಉರಿಯುತ್ತದೆ. ಮಗ್ಗುಲಲ್ಲಿದ್ದ ಪುರೋಹಿತ-೧ ಬಸವಣ್ಣನ ಕಪಾಳಕ್ಕೆ ಹೊಡೆಯುತ್ತಾನೆ. ಬಾಯಿಯಿಂದ ರಕ್ತ ಸೋರುತ್ತದೆ. ಬಸವಣ್ಣ ಆ ಏಟನ್ನು ಸಹಿಸಿಕೊಂಡು) ಅಪ್ಪಾ, ನಾನು ಕೂಡಲಸಂಗಮಕ್ಕ ಹೋಗತೀನಿ. ಆಶೀರ್ವಾದ ಮಾಡ್ರಿ. (ಅವರ ಉತ್ತರಕ್ಕಾಗಿ ಕಾಯದೆಯೇ ನಮಸ್ಕರಿಸಿ, ಗಂಟುಸಹಿತವಾದ ಕೋಲನ್ನು ಹೆಗಲ ಮೇಲೆ ಹೊತ್ತು, ಗಂಭೀರವಾಗಿ ಹೊರಟುಹೋಗುತ್ತಾನೆ. ದುಃಖ ಆಶ್ಚರ್ಯದಿಂದ ಜನ ನೋಡುತ್ತಾರೆ).

## ದೃಶ್ಯ - ೪

(ಕೂಡಲ ಸಂಗಮದ ಮಠ, ಸಾಯಂಕಾಲ ಸಮಯ. "ಓಂ ಸಹನಾವವತು..." ಪಠನ ಮಾಡುತ್ತ ವಿದ್ಯಾರ್ಥಿಗಳು ಕುಳಿತಿದ್ದಾರೆ. ಈಶಾನ್ಯಗುರುಗಳ ಪ್ರವೇಶ, ವಿದ್ಯಾರ್ಥಿಗಳು ಎದ್ದು ಕೈಮುಗಿದು ಕುಳಿತುಕೊಳ್ಳುತ್ತಾರೆ).

**ಈಶಾನ್ಯ ಗುರು :** ಮಕ್ಕಳೇ, ನಿನ್ನೆ ಸುರೂ ಮಾಡಿದ್ದ ಪಾಠ ಯಾವುದು?

**ವಿದ್ಯಾರ್ಥಿ ೧ :** ಶಿವ, ಜೀವ ಸ್ವರೂಪ.

**ಈಶಾನ್ಯ ಗುರು :** ಹೌದು, 'ಯತ್ರ ಜೀವಸ್ತತ್ರ ಶಿವಃ" ಹೀಗೆಂದರೇನು?

**ವಿದ್ಯಾರ್ಥಿ ೧ :** ಶಿವನು ಸಕಲಜೀವಿಗಳಲ್ಲಿ ಇದ್ದಾನೆ.

**ವಿದ್ಯಾರ್ಥಿ ೨:** ಅಂದರೆ ಮಾನವ, ಪಶು-ಪಕ್ಷಿ ಎಲ್ಲವುಗಳಲ್ಲಿ ಇದ್ದಾನೆ.

**ವಿದ್ಯಾರ್ಥಿ ೩:** ಉತ್ತಮ-ಅಧಮ, ದುಷ್ಟ-ಶಿಷ್ಟ ಎಲ್ಲರಲ್ಲಿಯೂ ಇದ್ದಾನೆ.

**ಬಸವಣ್ಣ :** (ಬಟ್ಟೆ ಗಂಟು ತುದಿಗೆ ಕಟ್ಟಿದ ಕೋಲನ್ನು ಹೊತ್ತು ಒಮ್ಮೆಲೇ ಪ್ರವೇಶಿಸಿ) ಅಲ್ಲ, ಅಲ್ಲ. ಅಧಮ, ದುಷ್ಟ ಇವರೆಲ್ಲರಲ್ಲಿ ಶಿವ ಇರೂದಿಲ್ಲ. ಉತ್ತಮರೊಳಗ ಮಾತ್ರ ಇರ್‍ತಾನ; ಭಕ್ತರೊಳಗ ಮಾತ್ರ ಇರ್‍ತಾನ. 'ಭಕ್ತದೇಹಿಕ ದೇವ"ನಾಗಿರ್‍ತಾನ.

**ಈಶಾನ್ಯಗುರು :** ಯಾರು ನೀನು ?

**ಬಸವಣ್ಣ :** ಬಸವಣ್ಣ.

**ಈಶಾನ್ಯಗುರು :** ಊರು ?

**ಬಸವಣ್ಣ :** ಬಾಗೇವಾಡಿ

**ಈಶಾನ್ಯ ಗುರು :** ತಂದೆ ?



**ಬಸವಣ್ಣ :** ಪುರವರಾಧೀಶ್ವರ ಮಾದಿರಾಜ.

**ಈಶಾನ್ಯ ಗುರು :** ಪುರವರಾಧೀಶ್ವರರ ಮಗನೋ? ದೊಡ್ಡ ಮನುಷ್ಯನ ದೊಡ್ಡ ಮಗ ಅಂತ ನಿನ್ನ ಉತ್ತರsನ ಹೇಳ್ತದ.

**ಬಸವಣ್ಣ :** ಹೌದು, ನಾನು ದೊಡ್ಡವರ ಮಗ. (ಬೇಸರದಿಂದ) ನಂದು ದೊಡ್ಡ ಕಥಿ.

**ಈಶಾನ್ಯ ಗುರು :** ಇರಲಿ, ಇಲ್ಲಿ ಬಂದದ್ದು ಯಾಕೆ ?

**ಬಸವಣ್ಣ :** ಕಲಿಯಬೇಕೆಂಬ ಆಸೆ, ಮನಿ ಬಿಟ್ಟು ಬಂದೀನಿ. (ಮಾತು ತಡವರಿಸುತ್ತದೆ. ಗಂಭೀರನಾಗುತ್ತಾನೆ. ಕಣ್ಣಲ್ಲಿ ನೀರು).

**ಈಶಾನ್ಯ ಗುರು :** ಬಾ, ಇಲ್ಲಿ (ಸಂತಯಿಸುತ್ತ). ಇರಲಿ, ದುಃಖಿಸಬ್ಯಾಡ. ದಣಿದು ಬಂದೀದಿ, ಸ್ನಾನ ಮಾಡಿ ಊಟಮಾಡು. ಆಮ್ಯಾಲ ನಿನ್ನ ಕಥಿ ಕೇಳತೀನಿ ಅಥವಾ ತಾನಾಗೇ ಗೊತ್ತಾಗ್ತದ. ನಂದಿಕೇಶಾ, ಇವ ನಿನ್ನ ಗೆಳೆಯ. ನಿನ್ನ ಕೋಣಿಯೊಳಗ ಕೆಲವು ದಿನ ಇರಲಿ, ಕರಕೊಂಡು ಹೋಗು. (ನಂದಿಕೇಶ ತಲೆ ಅಲ್ಲಾಡಿಸಿ ಕರೆದುಕೊಂಡು ಹೋಗುತ್ತಾನೆ. ಹೋಗುತ್ತಿರುವ ಬಸವಣ್ಣನನ್ನು ನೋಡುತ್ತ, ಸ್ವಗತ) ಇವನೊಬ್ಬ ವಿಲಕ್ಷಣ ವಿದ್ಯಾರ್ಥಿ. ಸ್ಪಷ್ಟ ವಿಚಾರ, ದಿಟ್ಟ ಉತ್ತರ ನೀಡಿ ನನ್ನ ಮನಸ್ಸನ್ನೇ ಕದಡಿ ಬಿಟ್ಟ. ಇಂದು ಬೋಧನೆ ಬೇಡ. ಹೊರಡಿರಿ (ಎಲ್ಲ ವಿದ್ಯಾರ್ಥಿಗಳೂ, ಈಶಾನ್ಯಗುರು ನಿರ್ಗಮಿಸುತ್ತಾರೆ).

## ದೃಶ್ಯ - ೫

(ಬಾಗೇವಾಡಿ ಮಾದರಸರ ಮನೆ, ಮಾದರಸ, ಮಾದಲಾಂಬಿಕೆ)

**ಮಾದಲಾಂಬಿಕೆ :** ಕೂಡಲಸಂಗಮ ಮಠಕ್ಕ ಮಗ ಹೋಗಿ ಕೆಲವು ತಿಂಗಳು ಆದವು. ಊಟ ಉಪಚಾರ ಆರೋಗ್ಯ ಹ್ಯಾಗಿದೆಯೋ.

**ಮಾದರಸ :** ನಿನಗ ಊಟ-ಉಪಚಾರದ ಚಿಂತಿ, ನನಗ ಅವನ ಅಭ್ಯಾಸದ ಚಿಂತಿ. ಈ ಬ್ರಾಹ್ಮಣರನ್ನು ಧಿಕ್ಕರಿಸಿ ಹ್ವಾದ ನಿನ್ನ ಮಗ ಇವರೆಲ್ಲರನ್ನು ಮೀರಿ ಬೆಳೀಬೇಕು. ಅವ ಊರ ಬಿಡೂ ಹಾಂಗ ಮಾಡಿದ ಈ ಜನ, ಅವತ್ತ ನನ್ನ ಮಗನ್ನ ಸೋಲಿಸಲಿಲ್ಲ, ಹಿಂಸಿಸಿದರು.

**ಮಾದಲಾಂಬಿಕೆ :** ಹೌದು. ಅಂದಿನ ಆ ಘಟನೆ ನೆನದರ ನನ್ನ ಕರುಳ ಕಿವುಚಿದಂತಾಗ್ತದ. ಶಂಭುಶಾಸ್ತ್ರಿ ನನ್ನ ಕೂಸಿನ ಕಪಾಳಕ್ಕ ಪಟಾರನೇ ಹೊಡದ. ಮಗ ಪಿಟ್ಟೆನ್ನಲಿಲ್ಲ. ಕರುಣೆ ತುಂಬಿದ ಕಣ್ಣುಗಳಿಂದಲೇ ಉತ್ತರಿಸಿದ. (ದುಃಖಿಸುತ್ತಾಳೆ).

**ಮಾದರಸ :** ದುಃಖಿಸಬ್ಯಾಡ, ಇವರು ಓದಿ ಕೆಟ್ಟ ಕೂಚಿಭಟ್ಟರು. ಯಾವ ಕಾಲಕ್ಕೂ ಅಗ್ರಹಾರಗಳು ವಿಚಾರವನ್ನು ನಾಶಮಾಡ್ತಾನs ಬಂದಾವ, ವಿಚಾರವಂತರನ್ನು ಹಿಂಸಿಸ್ತs ಬಂದಾವ. ಬೆಳಕು ಕಾಣದ ಗೂಬೆಗಳು, ಬಾವಲಿಗಳು.

**ಮಾದಲಾಂಬೆ :** ಹೋಗಲಿ, ನಮ್ಮ ಗತಿ ಎಲ್ಲಿಗಿ ಬಂತು ? ಇಲ್ಲಿಯ 'ಪುರವರಾಧೀಶ್ವರ' ಮನೆತನ ನಮ್ಮದು. ನಮ್ಮನ್ನು ಗೌರವದಿಂದ ನೋಡ್ತಿದ್ದ ಈ ಬ್ರಾಹ್ಮಣರಿಗಿ ನಾವಂದರ ಈಗ ತಿರಸ್ಕಾರ. ಇವರ ದರ್ಪಕ್ಕ ಅಂಜಿ ಬ್ಯಾರೆಯವರೂ ನಮ್ಮಿಂದ ದೂರ ಉಳದಾರ.

**ಮಾದರಸ :** ಈ ನೋವು ನನಗೂ ಬಾಧಸ್ತದ. ಮೊದಲಿನಿಂದಲೂ ಈ ವೈದಿಕ ಬ್ರಾಹ್ಮಣರಿಗೆ ಆಗಮಿಕ ಬ್ರಾಹ್ಮಣರಾದ ನಮ್ಮ ಬಗ್ಗೆ ಅನಾದರ. ಮಗನ ಸಾಮಾಜಿಕ ಬಹಿಷ್ಕಾರದಿಂದಾಗಿ ಇನ್ನೂ ಅನಾದರ.

**ಮಾದಲಾಂಬಿಕೆ :** ಹೌದು, ನಮ್ಮ ಮಗ ಈ ವೈದಿಕ ಬ್ರಾಹ್ಮಣರಿಂದಾಗುವ ಅನಾದರಕ್ಕ ಬ್ಯಾಸತ್ತು ಹೀಂಗ ವರ್ತಿಸಿಧಾಂಗ ಕಾಣಸ್ತದ.

**ಮಾದರಸ :** ನೀನು ಹೇಳೂದು ಸರಿ. ಇವರು ಅಗ್ರಹಾರದ ಯಜಮಾನರು. ಎಲ್ಲ ಜಾತಿಯವರೂ ತಮ್ಮ ತಮ್ಮ ಸಂಪ್ರದಾಯ ಮೀರದಂತೆ ನೋಡಿಕೊಳ್ಳುವ ಅಧಿಕಾರ ಇವರದು.

**ಮಾದಲಾಂಬೆ ;** ನಮ್ಮ ಕುಲಾಚಾರಗಳೂ ಇವರ ಹಿಡಿತದಲ್ಲಿ.

**ಮಾದರಸ :** ಹೌದು, ನೀನು ಹೇಳೂದು ಸರಿ. ಆಗಮಿಕ ಬ್ರಾಹ್ಮಣರಾದ ನಮ್ಮ ಹಿರಿಯರು ಈ ವೈದಿಕ ಬ್ರಾಹ್ಮಣರ ಶ್ರೇಷ್ಠತೆಗೆ ಮರುಳಾಗಿ, ಅವರ ತತ್ವ ಆಚಾರಗಳನ್ನು ರೂಢಿಸಿಕೊಂಡರು. ನಮ್ಮ ಆಗಮ ಸಿದ್ಧಾಂತ ಕುಲಗೆಟ್ಟಿತು. ನಮ್ಮ ಕುರುಡು ಭಕ್ತಿ ಇವರ ಕರ್ಮದ ಕಲಬೆರಕೆಯಿಂದ ಇನ್ನೂ ಕೆಟ್ಟಿತು. ಬಸವಣ್ಣ ಇದನ್ನು ನಿರಾಕರಿಸಿದ, ನಮ್ಮನ್ನೂ ನಿರಾಕರಿಸಿದ.

**ಮಾದರಸ :** ಇದರ ಫಲವಾಗಿ ಈ ವೈದಿಕರು ನಮ್ಮ ಮಗನನ್ನು, ಒಂದು ರೀತಿ ನಮ್ಮನ್ನೂ ಬಹಿಷ್ಕರಿಸಿದರು.

**ಮಾದಲಾಂಬಿಕೆ :** ಇದರಿಂದಾಗಿ ಮಗು ನಾಗಲಾಂಬೆಗೆ ಜೊತೆಗಾರರೂ ಇಲ್ಲ. ಒಂದೇ ಕುಳಿತು ಹೊತ್ತ ಕಳಿಸತಾದ. ಈ ಅಗ್ರಹಾರದವರೆಂದರೆ ಈಗ ಅವಳಿಗೂ ಸಿಟ್ಟು - ಭಾರೀ ಸ್ವಾಭಿಮಾನಿ.

**ಮಾದರಸ :** ಅಣ್ಣನ್ಹಾಂಗ ತಂಗಿ. ನನಗ ಇವಳ ಭವಿಷ್ಯದ್ದೇ ಚಿಂತಿ.

## ದೃಶ್ಯ - ೬

(ಕೂಡಲಸಂಗಮಮಠ. ವಿದ್ಯಾರ್ಥಿಗಳ ಮೌನ ಅಧ್ಯಯನ. ಬಸವಣ್ಣನ ಮುಂದೆಯೂ ವ್ಯಾಸಪೀಠ. ಪುಸ್ತಕ ಬಿಚ್ಚುತ್ತಾನೆ, ಬೇಸರ).

**ಈಶಾನ್ಯಗುರು :** ಬಸವಾ ಇಲ್ಲಿ ಬಾ. (ಬಸವಣ್ಣ ಹತ್ತಿರ ಬರುತ್ತಾನೆ. ಈಶಾನ್ಯಗುರು ಬೆನ್ನ ಮೇಲೆ ಕೈಯಾಡಿಸುತ್ತ) ನೀನು ಇಲ್ಲಿಗಿ ಬಂದು ಎರಡು ವರ್ಷ ಆಗ್ತ ಬಂತು. ಅಭ್ಯಾಸ ಅರ್ಥ ಆಗ್ತದ?

**ಬಸವಣ್ಣ :** (ಮೌನ)

**ಈಶಾನ್ಯಗುರು :** ಅರ್ಥ ಆಗ್ಯಾದ?

**ಬಸವಣ್ಣ ;** ಅರ್ಥ ಆಗ್ಯಾದ.

**ಈಶಾನ್ಯಗುರು :** ಏನು ಅರ್ಥ ಆಗ್ಯಾದ?

**ಬಸವಣ್ಣ :** ವ್ಯರ್ಥ ಅಂತ ಅರ್ಥ ಆಗ್ಯಾದ. (ಎಲ್ಲ ವಿದ್ಯಾರ್ಥಿಗಳು ಬೆಚ್ಚಿ ಬೀಳುತ್ತಾರೆ).

**ಈಶಾನ್ಯಗುರು :** ಹಾಂ!

**ಬಸವಣ್ಣ :** ಹೌದು ಗುರುಗಳೇ, ನನ್ನೊಳಗಿನ ಮನುಷ್ಯ ಉಸಿರುಗಟ್ಟಿ ಸಾಯತಿದ್ದಾನ. ಅವನನ್ನು ನಾನು ಬದುಕಿಸಬೇಕಾಗ್ಯಾದ.

**ಈಶಾನ್ಯಗುರು ;** ಹೀಗ್ಯಾಕೆ ಮಗು ?

**ಬಸವಣ್ಣ :** ಏನು ಹೇಳಲಿ ಗುರುಗಳೇ, ನಾಥಸಂಸ್ಕೃತಿಯ ಯೋಗಮಾರ್ಗಕ್ಕ, ವರ್ಗ-ವರ್ಣ-ಲಿಂಗಭೇದರಹಿತ ತತ್ವಕ್ಕ ಆಕರ್ಷಿತವಾಗಿ ಇಲ್ಲಿಗಿ ಬಂದೆ. ಆದರೆ ಇತ್ತೀಚೆ ನಮ್ಮ ಕಣ್ಣೆದುರಿಗೇ ಆಗಮಿಕ ಶೈವಬ್ರಾಹ್ಮಣರು ಈ ನಾಥಶೈವರನ್ನು ಹೊರಗ ಹಾಕಿ ಅವರ ಮಠವನ್ನು ಆಕ್ರಮಿಸಿ, ಯಾವ ಯಾವುದೇ ಕರ್ಮಕೂಪಗಳಲ್ಲಿ ಮುಳುಗ್ಯಾರ. ಕತ್ತಲೆಯಿಂದ ಮತ್ತೆ ಕತ್ತಲೆಗೇ ಬಂದಂತಾಗಿದೆ.

**ಈಶಾನ್ಯಗುರು :** ಆ ಕರ್ಮಾಚರಣೆಗಳನ್ನು ಬಿಡು. ಈ ಸಿದ್ಧಾಂತ ಗ್ರಂಥಗಳನ್ನಾದರೂ ಓದು.

**ಬಸವಣ್ಣ :** ಇವನ್ನು ಓದುವಾಗಲೆಲ್ಲ ಹಾಲಹಳ್ಳ ತೊರೆದು, ಉಪ್ಪು ನೀರ ಕುಡಿದ ಅನುಭವವಾಗ್ತದ. ಓದೂದಕ್ಕಾಗಿ ಓದೂದು, ಓದಬಾರದನ್ನು ಓದೂದು-ಹೀಗೆ ಎಷ್ಟು ದಿನ ವ್ಯರ್ಥ ಕಳೀಲಿ ? ಪಂಡಿತನಾಗಲು, ಪುರೋಹಿತನಾಗಲು ಓದುವ ಈ ಅಭ್ಯಾಸ, ನನಗೆ ರುಚಿಸುತಾ ಇಲ್ಲ. (ಮಿಕ್ಕ ವಿದ್ಯಾರ್ಥಿಗಳು ಆಶ್ಚರ್ಯದಿಂದ ಈ ಮಾತು ಆಲಿಸುತ್ತಾರೆ).

**ಈಶಾನ್ಯಗುರು :** ಮಿಕ್ಕ ವಿದ್ಯಾರ್ಥಿಗಳು ಶ್ರದ್ಧೆಯಿಂದ ಓದ್ತಾರ ...

**ಬಸವಣ್ಣ :** ಹೌದು, ಅವರಿಗೆ ಈ ಗ್ರಂಥಗಳ ಮರೆಮೋಸ ಅರ್ಥವಾಗಿಲ್ಲ. ಆತ್ಮದ ಬಗ್ಗೆ ಬರೆದ ಮಾತುಗಳೋ ಚೆನ್ನಾಗಿವೆ, ಸರಿಯಾಗಿಲ್ಲ. ದಾರಿತೋರಿಸುತ್ತಲೇ ದಾರಿ ಬಿಡಿಸ್ತವ.

**ಈಶಾನ್ಯಗುರು :** ಬಸವಾ ಹಾಗೆನ್ನಬಾರದು, ಅವುಗಳನ್ನು ಬರೆದವರೆಲ್ಲ ದೊಡ್ಡ ವ್ಯಕ್ತಿಗಳು.

**ಬಸವಣ್ಣ :** ಇರಬಹುದು. **ಅವರಿಗಿಂತ ಸತ್ಯ ದೊಡ್ಡದು.** ಆ ಸತ್ಯ ಕಾಣಲು ನನ್ನ ಮನಸ್ಸು ಹಂಬಲಿಸ್ತದ.

**ಈಶಾನ್ಯಗುರು ;** ಆ ಸತ್ಯವನ್ನ ಇಡಿಯಾಗಿ ಹಿಡಿಯೂದು ಅಷ್ಟು ಸುಲಭಲ್ಲ.

**ಬಸವಣ್ಣ :** ಹೌದು, ಗುರುಗಳೇ, ನನಗೂ ಗೊತ್ತದ. ಆದರ ಸತ್ಯ ಸಮಕಾಲೀನ ಮತ್ತು ಸಾರ್ವಕಾಲೀನ ಅಂತ ಎರಡು ಬಗೆಯಾಗಿರ್ತದ. ಸಮಕಾಲೀನತೆಯನ್ನು ಮರೆತು ಕೇವಲ ಸಾರ್ವಕಾಲೀನ ಸತ್ಯ ಹೇಳಿದ್ರ ವಾಸ್ತವ ಬದುಕು ಸಾರ್ಥಕವಾಗೂದಾದರೂ ಹ್ಯಾಂಗ ?

**ಈಶಾನ್ಯಗುರು :** ಅಂದರ ?

**ಬಸವಣ್ಣ :** ಮನುಷ್ಯನ ಬಗ್ಗೆ ಮಾತಾಡೂದು ಬ್ಯಾರೆ, ಸಾಮಾಜಿಕ ಮನುಷ್ಯನ ಬಗ್ಗೆ ಮಾತಾಡೂದು ಬ್ಯಾರೆ. ಈ ಎರಡೂ ನೆಲೆಗಳನ್ನು ಗಮನಿಸಿ ಸಿದ್ಧಾಂತ ಕಟ್ಟಬೇಕು. ಇಲ್ಲದಿದ್ರ ಬೋಧೆ ಗಾಳಿಗೋಪುರ ಅನಸ್ತದ. ಇಂಥ ಗಾಳಿಗೋಪುರ ಬಿಟ್ಟು ನಿಜಗೋಪುರ ಕಟ್ಟುವದನ್ನು ನಮ್ಮ ಮಠಗಳು ಕಲಿಸ್ಬೇಕು.

**ಈಶಾನ್ಯಗುರು :** ಇರಲಿ. ಈ ಮಠದಲ್ಲಿ ಅಂಥ ವಾತಾವರಣವಿಲ್ಲವೆ ?

**ಬಸವಣ್ಣ :** ಇಲ್ಲ. ಇನ್ನ ಮ್ಯಾಲ ಮಠಗಳ ಶುದ್ಧೀಕರಣ ಅವಶ್ಯ ಅದ. ಇಲ್ಲಿಯ ಉಳಿದ ಅಧ್ಯಾಪಕರೇ ಬ್ಯಾರೆ, ನೀವೇ ಬ್ಯಾರೆ. ಅದಕ್ಕಽ ಮನಬಿಚ್ಚಿ ಮಾತಾಡೀನಿ, ಕ್ಷಮಿಸಿರಿ.

**ಈಶಾನ್ಯಗುರು :** ಇರಲಿ. ನಿನ್ನೊಂದಿಗೆ ಆಮೇಲೆ ಮಾತಾಡ್ತೀನಿ, ಹೋಗು. (ಎಲ್ಲ ವಿದ್ಯಾರ್ಥಿಗಳಿಗೆ) ಇಲ್ಲಿಗೆ ಇವತ್ತಿನ ಪಾಠ ನಿಲ್ಲಿಸಿರಿ. (ಎಲ್ಲರೂ ಹೋಗುತ್ತಾರೆ. ಅವರ ಹಿಂದೆ ಬಸವಣ್ಣನೂ ಭಾರವಾದ ಹೆಜ್ಜೆ ಹಾಕುತ್ತಾ ಹೋಗುತ್ತಾನೆ.) ಏನು ಈ ಬಾಲಕನ ವಿಚಾರ? ಇವನ ರೀತಿಯೇ ಬ್ಯಾರೆ. ಈ ಮಗುವನ್ನು ಸರಿಯಾದ ದಾರ್‍ಯಾಗ ನಡೆಸಬೇಕು. ಸಸಿಯನ್ನು ಸಲುಹಬೇಕು. ದೀಪ ಗಾಳಿಗಿ ಆರದ ಹಾಂಗ ನೋಡಿಕೊಳ್ಳಬೇಕು; ನೋಡಿಕೊಳ್ಳಬೇಕು (ಎನ್ನುತ್ತ ಹೋಗುವನು).

## ದೃಶ್ಯ -೭

(ಬೆಳಗಿನ ಸಮಯ. ಬಸವಣ್ಣ, ನಂದಿಕೇಶ ತಂಬಿಗೆ, ಬಟ್ಟೆ ತೆಗೆದುಕೊಂಡು ನದಿ ತೀರಕ್ಕೆ ಬಂದಿದ್ದಾರೆ. ಬಟ್ಟೆ ಕಳಚುತ್ತ).

**ನಂದಿಕೇಶ :** ಏನು ಬಸವಣ್ಣಾ, ನಿನ್ನೆ ರಾತ್ರಿ ಸೃಷ್ಟಿ-ಆತ್ಮ-ಜೀವ ... ಏನೇನೋ ಬಡಬಡಿಸತಿದ್ದಿ.

**ಬಸವಣ್ಣ :** (ಮೌನ)

**ನಂದಿಕೇಶ :** ಏನು ? ನಿದ್ದಿ ಬರಲಿಲ್ಲ?

**ಬಸವಣ್ಣ :** ಹೌದು. ನಿದ್ದಿ ಬರಲಿಲ್ಲ. ಎಚ್ಚರವಾಗೇ ಇದ್ದೆ.

**ನಂದಿಕೇಶ :** ಏನೋ, ನನಗ ಎಚ್ಚರವೇ ಇಲ್ಲ.



**ಬಸವಣ್ಣ :** ನಂದಿಕೇಶಾ, ನೀನು ಪುಣ್ಯವಂತ. ನಿನಗೆ ನಿದ್ದಿ, ನನಗೆ ಎಚ್ಚರ. ಕಳೆದ ಕೆಲವು ದಿನಗಳಿಂದ ನಿದ್ದೀಽನ ಇಲ್ಲ. ಬಹುಶಃ ಇನ್ನ ಮ್ಯಾಲ ನನಗ ನಿದ್ದೀಽನ ಇಲ್ಲ. ಎಚ್ಚರವಾಗೇ ಇರಬೇಕಾಗ್ಯಾದ. ಎಚ್ಚರವಾಗಿರೂದನ್ನ ರೂಢಿಸಿಕೊಳ್ಳಬೇಕಾಗ್ಯಾದ.

**ನಂದಿಕೇಶ :** ಯಾಕ ? ಆರು ತಿಂಗಳಿನಿಂದಲೂ ನೋಡತೀನಿ, ಅಂತರ್ಮುಖಿಯಾಗೇ ಇರುತ್ತೀ. ಅಪ್ಪ -ಅಮ್ಮನ ಚಿಂತೆಯೇ ?

**ಬಸವಣ್ಣ :** ಇಲ್ಲ. ಅಪ್ಪ ಅಮ್ಮನ ಚಿಂತಿಗಿಂತ ನನಗ ದೇವರ ಚಿಂತಿ ಮುಖ್ಯ ಆಗ್ಯಾದ. ಮಲಿನವಾಗಿರುವ ಮನದಾಗ ಹುದುಗಿರುವ ಆತ್ಮ ಶುದ್ಧವಾಗಬೇಕಾಗ್ಯಾದ. (ನೀರಿಗಿಳಿಯುತ್ತಾರೆ, ಸ್ನಾನಮಾಡುತ್ತಾರೆ. ಬಸವಣ್ಣ ಅಲ್ಲಲ್ಲಿ ಮಡುಗಟ್ಟಿದ, ಹರಿಯುವ ನೀರನ್ನು ನೋಡುತ್ತ, ಬೊಗಸೆಯಲ್ಲಿ ಮತ್ತೆ ಮತ್ತೆ ನೀರು ತುಂಬಿಕೊಂಡು ನೋಡುತ್ತ ಹರ್ಷಭರಿತನಾಗಿ)

ಹಾಂ. ಆತ್ಮ ಶುದ್ದವಾಗಬೇಕು, ಆತ್ಮ ಶುದ್ಧವಾಗಬೇಕು. ಈ ನೀರಿನಂತೆ, ಈ ನೀರಿನಂತೆ, ಈ ನೀರಿನಂತೆ. ಅಶುದ್ಧ ಆಗಿರುವ ನೀರಿನೊಳಗಽ ಶುದ್ಧ ಆಗೂ ಗುಣ ಅದ. ಶುದ್ಧ ಆಗಬೇಕಾದರ ನೀರು ನಿಲ್ಲಬಾರದು, ಹರೀತಿರಬೇಕು. ನಿಂತರ ಅಶುದ್ಧ, ಹರಿದರ ಶುದ್ಧ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ". ಹೋ, ಹೊಳೀತು, ಹೊಳೀತು, ಹೊಳೀತು. ಹೋ ಹೋ ಇದು ನೀರಲ್ಲ, ಗುರು, ನನ್ನ ಗುರು. (ಎನ್ನುತ್ತ ಆತ್ಮಸಾಕ್ಷಾತ್ಕಾರ ಭಾವದಿಂದ ಕುಣಿಯುತ್ತಾನೆ).

**ನಂದಿಕೇಶ :** ಏನು ಬಸವಾ. ಯಾಕ ಕುಣೀತಿ ? ಯಾಕ ಕೂಗತಿ ?

**ಬಸವಣ್ಣ :** ಏನೂ ಇಲ್ಲ, ತಿಳಿಯಿತು. ನೀರು ನಿಲ್ಲಬಾರದು, ಹರೀತಿರಬೇಕು. 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ", ಜಂಗಮಕ್ಕೆ ಅಳಿವೇ ಇಲ್ಲ. ನನ್ನ ಆತ್ಮ ಜಂಗಮವಾಗಬೇಕು. "ಜಂ...ಗ...ಮ...ವಾ...ಗ...ಬೇ...ಕು.

**ನಂದಿಕೇಶ :** ಏನು ? ಬೋಧಿವೃಕ್ಷದ ಕೆಳಗ ಗೌತಮ ಬುದ್ಧಗ ಜ್ಞಾನೋದಯ ಆದ್ಹಾಂಗ ನೀರೊಳಗ ನಿಂತ ನಿನಗೂ...

**ಬಸವಣ್ಣ :** ಹೌದು ನನಗೂ, ಸತ್ಯ ಹೊಳೆಯಿತು. ನಾನು ನೀರಿನಂತಾಗಬೇಕು. ಹರಿಯುವ ನೀರಿನಂತಾಗಬೇಕು. ಹರಿಯುವ ನೀರು ನನ್ನ ಕಣ್ಣು ತೆರೆಸಿದ ಗುರು. ಜಂಗಮಕ್ಕಳಿವಿಲ್ಲ, ಅಳಿವಿಲ್ಲ, ಅಳಿವಿಲ್ಲ (ಇಲ್ಲಿಂದ ಮುಂದೆ 'ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ' ಎಂಬ ಧ್ಯೇಯವಾಕ್ಯ ಆಗಾಗ ಕೇಳಿಸುತ್ತ ಹೋಗಬೇಕು. ನೀರಿನಿಂದ ಹೊರಬಂದು ಬಟ್ಟೆ ತೊಟ್ಟು ಕೋಣೆಗೆ ಹೊರಡುತ್ತಾರೆ. ಬಸವಣ್ಣ 'ಜಂಗಮಕ್ಕಳಿವಿಲ್ಲ' ಎಂಬುದು ಗಂಭೀರವಾಗಿ ನುಡಿಯುತ್ತಿರುತ್ತಾನೆ. ಅಷ್ಟರಲ್ಲಿ ಒಬ್ಬ ಓಡಿ ಬರುತ್ತಾನೆ).

**ಒಬ್ಬ :** ಬಸವಣ್ಣಾ, ಬಸವಣ್ಣಾ, ಕೆಟ್ಟ ಸುದ್ದಿ, ಕೆಟ್ಟ ಸುದ್ದಿ, ನಿನ್ನ ತಂದೆ ತೀರಿಕೊಂಡರು.

ಇದೀಗ ಸುದ್ದಿ ಬಂತು. (ಬಸವಣ್ಣ ಮುಗಿಲ ಕಡೆಗೆ ಮುಖಮಾಡಿ. "ತಂದೆ ನೀನು - ತಾಯಿ ನೀನು, ಬಂಧು ನೀನು - ಬಳಗ ನೀನು, ಎನಗೆ ನೀನಲ್ಲದೆ ಮತ್ತಾರು ಇಲ್ಲವಯ್ಯಾ ಕೂಡಲಸಂಗಮದೇವಾ" ಎಂದು ನುಡಿಯುತ್ತಾನೆ).

**ನಂದಿಕೇಶ :** ಬಸವಣ್ಣಾ, ಕಳೆದ ವರ್ಷದಿಂದ ತಾಯಿಯಿಲ್ಲದ ನೀನು ಇಂದು ತಂದೆಯೂ ಇಲ್ಲದ ಪರದೇಶಿಯಾದೆ (ಎಲ್ಲರೂ ನಿರ್ಗಮಿಸುತ್ತಾರೆ).

## ದೃಶ್ಯ - ೮

(ಬಾಗೇವಾಡಿಯ ಮನೆ. ಮಾದರಸನ ಶವಸಂಸ್ಕಾರ ಮುಗಿಸಿ ಕುಟುಂಬದ ಸದಸ್ಯರು ದುಃಖಿತರಾಗಿ ಕುಳಿತಿದ್ದಾರೆ. ಬಸವಣ್ಣ ಬರುತ್ತಾನೆ).

**ನಾಗಲಾಂಬಿಕೆ :** ಅಣ್ಣ ಬಂದ (ಧಾವಿಸಿ ಹೋಗಿ ಅಪ್ಪಿಕೊಂಡು ಅಳುತ್ತಾಳೆ. ಮಿಕ್ಕವರೂ ದುಃಖಿಸುತ್ತಾರೆ).

**ಸದಸ್ಯ :** ಬಹಿಷ್ಕಾರದಿಂದಾಗಿ ನಿಮ್ಮ ಘನತೆವೆತ್ತ ಕುಟುಂಬ ಕುಸೀತಾ ಹೋಯ್ತು. ಸಮಾಜದ ಸಂಬಂಧ ಶಿಥಿಲಗೊಂಡು ಇಷ್ಟು ದಿನ ಸತ್ತು ಬದುಕಿತು. ಈ ಚಿಂತ್ಯಾಗ ಕೊರಗಿ ನಿನ್ನ ತಾಯಿ ಕೊನೆಯುಸಿರೆಳೆದಳು. ಆಗಲೂ ನಿನ್ನ ಹಟ ಬಿಡಲಿಲ್ಲ. ಈಗ ನಿನ್ನ ತಂದೆಯೂ ....

**ಬಸವಣ್ಣ :** ಇವರೆಲ್ಲ ಈ ಹೊಲ, ಈ ಮನೆ, ಈ ಹಿರಿಯರ ಆಸ್ತಿ ಅಂತ ಇಲ್ಲಿ ಉಳಕೊಳ್ಳಬಾರದಿತ್ತು.

**ಸದಸ್ಯ :** ಏನೋ ಉಳಕೊಂಡರು. ಮಗನ ಮ್ಯಾಲಿನ ಬಹಿಷ್ಕಾರದಿಂದ ದಿನವೂ ಕೊರಗಿ ಕೊನೆಯುಸಿರೆಳೆದರು. (ನಾಗಲಾಂಬಿಕೆ ಗಟ್ಟಿಯಾಗಿ ಅಳುತ್ತಾಳೆ. ಬಸವಣ್ಣ ಶೂನ್ಯ ಮನಸ್ಕವಾಗಿ ಕುಳಿತುಕೊಳ್ಳುತ್ತಾನೆ. ಅಲ್ಲಲ್ಲಿ ಗಂಡು-ಹೆಣ್ಣು ಆಳುಗಳು ಖಿನ್ನರಾಗಿ ಕುಳಿತಿದ್ದಾರೆ. ಅಳುವ ಧ್ವನಿ ಕೇಳಿ, ಬ್ರಾಹ್ಮಣರೂ ಊರಿನ ಬ್ರಾಹ್ಮಣೇತರರೂ ಓಡಿ ಬರುತ್ತಾರೆ).

**ವೇದಭಟ್ಟ :** (ಬ್ರಾಹ್ಮಣರ ಕಡೆ ತಿರುಗಿ) ಬಸವಣ್ಣ ಬಹಿಷ್ಕೃತ ವ್ಯಕ್ತಿ. ಯಾರೂ ಒಳಗ ಪ್ರವೇಶ ಮಾಡಬ್ಯಾಡರಿ. ಇವನಿಗೆ ನೆರವಾಗಬ್ಯಾಡರಿ. ಬುದ್ಧಿ ಕಲಿಸೋಣ. (ಬ್ರಾಹ್ಮಣರು ಅಲ್ಲಲ್ಲಿ ಬಾಗಿಲ ಹೊರಗೆ ಕುಳಿತುಕೊಳ್ಳುತ್ತಾರೆ).

**ವೃದ್ಧ ಪುರೋಹಿತ :** ಬಸವಣ್ಣ ಮಾಡಿದ ತಪ್ಪಿಗೆ ಮಾದರಸರು ಇಷ್ಟು ದಿವಸ ಕಷ್ಟ ಅನುಭವಿಸಬೇಕಾಯಿತು. ಈಗ ಅವರು ಸತ್ತಾರ. ಮನ್ಯಾಗ ಹಿರ್‍ಯಾರೂ ಇಲ್ಲ. ತಬ್ಬಲಿ ಮಕ್ಕಳು ದಿಕ್ಕ ತೋಚದ ಕೂತಾರ. ಬಹಿಷ್ಕಾರ ಹಿಂತೆಗೆದುಕೊಳ್ಳೋಣ.



**ಪುರೋಹಿತ ೧ :** ಬಸವಣ್ಣ ಹೊರಗ ಬಂದು ಕ್ಷಮೆ ಕೇಳಲಿ.

**ವೃದ್ಧ ಪುರೋಹಿತ :** ನನಗೆ ಗೊತ್ತು, ಅವನು ಹೊರಗ ಬರೂದಿಲ್ಲ. ಕ್ಷಮೆ ಕೇಳೂದಿಲ್ಲ. ಹೋಗಲಿ, ನಾವೆಲ್ಲ ಕಷ್ಟದಲ್ಲಿದ್ದಾಗ ಪುರವರಾಧೀಶ್ವರ ಮಾದಿರಾಜರು ಪ್ರೀತಿಯಿಂದ ನಮ್ಮೆಲ್ಲರನ್ನೂ ನೋಡಿಕೊಂಡ ದೊಡ್ಡ ಮನುಷ್ಯರು. ಅವರ ಮುಖ ನೋಡಿ ಮಗನ ಮ್ಯಾಲಿನ ಬಹಿಷ್ಕಾರದ ತೀರ್ಪು ಈಗ ಹಿಂತೆಗೆದುಕೊಳ್ಳೂದು ಮಾನವೀಯ ಕೂಡ. ಪರದೇಶಿ ಮಕ್ಕಳು.

**ಬ್ರಾಹ್ಮಣರ ಗುಂಪು :** ಎಲ್ಲಿಯ ಪರದೇಶಿ ? ಒಳಗೆ ಹೋಗಿ ಕ್ಷಮೆ ಯಾಚಿಸಲು ಬಸವಣ್ಣನಿಗೆ ಕೇಳೋಣ ನಡೀರಿ. ಮರಣ ಸೂತಕದಿಂದ ಮನೆ ಮೈಲಿಗೆಯಾಗಿದೆ. ಶುದ್ಧೋದಕ ತನ್ನಿ (ಒಬ್ಬ ಓಡಿ ಹೋಗಿ ಶುದ್ಧೋದಕ ತರುತ್ತಾನೆ. ಬ್ರಾಹ್ಮಣರೆಲ್ಲ ಶುದ್ಧೋದಕ ಸಿಂಪಡಿಸುತ್ತ, ಮಂತ್ರಘೋಷದೊಂದಿಗೆ ಮನೆಯೊಳಗೆ ಬರುತ್ತಾರೆ. ದುಃಖದಿಂದ ನಾಗಲಾಂಬಿಕೆ ಬಳಲಿದ್ದಾಳೆ. ಬಸವಣ್ಣ ಗಂಭೀರವಾಗಿ ಕುಳಿತಿದ್ದಾನೆ).

**ಪುರೋಹಿತ ೧ :** ಬಸವಣ್ಣಾ, ಈಗಲಾದರೂ ಕ್ಷಮೆ ಕೇಳು. ಸಮಾಜ ಎದುರು ಹಾಕಿಕೊಂಡರ ಆಗೂದೇ ಹೀಂಗ.

**ಬಸವಣ್ಣ :** ಸಮಾಜ. ಸಮಾಜ. ಯಾವುದು ಸಮಾಜ? ಬಹಿಷ್ಕಾರದ ಈ ಕ್ರೂರ ನಿಯಮ ಮಾಡಿದವರ್‍ಯಾರು ? ನನಗ ನಿಮ್ಮ ಸಮಾಜನೂ ಬ್ಯಾಡ, ನೀವೂ ಬ್ಯಾಡ.

**ಪುರೋಹಿತ ೧:** ಬಸವಣ್ಣಾ ದುಡುಕಬ್ಯಾಡ. ಇದು ಗಂಭೀರ ಸಂದರ್ಭ. ಸಮಾಜದ ಕ್ರೋಧ ಮತ್ತೂ ಹೆಚ್ಚಿಸಿಕೋಬ್ಯಾಡ. ಇಲ್ಲಿಗಿ ಮುಗಿಯೂದಿಲ್ಲ. ನಿನಗೊಬ್ಬ ತಂಗಿ ಇದ್ದಾಳ. ಅವಳ ಜೀವನ ದಾರುಣವಾಗೂದನ್ನು ಕಣ್ಣಾರೆ ನೋಡಬೇಕಾದೀತು.

**ನಾಗಲಾಂಬಿಕೆ :** ದಾರುಣಾಗೂದು ಇನ್ನೇನು ಉಳಿದದ ? ತಂದೆ -ತಾಯಿಗಳಿಲ್ಲದ ನಾವು ಈಗ ಸ್ವತಂತ್ರರು. ನಮಗ ನೀವು ಯಾಕ ? ನಿಮ್ಮ ನೆರಳೂ ಬ್ಯಾಡ.

**ಪುರೋಹಿತ ೧ :** ಏನು. ಹೆಂಗಸಿನ ಬಾಯಾಗ ಇಂಥ ಮಾತು ? ಇದು ಬ್ರಾಹ್ಮಣ ಸಮಾಜಕ್ಕ ಅಪಮಾನ.

**ನಾಗಲಾಂಬಿಕೆ :** ಈ ಅಪಮಾನಕ್ಕ ನೀವು ಅರ್ಹರು. ಶುದ್ಧ ವ್ಯಕ್ತಿತ್ವದ ನನ್ನ ಅಣ್ಣನ ಕೂಡ ಮಾತಾಡಿ, ಅವನ್ನ ಅಪವಿತ್ರಗೊಳಿಸಬ್ಯಾಡ್ರಿ. ನಡಿರಿ ಹೊರಗ. (ಬ್ರಾಹ್ಮಣರು ಹೊರಡುತ್ತಾರೆ). ಅಣ್ಣಾ ಮುಂದೇನು ?

**ಪೂವಮ್ಮ :** ತಾಯೀ, ನಾಗಮ್ಮ ನಿನ್ನ ಅಣ್ಣನ ಧೈರ್ಯವೇ ಧೈರ್ಯ.

**ನಾಗಲಾಂಬೆ :** ಏನು ಧೈರ್ಯವೋ, ಇಂಥ ಅಣ್ಣನ ಪಡೆದುದಕ್ಕ ಧನ್ಯತೆಯೆನಿಸ್ತದ. ಆದರೆ ಸಮಾಜ ಅವನ ವಿಷಯವಾಗಿ ಇಷ್ಟು ಕ್ರೂರವಾಗಿ ವರ್ತಿಸ್ತದಂತ ನಾ ಊಹಿಸಿರಲಿಲ್ಲ.

**ಪೂವಮ್ಮ :** ತಾಯೀ, ದೇವರು ದೊಡ್ಡವ, ಅವ ಸತ್ಯದ ಹಿಂದ ಇರತಾನ. ನಿಮ್ಮ ಹಿಂದ ಇದ್ದಾನ, ಭಯಪಡಬ್ಯಾಡರಿ.

**ಬಸವಣ್ಣ :** ಹೌದು ಭಯಪಡುವ ಕಾರಣವಿಲ್ಲ. ಈಗ ಎಲ್ಲರೂ ದಣಿದೀವಿ, ಈ ಬಗ್ಗೆ ನಾಳೆ ಮಾತಾಡೋಣ, ಏಳಿರಿ.

## ದೃಶ್ಯ - ೯

(ಬಸವಣ್ಣ, ನಾಗಲಾಂಬೆ ಬಾಗೆವಾಡಿ ಬಿಡುವ ದೃಶ್ಯ. ನಾಗಲಾಂಬೆ ಗಂಟು ಕಟ್ಟುತ್ತಿದ್ದಾಳೆ. ಬಸವಣ್ಣ ಕೋಲಿನ ಎರಡೂ ತುದಿಗೆ ಗಂಟು ಕಟ್ಟುತ್ತಿದ್ದಾನೆ).

**ನಾಗಲಾಂಬೆ :** ಅಣ್ಣಾ, ನಮ್ಮ ವಿಷಯದಲ್ಲಿ ಈ ಅಗ್ರಹಾರ ಉಗ್ರವಾಗಿ ವರ್ತಿಸಿತು.

**ಬಸವಣ್ಣ ;** ಸ್ವಲ್ಪ ತಡಿ, ಮಧ್ಯಾಹ್ನದ ಬಿಸಿಲು ಬಹಳ ಹೊತ್ತು ಉಳಿಯೂದಿಲ್ಲ. ರಾಜನ ರಕ್ಷಣೆಯಲ್ಲಿರುವ ಇವರು ಶೋಷಿತ ಜನರ ವಿರೋಧ ಎದುರಿಸೂ ದಿನ ದೂರವಿಲ್ಲ.

**ನಾಗಲಾಂಬೆ :** ಜನಸಾಮಾನ್ಯರಿಗೆ ವಿರೋಧಿಸುವ ವಿಚಾರ ಗೊತ್ತಾಗೂದಾದರೂ ಹೇಗೆ ?

**ಬಸವಣ್ಣ :** ಇವರ ಮಧ್ಯದಿಂದಲೇ ಒಬ್ಬ ನಾಯಕವ್ಯಕ್ತಿ ಹುಟ್ತಾನ. ಸಮಾಜವನ್ನು ಈ ಶೋಷಕರ ವಿರುದ್ಧ ಸಂಘಟಿಸ್ತಾನ, ಶೋಷಿತರನ್ನು ಉದ್ಧರಿಸ್ತಾನ.

**ನಾಗಲಾಂಬೆ :** ನೀನೇ ಯಾಕ ಆ ನಾಯಕತ್ವ ವಹಿಸಬಾರದು ?

**ಬಸವಣ್ಣ :** ಕಾಲ ಕೂಡಿ ಬರಲಿ, ನೋಡೋಣ....

(ಅಷ್ಟರಲ್ಲಿ ಮನೆಯ ಹೆಣ್ಣು, ಗಂಡು ಆಳುಗಳು ಕಣ್ಣೀರಿಡುತ್ತ ಬರುತ್ತಾರೆ).

**ಬಸವಣ್ಣ :** (ಎದ್ದು ನಿಂತು) ದುಃಖಿಸಬ್ಯಾಡ್ರಿ. ಈ ಊರಿನ ಉಸಿರುಗಟ್ಟಿದ ವಾತಾವರಣದಾಗ ನಾನು ಬಾಳಲಾರೆ, ಬೆಳೆಯಲಾರೆ. ಈ ಊರ ಬಿಡೂದು ನನಗ ಅನಿವಾರ್ಯ ಆಗ್ಯಾದ. ತಂಗಿನ್ನ ಇಲ್ಲಿ ಬಿಟ್ಟು ಹೋಗೂದು ಸರಿ ಅಲ್ಲ. ಕಾರಣ ನಾವಿಬ್ಬರೂ ಈ ನೆಲದ ಹಂಗ ಹರಕೊಂಡು ಕೂಡಲಸಂಗಮಕ್ಕ ಹೊಂಟೀವಿ.

**ಆಳುಗಳು :** ಧಣೀ, ಈಗೇನೋ ಕೂಡಲಸಂಗಮಕ್ಕ ಹೋಗುತೀರಿ. ಆಮೇಲೆ ? ಗೊತ್ತು ಗುರಿ ಇಲ್ಲದೆ ಹೀಂಗ ಹೊರಟರ ಹ್ಯಾಂಗ ?

**ಬಸವಣ್ಣ :** ನಿಮ್ಮ ದೃಷ್ಟ್ಯಾಗ ನನ್ನ ಪ್ರಯಾಣಕ್ಕ ಗೊತ್ತು ಗುರಿ ಇಲ್ಲ. ಆದರ ನನಗ ಗೊತ್ತು, ಆ ಗುರಿ. ಅದೇ ನನ್ನ ಸಮಾಧಾನದ ಸ್ಥಾನ. ಅಲ್ಲಿಯ ವರೆಗೂ ನಾನು ನಡೀಬೇಕು, ಪಡೀಬೇಕು. ಅದೇ ನನ್ನ ಆಸ್ತಿ. ಮನಿ ಮಗ ನಾನಾಗಿದ್ರೂ ಆಳುಮಕ್ಕಳಂತ ವಂಶಪಾರಂಪರ್ಯ ದುಡಿದು, ಈ ಹೊಲ, ಈ ಮನಿ ಬೆಳೆಸಿದವ್ರು ನೀವು. ಅದಕ್ಕs ಇದು ನಿಮ್ಮ ಆಸ್ತಿ.



**ಆಳುಗಳು :** ಅಲ್ಲ ಒಡೆಯಾ, ಇದು ನಿಮ್ಮ ಆಸ್ತಿ, ನಿಮ್ಮ ಹಿರೇರ ಆಸ್ತಿ.

**ಬಸವಣ್ಣ :** ಸುಳ್ಳು, ಇದು ಬೆಳೆದದ್ದು ನಿಮ್ಮ ಬೆವರಿನಿಂದ. ನಿಮ್ಮ ಆಸ್ತಿ ನಿಮಗ ಕೊಡತೀನಿ. ತಗೊಂಡು ನನ್ನನ್ನು ಋಣಮುಕ್ತ ಮಾಡ್ರಿ. ಹೊಲ-ತ್ವಾಟ, ಮನಿ -ಬಯಲು ಜಾಗ, ಕೊಟ್ಟಿಗ್ಯಾನ ದನ-ಕರು ನೀವೆಲ್ಲ ಆಮ್ಯಾಲ ಹಂಚಿಕೊಳ್ಳಿ. ಈಗ ಈ ದುಡ್ಡು ನಿನಗ, ಚಿನ್ನ-ಬೆಳ್ಳಿ ನಿನಗ, ಮುತ್ತು ಹವಳದ ಆಭರಣ ಕಸಗೂಡಿಸುವ ನಿನಗ, ಒಳಗಿನ ಪಾತ್ರೆ-ಪಗಡಿ ನೀ ತೆಗೆದುಕೊ (ಹೀಗೆ ಹೇಳುತ್ತ ಗಂಡು ಹೆಣ್ಣು ಆಳುಗಳಿಗೆ ಹಂಚಿಕೊಟ್ಟು, ತಂಗಿಯೊಂದಿಗೆ ಹೊರಡುತ್ತಾನೆ. ನಾಗಲಾಂಬೆ ತಲೆಯ ಮೇಲೆ, ಬಗಲಲ್ಲಿ ಗಂಟುಹೊರುತ್ತಾಳೆ. ಬಸವಣ್ಣ ಕೋಲು ಹೆಗಲಿಗೇರಿಸುತ್ತಾನೆ. ಆಳುಗಳು ದುಃಖಿಸುತ್ತಾರೆ. ಬ್ರಾಹ್ಮಣರು ಬಾಗಿಲು ಮುಚ್ಚಿಕೊಳ್ಳುತ್ತಾರೆ. ಗ್ರಾಮದ ಮಿಕ್ಕ ಜನಸಮುದಾಯ ಅವರು ಹೊರಟ ದಾರಿಯನ್ನು ನೋಡುತ್ತ ಕಣ್ಣೀರು ಸುರಿಸುತ್ತಾರೆ. "ಸ್ಥಾವರಕ್ಕಳಿವುಂಟು. ಜಂಗಮಕ್ಕಳಿವಿಲ್ಲ" ಧ್ಯೇಯವಾಕ್ಯ ಪದೇ ಪದೇ ಹಿನ್ನೆಲೆಯಾಗಿ ಕೇಳಿಸುತ್ತದೆ. ಪ್ರಯಾಣ ಬೆಳೆಸುತ್ತಾರೆ).

## ದೃಶ್ಯ - ೧೦

(ಕೂಡಲಸಂಗಮ ದೇವಸ್ಥಾನದಲ್ಲಿ ಇಷ್ಟಲಿಂಗ ಪೂಜಾನಿರತ ಬಸವಣ್ಣ. ಮರಿಯೊಂದಿಗೆ ಓಡಿಬಂದ ಕುರಿ ದೇವಾಲಯವನ್ನು ಪ್ರವೇಶಿಸಿ, ಲಿಂಗದ ಹಿಂದೆ ನಿಲ್ಲುತ್ತದೆ. ಎಡವಿದ ಗಂಟೆ, ಆರತಿ ಬಿದ್ದು ಸಪ್ಪಳವಾಗುತ್ತದೆ. ಬಸವಣ್ಣನಿಗೆ ಎಚ್ಚರ. ಕುರಿ ಅಂಜಿ ಅರಚುತ್ತದೆ. ಅಷ್ಟರಲ್ಲಿ ಇಬ್ಬರು ಬ್ರಾಹ್ಮಣರು ಕೈಯಲ್ಲಿ ಮಚ್ಚು ಹಿಡಿದು ಓಡಿಬರುತ್ತಾರೆ).

**ಬಸವಣ್ಣ :** (ಮರಿ ಎತ್ತಿಕೊಂಡು) ಏನಯ್ಯಾ ಇದು ?

**ವಿಪ್ರ ೧ :** ವರುಣಯಜ್ಞಕ್ಕ ತಂದ ಹರಕೆಯ ಕುರಿ, ಮರಿಯೊಂದಿಗೆ ಬಲಿ ಕೊಡಬೇಕೆನ್ನುವಷ್ಟರಾಗ ತಪ್ಪಿಸಿಕೊಂಡು ಓಡಿ ಬಂತು.

**ಬಸವಣ್ಣ :** ಈಗ ಏನ ಮಾಡತೀರಿ ?

**ವಿಪ್ರ ೨ :** ಒಯ್ಯತೀವಿ. ಯಜ್ಞಕ್ಕ ಬಲಿ ಕುಡತೀವಿ, ವರುಣನ್ನ ತೃಪ್ತಿಪಡಿಸಿ ಮಳಿ ಬರಿಸತೀವಿ.

**ಬಸವಣ್ಣ :** ಮಳಿ ಬರದಿದ್ದರ ? (ವಿಪ್ರರು ಪರಸ್ಪರ ಮುಖ ನೋಡಿಕೊಂಡು ನಿರುತ್ತರರಾಗುತ್ತಾರೆ). ಹೇಳಿ, ಮಳಿ ಬರದಿದ್ದರ ಏನ ಮಾಡ್ತೀರಿ?

**ವಿಪ್ರ ೧:** ಮಳಿ ಬರದಿದ್ದರೇನಾಯ್ತು, ಕುರಿ ಕೊಂದು ಹೊಟ್ಟಿ ತುಂಬ ಊಟ ಮಾಡತೀವಿ,

**ಬಸವಣ್ಣ :** ಊಟಕ್ಕ ಪ್ರಾಣಿಯೇ ಬೇಕಿದ್ದರ ಹೋಮದ ನೆವ ಯಾಕ? ಹೋಗಲಿ, ಊಟಕ್ಕ ಪ್ರಾಣೀನs ಬೇಕೇನು ?

**ವಿಪ್ರ ೨ :** ನಮಗೇನೂ ಗೊತ್ತಿಲ್ಲ. ನಮ್ಮ ಋತ್ವಿಜರು ಹೇಳ್ಯಾರ, ಈ ಕುರಿ ಒಯ್ಯತೀವಿ. (ಕುರಿ ಹಿಡಿಯಲು ಹೋಗುತ್ತಾರೆ. ಮರಿಯನ್ನು ಇಳಿಸಿ, ಬಸವಣ್ಣ ಅಡ್ಡಗಟ್ಟಿ ಕುರಿ ಹಿಡಿಯುತ್ತಾನೆ).

**ಬಸವಣ್ಣ :** ನಾನು ಕುರಿ ಬಿಡೂದಿಲ್ಲ. ನನ್ನನ್ನs ಬಲಿ ತಗೊಂಡು, ಈ ಪ್ರಾಣಿನ್ನ ಕೈಬಿಡಲು ನಿಮ್ಮ ಋತ್ವಿಜರಿಗೆ ಹೇಳಿರಿ. ನರಬಲಿಯಿಂದ ವರುಣ ಇನ್ನೂ ಸಂತೃಪ್ತನಾದಾನು. ನಾಳೆ ಬರುವ ಮಳಿ ಇಂದೇ ಬಂದೀತು.

**ವಿಪ್ರ ೨:** ಇಂಥ ಬಣ್ಣದ ಮಾತ ಆಡ ಬ್ಯಾಡ. ಬಿಡದಿದ್ದರ ಈ ಕುರಿನ್ನs ಇಲ್ಲೇ ಸಂಗಮೇಶ್ವರನಿಗಿ ಬಲಿ ಕೊಡತೀವಿ. (ಕೈಯಲ್ಲಿಯ ಮಚ್ಚು ಬೀಸುತ್ತಾನೆ. ಬಸವಣ್ಣ ಎರಡೂ ಕೈಗಳಿಂದ ಹಿಡಿಯುತ್ತಾನೆ. ರಕ್ತ ಸುರಿಯುತ್ತದೆ. ನಾಗಲಾ, ನಾಗಲಾ, ನಂದಿಕೇಶಾ, ನಂದಿಕೇಶಾ ಎಂದು ಬಸವಣ್ಣ ಕೂಗುತ್ತಾನೆ. ವಿಪ್ರರು ಅಂಜಿ ಮಚ್ಚು ಒಗೆದು ಓಡುತ್ತಾರೆ. ನಾಗಲಾಂಬಿಕೆ, ನಂದಿಕೇಶ ದನಿ ಕೇಳಿ ಓಡಿ ಬರುತ್ತಾರೆ. ಅಣ್ಣನ ಅವಸ್ಥೆಯನ್ನು ನೋಡಿ, ನಾಗಲಾಂಬಿಕೆ ಚಿಟ್ಟನೇ ಚೀರಿ)

**ನಾಗಲಾಂಬೆ :** ಅಣ್ಣಾ, ಅಣ್ಣಾ, ಅಯ್ಯೋ (ವಸತಿಗೃಹದ ವಿದ್ಯಾರ್ಥಿಗಳು ಓಡಿಬರುತ್ತಾರೆ. ನಾಗಲಾಂಬಿಕೆ ಸೆರಗು ಹರಿದು ಬಸವಣ್ಣನ ಕೈಗೆ ಕಟ್ಟತೊಡಗುತ್ತಾಳೆ).

**ನಂದಿಕೇಶ :** ಏನು ಬಸವಾ ನಿನ್ನ ಸ್ಥಿತಿ ?

**ಬಸವಣ್ಣ :** (ಕುರಿಯತ್ತ ನೋಡುತ್ತ) ವೈದಿಕರ ಯಜ್ಞಕ್ಕ ಬಲಿಯಾಗತಿದ್ದ ಕುರಿ ತಪ್ಪಿಸಿಕೊಂಡು ಬಂದು, ದೇವಾಲಯ ಹೊಕ್ಕತು. ಬೆನ್ನಟ್ಟಿ ಬಂದ ವಿಪ್ರರಿಂದ ಬಿಡಿಸಲು ಯತ್ನಿಸಿದೆ. (ಅಂಗೈ ಬಿಚ್ಚಿ ತೋರಿಸುತ್ತ) ಈ ಸ್ಥಿತಿ.

**ನಂದಿಕೇಶ :** ಏನ ನಿನ್ನ ಅಂತಃಕರಣ. ಕುರಿ ಉಳಿಸಿಕೊಳ್ಳಲು ಹೋಗಿ ಕೈಕಳೆದುಕೊಳ್ಳೂದ ?

**ನಾಗಲಾಂಬೆ :** ಅಯ್ಯೋ ವೈದಿಕರ ಕ್ರೌರ್ಯವೇ, ಅಯ್ಯೋ ಅಣ್ಣನ ಕರುಣವೇ (ರಕ್ತ ತೊಳೆಯುವ, ಅರಿವೆ ಸುತ್ತುವ ಕೆಲಸ ನಡೆಯುತ್ತದೆ).

**ಬಸವಣ್ಣ :** (ಮರಿಯನ್ನು ಎತ್ತಿಕೊಂಡು) ನೋಡಿ, ಅಂಜಿದ ಮರಿ ಇನ್ನೂ ಅರಚತದ. (ದುಃಖಭಾವದಿಂದ) ಅಯ್ಯೋ ನಿರ್ದಯವೇ, ದಯವಿಲ್ಲದ ಧರ್ಮವೇ. ದಯವಿಲ್ಲದ ಧರ್ಮ ಅದೇವುದು ಕೂಡಲಸಂಗಾ !

## ದೃಶ್ಯ - ೧೧

(ಕೂಡಲಸಂಗಮನಾಥ ದೇವಾಲಯ. ದೇವರ ಕಡೆಗೆ ಬೆನ್ನು ಮಾಡಿ ಕುಳಿತ ಬಸವಣ್ಣನ ಇಷ್ಟಲಿಂಗ ಪೂಜೆ).



**ಈಶಾನ್ಯಗುರು :** (ಪ್ರವೇಶಿಸಿ) ಏನು ವಿಚಿತ್ರ ಬಾಲಕ ! ಕಳೆದ ಕೆಲವು ತಿಂಗಳಿಂದ ಸಂಗಮನಾಥಲಿಂಗದ ಸೋಮವಾರ ಉತ್ಸವಕ ಈತ ಬರತಾ ಇಲ್ಲ. ಹೋಗಲಿ, ಸ್ವಯಂಭೂ ಸಂಗಮನಾಥಲಿಂಗಕ್ಕ ಎಲ್ಲರೂ ಸಮ್ಮುಖವಾಗಿ ಕುಳತರ, ಈತ ವಿಮುಖವಾಗಿ ಕುಳತಾನ. ಅಂಗೈಯಲ್ಲಿ ಲಿಂಗ ಪೂಜಿಸತಿದ್ದಾನ. ಸೂರ್ಯನ ಕಡಿಗಿ ಬೆನ್ನ ಮಾಡಿ, ದೀಪ ಹಚಗೊಂಡ ಕುಳಿತ್ಹಾಂಗ.

**ಬಸವಣ್ಣ :** ಹೊರಗೆ ಪೂಜಿಸಿ ಏನ ಮಾಡುವೆನಯ್ಯಾ.

ಒಳಗೆ ಶುದ್ಧನಾಗದನ್ನಕ್ಕ ?<br>
ಒಳಗೆ ಶುದ್ಧವಾಗದನ್ನಕ್ಕ ?<br>
ಒಳಗೆ ಶುದ್ಧವಾಗದನ್ನಕ್ಕ ?

(ಎಂದು ಗಂಭೀರವಾಗಿ ಹೇಳುತ್ತ ಹೇಳುತ್ತ ಕಣ್ಣು ತೆರೆಯುತ್ತಾನೆ).

**ಈಶಾನ್ಯಗುರು :** ಹೌದು, ಒಳಗ ಶುದ್ಧವಾಗದಿದ್ರ ಹೊರಗ ಮಾಡಿದ ಪೂಜೆ ವ್ಯರ್ಥ. ಆದರ ಒಳಗ ಶುದ್ಧವಾಗೂದಕ್ಕ ಹೊರಗಿನ ಪೂಜೆ ಅಗತ್ಯ. ಬಸವಣ್ಣಾ, ನೀನು ಮಾತ್ರ ಹೊರಗಿನ ಸ್ವಯಂಭೂಲಿಂಗದ ಪೂಜೆ ಬಿಟ್ಟು, ಇದೇನು ಪೂಜೆ ಮಾಡತಾ ಇದ್ದೀ.

**ಬಸವಣ್ಣ :** ಹೌದು, ಗುರುಗಳೇ, ಮನುಷ್ಯನಿಗೆ ಮುಖ್ಯವಾದುದು ಒಳಗಿನ ಶುದ್ಧೀಕರಣ. ಅದಕ್ಕ ಅಗತ್ಯವಾದುದು ಆತ್ಮಧ್ಯಾನ. ಆದರೆ ಇಂದು ಹೊರಗಿನ ಸ್ಥಾವರಲಿಂಗ ಪೂಜೆ ಒಂದು ಕಡಿ ಬೆಳೆದು, ಒಳಗಿನ ಆತ್ಮಧ್ಯಾನ ಅಲಕ್ಷ್ಯಕ್ಕ ಗುರಿಯಾಗ್ಯಾದ. ಇದನ್ನು ತಪ್ಪಿಸಬೇಕಾದ್ರ ಆತ್ಮವನ್ನೇ ಲಿಂಗ ಅಂತ ಭಾವಿಸಬೇಕು. ಅದರ ಕುರುಹಾಗಿರುವ ಈ ಇಷ್ಟಲಿಂಗ ಪೂಜೆ ಮಾಡಬೇಕು.

**ಈಶಾನ್ಯ ಗುರು :** ಶೈವ ಆಚಾರ್ಯರು ದೇವರ ಜಗುಲಿಯ ಮೇಲಿಟ್ಟು ಪೂಜಿಸೂದು, ಪ್ರವಾಸದಾಗ ಎದಿ ಮ್ಯಾಲ ಕಟಗೊಂಡು ಹೋಗೂದೂ ಇಷ್ಟಲಿಂಗವಲ್ಲವೇ ?

**ಬಸವಣ್ಣ :** ಹೌದು, ಅದರ ಹೆಸರೂ ಇಷ್ಟಲಿಂಗ. ಆದರ ಅದರ ಪೂರ್ವಾಶ್ರಯ ಕಳೆದು, ಅಂದರ ಹಳೆಯ ಅರ್ಥ ಕಳೆದು ಹೊಸ ಅರ್ಥ ತುಂಬೀನಿ. ಹೀಗಾಗಿ ಅದರಿಂದ ಇದು ಬ್ಯಾರೆ.

**ಈಶಾನ್ಯಗುರು :** ಹ್ಯಾಂಗ ?

**ಬಸವಣ್ಣ :** ಶೈವರ ಇಷ್ಟಲಿಂಗ ಅವರ ಇಷ್ಟದೇವತೆಯಾದ ಗುಡಿಯೊಳಗಿನ ಸ್ಥಾವರಲಿಂಗದ ಪ್ರತೀಕ. ಇದು ಒಳಗಿನ ಆತ್ಮಲಿಂಗದ ಕುರುಹು.

**ಈಶಾನ್ಯಗುರು :** ಆತ್ಮವನ್ನೇ ಲಿಂಗ ಅಂತ ಭಾವಿಸಿದ ಬಳಿಕ ಈ ಕುರುಹು ಮತ್ಯಾಕ, ಬಸವಾ ?

**ಬಸವಣ್ಣ :** ನಿರಾಕಾರವಾಗಿರುವ ಆತ್ಮದ ಶುದ್ಧಿsಗಿ, ಅದರ ಸಾಕಾರರೂಪವಾದ ಈ ಕುರುಹು ಒಂದು ಸುಲಭ ಸಾಧನ. ಈ ಲಿಂಗವನ್ನು ಅನುಸಂಧಾನ ಮಾಡುವವರೆಲ್ಲ ಲಿಂಗಾಯತರು. ಇದು ಅವರ ದೇಹದ ಮ್ಯಾಲ ಇರಬೇಕು.

**ಈಶಾನ್ಯಗುರು :** ಹಾಗಾದರ ಇದು ಜನಿವಾರದ ಇನ್ನೊಂದು ರೂಪ ಅಲ್ಲ ?

**ಬಸವಣ್ಣ :** ಅಲ್ಲ, ಅಲ್ಲ, ಕೊರಳಾಗ ಕಟಗೊಂಡ ಮಾತ್ರಕ್ಕ ಎರಡೂ ಒಂದೇ ಅಲ್ಲ. ಜನಿವಾರ ಧರಿಸುತ್ತಲೇ ವ್ಯಕ್ತಿ ಬ್ರಾಹ್ಮಣ ಆಗತಾನ. ಅವತ್ತಿನಿಂದಲೇ ಸಮಾಜವನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಅಂತ ವರ್ಗೀಕರಿಸಿ ಬಾಳಲು ಸುರು ಮಾಡತಾನ. ಇದಕ್ಕ ವಿರುದ್ಧ ಅನ್ನೂ ಹಾಂಗ ಈ ಲಿಂಗ, ವೈದಿಕರು ಸೃಷ್ಟಿಸಿರುವ ವರ್ಣಭೇದ ಅಳಿಸಿ ಹಾಕ್ತದ. ಅಂದರ ಜನಿವಾರ ಸಮಾಜವನ್ನು ಒಡದರ, ಶಿವದಾರ ಒಂದಗೂಡಸ್ತದ. ಅವರನ್ನು ಭಕ್ತರೆಂದು ಮನ್ನಿಸ್ತದ, ಮಿಕ್ಕವರನ್ನು ಭವಿಗಳೆಂದು ಗುರುತಿಸ್ತದ.

**ಈಶಾನ್ಯ ಗುರು ;** ಹಾಗಾದರ ಜನಿವಾರ ನಾಲ್ಕು ವರ್ಗ ಮಾಡಿದರ ಶಿವದಾರ ಭಕ್ತ-ಭವಿ ಎರಡು ವರ್ಗ ಮಾಡತದಲ್ಲ?

**ಬಸವಣ್ಣ :** ಹಾಗಲ್ಲ, ಗುರುಗಳೇ, ಜನಿವಾರ ಜನರನ್ನ ಜನನ ನೋಡಿ ವರ್ಗೀಕರಿಸಿದರ, ಇಷ್ಟಲಿಂಗ ಗುಣ ನೋಡಿ ವರ್ಗೀಕರಿಸ್ತದ. ಜನನ ನೋಡಿ ಮಾಡೂ ವರ್ಗೀಕರಣದಾಗ ಗುಣಕ್ಕ ಕಿಮ್ಮತ್ತಿಲ್ಲ, ಜನನಕ್ಕs ಕಿಮ್ಮತ್ತು. ಗುಣ ನೋಡಿ ಮಾಡೂ ವರ್ಗೀಕರಣದಾಗ ಜನನಕ್ಕ ಕಿಮ್ಮತ್ತಿಲ್ಲ, ಗುಣಕ್ಕs ಕಿಮ್ಮತ್ತು. ಇಷ್ಟs ಅಲ್ಲ, ಸದಾಚಾರಿಯಾದ ಶೂದ್ರ ಆಗಲಿ, ವೈಶ್ಯ ಆಗಲಿ, ಯಾಕ? ಕ್ಷತ್ರಿಯನೂ ಬ್ರಾಹ್ಮಣನಾಗಲು ಬರೂದಿಲ್ಲ. ಬ್ರಾಹ್ಮಣ ಆಗಬೇಕಾದ್ರ ಅವ ಮತ್ತೊಮ್ಮೆ ಹುಟ್ಟಿ ಬರಬೇಕು. ಲಿಂಗಾಯತ ಹೀಂಗಲ್ಲ. ಅನಾಚಾರದಿಂದ ಭವಿಯೆನಿಸಿದವ ಈ ಜನ್ಮದಲ್ಲೇ ಸದಾಚಾರದಿಂದ ಭಕ್ತ ಆಗಬಹುದು. ಇದು ಇಷ್ಟಲಿಂಗದ ಸಾಮಾಜಿಕ ಮಹತ್ವ.

**ಈಶಾನ್ಯ ಗುರು :** ಆಧ್ಯಾತ್ಮಿಕವಾಗಿಯೂ ಇಷ್ಟಲಿಂಗ, ಯಜ್ಞೋಪವೀತಗಳಲ್ಲಿ ಭೇದ ಅದ?

**ಬಸವಣ್ಣ :** ಖಂಡಿತವಾಗಿಯೂ ಭೇದ ಅದ. ಲಿಂಗತತ್ವ ಬ್ಯಾರೆ, ಯಜ್ಞೋಪವೀತತತ್ವ ಬ್ಯಾರೆ. ಯಜ್ಞೋಪವೀತಧಾರಣೆ ಯಜ್ಞ ಮಾಡೂ ಅಧಿಕಾರ ಕೊಟ್ಟರ, ಲಿಂಗಧಾರಣೆ ಆತ್ಮಶುದ್ಧಿಗಿ ಅನುವು ಮಾಡಿಕೊಡ್ತದ. ಅದಕ್ಕs ಅಂಗ ಲಿಂಗವಾಗುವುದರ ಸಲುವಾಗಿ ಈ ಲಿಂಗಪೂಜೆ ಅವಶ್ಯ.

**ಈಶಾನ್ಯಗುರು :** ಈ ಲಿಂಗ ಪೂಜಿಸಿ ಲಿಂಗವಾದ ಬಳಿಕ ಇದನ್ನು ಬಿಡಬಹುದಲ್ಲ?

**ಬಸವಣ್ಣ :** ಇಲ್ಲ, ಲಿಂಗದ ಉಪಾಸನೆ ಅಂದರ ಆತ್ಮಧ್ಯಾನವಾಗಿರುವುದರಿಂದ ಇದರ ಉಪಾಸನೆ ಬಿಟ್ಟರ ಆತ್ಮಧ್ಯಾನ ಬಿಟ್ಟ ಹಾಗೆಯೇ ? ಆತ್ಮಧ್ಯಾನ ಬಿಡಬೇಕ ?



**ಈಶಾನ್ಯಗುರು :** ಇಲ್ಲ, ಆತ್ಮಕ್ಕ ಮನಸ್ಸ ಅನ್ನೂ ಹಾವಸೆ ಆವರಿಸಿರ್‍ತದ. ತಿಳಿನೀರಿಗಾಗಿ ಹಾವಸೆಯನ್ನು ಮತ್ತ ಮತ್ತ ದೂರ ದೂರ ಸರಿಸೂ ಹಾಂಗ, ಆತ್ಮಶುದ್ಧಿಗಾಗಿ ಮನಸ್ಸೆಂಬ ಹಾವಸೆ ದೂರ ಮಾಡಲು ನಿತ್ಯ ನಿತ್ಯ ಆತ್ಮಧ್ಯಾನ ......

**ಬಸವಣ್ಣ :** ಅಂದರ ನಿತ್ಯ ನಿತ್ಯ ಆತ್ಮಲಿಂಗಪೂಜೆ ನಡಿಬೇಕು, ಇದು ನಿತ್ಯವೂ ನಡಸೂ ಆತ್ಮಾವಲೋಕನ, ಆತ್ಮವಿಮರ್ಶೆ. ಇದರಿಂದ ಸಾಧ್ಯವಾಗೂ ಆತ್ಮಶುದ್ಧಿಯ ವಿವಿಧ ರೂಪಗಳೇ ಸತ್ಯ, ಶಾಂತಿ, ದಯೆ, ಇತ್ಯಾದಿ ಸದ್ಗುಣಗಳು. ಇದೇ ವ್ಯಕ್ತಿ ಮಾನವ ಆಗೂದು.

**ಈಶಾನ್ಯಗುರು :** ಹೌದು ಬಸವಾ, ಇದೇ ಅಂಗ ಲಿಂಗವಾಗೂದು. ಬಸವ ಬಸವಲಿಂಗನಾಗೂದು; ಬಸವ ಬಸವಲಿಂಗನಾಗೂದು. ನೀನು ಆವಿಷ್ಕರಿಸಿರುವ ಈ ಇಷ್ಟಲಿಂಗ ತತ್ವ ಲೋಕಕ್ಕೆ ನೀನು ನೀಡಿರುವ ಹೊಸ ಕಾಣಿಕೆ, ಬಸವಾ. ಹೊಸ ಕಾಣಿಕೆ. (ಬಸವಣ್ಣ ನಮಸ್ಕರಿಸುತ್ತಾನೆ. ಗುರು ಆಶೀರ್ವದಿಸುತ್ತಾನೆ. 'ಸ್ಥಾವರಕ್ಕಳಿವುಂಟು.... " ಎಂಬ ಧ್ಯೇಯ ವಾಕ್ಯ ಕೇಳಿಸುತ್ತದೆ).

## ದೃಶ್ಯ - ೧೨

(ಕೂಡಲಸಂಗಮ ಮಠ, "ಪಶುಪತಿ ಶಿವಾಚಾರ್ಯರಿಗೆ ಜಯವಾಗಲಿ, ಹರಹರಮಹಾದೇವ" ಎಂಬ ಘೋಷಣೆಯೊಂದಿಗೆ ಬಂದು ಪೀಠದ ಮೇಲೆ ಪಶುಪತಿಶಿವಾಚಾರ್ಯ ಕುಳಿತುಕೊಳ್ಳುವನು. ಎಡಬಲದಲ್ಲಿ ಸೇವಕರು, ಮಾರ್ಜಾಲಪ್ಪ, ಸಮೀಪದಲ್ಲಿ, ಈಶಾನ್ಯಗುರು ನಿಂತಿದ್ದಾರೆ).

**ಪಶುಪತಿ :** ಈಶಾನ್ಯಗುರುಗಳೇ, ಮಠದಾಗ ವಿದ್ಯಾಭ್ಯಾಸ ಚೆನ್ನಾಗಿ ಸಾಗಿದೆಯೇ ? ವಿದ್ಯಾರ್ಥಿಗಳು ನಮ್ಮ ನಿಯಮಗಳಿಗೆ ಬದ್ಧರಾಗಿ ಅಧ್ಯಯನ ಮಾಡ್ತಿದ್ದಾರ ?

**ಈಶಾನ್ಯಗುರು :** ಮಾಡ್ತಿದ್ದಾರ,

**ಪಶುಪತಿ :** ಏನೋ, ಬಸವಣ್ಣನ ಬಗ್ಗೆ ಕೆಲವು ಆರೋಪ ಅವ.

**ಈಶಾನ್ಯಗುರು ;** ಹಾಗೇನೂ ಇಲ್ಲ, ನನ್ನ ದೃಷ್ಟಿಯೊಳಗ ಅವನೊಬ್ಬ ವಿಶಿಷ್ಟ ವಿದ್ಯಾರ್ಥಿ. ಸ್ವತಂತ್ರ ವಿಚಾರವಾದಿ.

**ಪಶುಪತಿ :** ನಮಗೆ ಅಂಥವರು ಬೇಕಿಲ್ಲ. ಮಠ ಪ್ರವೇಶಿಸಿದ ಹೊಸದರಲ್ಲಿ ಈ ಅಭ್ಯಾಸ ವ್ಯರ್ಥ ಅಂತ ವರ್ಗದಲ್ಲೇ ಹೇಳಿದನಂತ. ಇದರಿಂದ ಉಳಿದ ವಿದ್ಯಾರ್ಥಿಗಳ ಮ್ಯಾಲ ಏನ ಪರಿಣಾಮವಾದೀತು?

**ಈಶಾನ್ಯಗುರು ;** ಅವ ಹೇಳೂದು ಕೆಲಮಟ್ಟಿಗೆ ಸರಿ ಅದ. ವಿಚಾರಸಾಹಿತ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಅವ ಅಪೇಕ್ಷಿಸತಾನ.

**ಪಶುಪತಿ :** ಏನು, ವಿಚಾರ ಮತ್ತು ಸ್ವಾತಂತ್ರ್ಯ ? ಅಂಥವುಗಳಿಗೆ ಇಲ್ಲಿ ಅವಕಾಶವಿಲ್ಲ. ಅಂಥವರಿಗೆ ಇಲ್ಲಿ ಜಾಗವಿಲ್ಲ. ನೀವು ನಿಗ್ರಹಿಸದಿದ್ರ ಅವನನ್ನು ನಾವು ನಿಗ್ರಹಿಸಬೇಕಾಗತದ.

**ಈಶಾನ್ಯಗುರು :** ಪರಿಸ್ಥಿತಿ ನೀವು ಕೈ ಹಾಕುವಷ್ಟು ಗಂಭೀರವೇನಿಲ್ಲ.

**ಪಶುಪತಿ :** ನಿಮಗ ಅವನ ಬಗ್ಗೆ ವಿಶೇಷ ಪ್ರೀತಿ ಅಂತ ಕೇಳೀವಿ. ಇತ್ತೀಚೆ ಅವ ಸ್ವಯಂಭೂ ಸಂಗಮನಾಥ ಲಿಂಗದ ಪೂಜೆ ಮಾಡೂದೂ ಬಿಟ್ಟಾನಂತ. ಗುರುಗಳ ಸಮಾಧಿಗೆ ಭಕ್ತರು ಕಾಣಿಕೆ ಅರ್ಪಿಸೂ ಕಾರ್ಯಕ್ರಮಕ್ಕೂ ಮೊನ್ನೆ ಬರಲಿಲ್ಲಂತ ?

**ಈಶಾನ್ಯಗುರು :** ಹೌದು (ತಲೆ ಅಲ್ಲಾಡಿಸುತ್ತಾನೆ).

**ಮಾರ್ಜಾಲಪ್ಪ :** ಏನು ಹೌದು, ಸತ್ತ ಸ್ವಾಮೀ ವರ್ಚಸ್ಸನ್ನು ಹಣ ಗಳಿಸೂ ಸಾಧನಮಾಡಿಕೊಂಡಿರುವ ಕಾರ್ಯಕ್ರಮ ಅಂದನಂತ?

**ಈಶಾನ್ಯಗುರು :** (ಹೌದು ಎಂಬಂತೆ ತಲೆ ಅಲ್ಲಾಡಿಸುತ್ತಾನೆ).

**ಪಶುಪತಿ :** ಮಿಕ್ಕ ವಿದ್ಯಾರ್ಥಿಗಳು ಇವನನ್ನು ಕ್ರಮೇಣ ಅನುಸರಿಸುತ್ತಿರುವರೆಂದೂ ಕೇಳೀವಿ. ಇದನೆಲ್ಲ ಕೈಬಿಡಲು ಬಸವಣ್ಣಗ ಹೇಳ್ರಿ.

**ಈಶಾನ್ಯಗುರು :** ಆ ಮಗುವಿನ ಸ್ವಭಾವನs ವಿಲಕ್ಷಣ ಅದ. ಕಂದಾಚಾರ ಅವಗ ಸೇರೂದಿಲ್ಲ. ಅವನ ಪಾಡಿಗಿ ಅವನನ್ನು ಬಿಡೂದೇ ಲೇಸು. ಅದನ್ನು ತಡೆಯಲು ನನ ಮನಸ್ಸೂ ಒಪ್ಪದು. ಅವನೂ ನನ ಮಾತ ಕೇಳಲಿಕ್ಕಿಲ್ಲ...

**ಪಶುಪತಿ :** ಹಾಗಾದರ ನಾವು ಹೇಳಿತೀವಿ. ಬಸವಣ್ಣನ್ನ ಕರೀರಿ. (ಕರೆಯಲು ಸೇವಕರು ಹೋಗುತ್ತಾರೆ).

**ಮಾರ್ಜಾಲಪ್ಪ :** ಪ್ರಭೂ, ಇವನ ಇತಿಹಾಸ ದೊಡ್ಡದದ. ಈ ರೀತಿ ಸಂಪ್ರದಾಯ ಪ್ರಶ್ನಿಸಿದ ಕಾರಣಕ್ಕಾಗೇ ಇವನ್ನ ಬಾಗೆವಾಡಿಯಿಂದ ಹೊರದೂಡಿದರೆಂದು ನಮಗ ತಡವಾಗಿ ತಿಳೀತು.

**ಪಶುಪತಿ :** ಸೂಜಿಯಾಗಿ ಒಳಗೆ ಬಂದ ಇವನ್ನ ಡಬ್ಬಣವಾಗಿ ಬೆಳೆಯಲು ಬಿಡಬಾರದು. (ಕರೆಯಲು ಹೋದ ಸೇವಕರೊಂದಿಗೆ ಬಸವಣ್ಣ ಬರುತ್ತಾನೆ) ನಿನ್ನನ್ನು ಯಾಕ ಕರೆಸೀವಿ ಗೊತ್ತೋ ?

**ಬಸವಣ್ಣ :** ಗೊತ್ತು.

**ಪಶುಪತಿ :** ಇನ್ನ ಮೇಲಾದರೂ ತಪ್ಪ ತಿದ್ದಿಕೋ.

**ಬಸವಣ್ಣ ;** ಮಾಡದ ತಪ್ಪ ತಿದ್ದಿಕೊಳ್ಳೂದೆಲ್ಲಿ ಬಂತು ? ಗುರುಗಳೇ.



**ಪಶುಪತಿ :** ಹಾಗಾದರೆ ನೀನು ಮಾಡ್ತಿರೋದೇನು ?

**ಬಸವಣ್ಣ ;** ತಪ್ಪನ್ನು ಮಾಡೂದಲ್ಲ. ಇನ್ನೊಬ್ಬರು ಮಾಡಿದ ತಪ್ಪನ್ನು ಆಡೂದು ಅಲ್ಲ, ಆ ತಪ್ಪಿಗೆ ಭಾಗಿಯಾಗದೆ ದೂರ ಉಳಿಯೂದು.

**ಪಶುಪತಿ :** ಹಾಗಾದರೆ ಈ ಸುಕ್ಷೇತ್ರದಾಗ ತಪ್ಪುಗಳಾಗ್ತವ ?

**ಬಸವಣ್ಣ :** ಆಗದೇ ಮತ್ತೇನು ? ತಪ್ಪಿನ ಕಡೆಗೇ ದೇವಾಲಯ, ಮಠ ಎಳಕೊಂಡು ಹೊಂಟೀರಿ. ಜಾತಿ ಭೇದ ಇಲ್ಲದೆ ಎಲ್ಲ ಜನರನ್ನೂ ಒಳಗೊಳ್ಳುತ್ತಿದ್ದ ದೇವಾಲಯದಾಗ, ಮಠದಾಗ ಸಮೂಹಸಂಸ್ಕೃತಿ ನಾಶವಾಗ್ತ ಇದೆ. ಇತ್ತೀಚೆ ಇನ್ನೂ...

**ಪಶುಪತಿ :** ಏನೂ ? (ಎದ್ದು ಬಂದು ಬೆತ್ತದಿಂದ ಥಳಿಸುತ್ತ) ಇವನನ್ನು ಮಠದಿಂದ ಹೊರಗ ಹಾಕಿರಿ. (ಬೀಸಿದ ಬೆತ್ತ ತಾಗಿ, ಉರಿಯುತ್ತಿದ್ದ ತೂಗುದೀಪ ಹೊಯ್ದಾಡಿ ಹರಿದು ಬೀಳುತ್ತದೆ).

**ಈಶಾನ್ಯ ಗುರು :** (ಮಧ್ಯೆ ಪ್ರವೇಶಿಸಿ) ಬ್ಯಾಡ್ರಿ, ಬ್ಯಾಡ್ರಿ. ಅಗ್ರಹಾರದ ಕ್ರೂರ ಕೈಯಿಂದ ಬಿಡಿಸಿಕೊಂಡ ಬಂದ ಈ ಮಗುವನ್ನು ಮಠದ ಕಾಲಿನಿಂದ ಹೊರದೂಡಬ್ಯಾಡ್ರಿ. ನಾನು ಇವನನ್ನ ತಿದ್ದತೀನಿ. ಶಿವಸಂಸ್ಕೃತಿಯ ವ್ಯಕ್ತಿಯಾಗಿ ಬೆಳಸತೀನಿ. (ಎನ್ನುತ್ತ ಈಶಾನ್ಯಗುರು ಅಪ್ಪಿಕೊಂಡು ಹೊರಗೆ ಹೋಗುತ್ತಾನೆ. ಪಶುಪತಿ ಶಿವಾಚಾರ್ಯ ಸಿಟ್ಟಿನಿಂದ ಬುಸುಗುಡುತ್ತ ಒಳಗೆ ಹೋಗುತ್ತಾನೆ. ಎಲ್ಲರೂ ಹಿಂಬಾಲಿಸುತ್ತಾರೆ).

## ದೃಶ್ಯ - ೧೩

(ಬಸವಣ್ಣನ ಕೋಣೆ, ಹತ್ತಿರ ಬಂದ ನಂದಿಕೇಶ ಹೊರಗೆ ನಿಂತು ಅವನನ್ನು ಕರೆಯುತ್ತಾನೆ).

**ನಂದಿಕೇಶ :** ಬಸವಾ, ಓದಲು ಮಠಕ್ಕ ಹೋಗೂ ಹೊತ್ತಾಯ್ತು.

**ಬಸವಣ್ಣ :** (ಹೊರಗೆ ಬಂದು) ನಾನು ಇನ್ನ ಮ್ಯಾಲ ಮಠಕ್ಕ, ದೇವಾಲಯಕ್ಕ ಬರೂದಿಲ್ಲ.

**ನಂದಿಕೇಶ :** ಬಸವಾ, ನಿನ್ನೆ ಮಠ ನಿನ್ನನ್ನು ದಂಡಿಸಿದ ಘಟನೆ ತುಂಬ ಕ್ರೂರವಾದುದು. ಹೋಗಲಿ, ನಿನಗೆ ದೇವಾಲಯ, ಮಠ ಅಂದರ ಇಷ್ಟ್ಯಾಕ ಬೇಸರ ?

**ಬಸವಣ್ಣ :** ಅಗ್ರಹಾರ ಸಂಸ್ಕೃತಿಗಿ ಬ್ಯಾಸತ್ತು ಈ ನಾಥಕೇಂದ್ರ ಕಪ್ಪಡಿ ಸಂಗಮಕ ಬಂದರ, ಕಂದಾಚಾರದಿಂದ ದುರ್ಬಲವಾಗಿ ಇದು ಇತ್ತೀಚೆ ಶೈವಾಚಾರ್ಯರ ವಶವಾಗಿ ಬಿಟ್ಟು. ಇಲ್ಲಿ ಧರ್ಮ ಅಂದರ ದೇವಾಲಯ, ದೇವಾಲಯ ಅಂದರ ಧರ್ಮ ಅಂತ ಬೋಧಿಸಲಾಗ್ತದ.

**ನಂದಿಕೇಶ :** ಬೋಧಿಸಿದರೇನಾಯ್ತು? ದೇವಾಲಯ ಬಿಟ್ರ ಧರ್ಮ ಅನ್ನೂದು ಬ್ಯಾರೆ ಏನದ? ನಮ್ಮನ್ನ ಉದ್ಧಾರ ಮಾಡೂ ಕೇಂದ್ರಗಳಿವು.

**ಬಸವಣ್ಣ :** ಅಲ್ಲ, ಈ ಶ್ರೀಮಂತ ದೇವಾಲಯಗಳೂ ಆಚರಣೆಗಳೂ ನಮ್ಮನ್ನ ಉದ್ಧರಿಸಲಾರವು. ಇಲ್ಲಿ ದಾನ-ದಕ್ಷಿಣೆಯ ಮೂಲಕ ಮೇಲು ವರ್ಣದವರನ್ನು ಮೇಲು ವರ್ಗದವರು ಪೋಷಿಸೂದು ನಿರಂತರ ನಡದದ. ಬಡವರು ಶ್ರೀಮಂತರಲ್ಲಿ ಸಾಲಮಾಡಿ, ಭಕ್ತಿ ಸಲ್ಲಿಸುವ ಸ್ಥಿತಿ ನಿರ್ಮಾಣ ಆಗ್ಯಾದ.

**ನಂದಿಕೇಶ :** ಹೌದು, ಜಗದ್ಗುರುಗಳಿಗಿ ಕಾಣಿಕೆ ಅಂತ ಮಾಡಿಸಿಕೊಟ್ಟ ಪಲ್ಲಕ್ಕಿಯ ಸಾಲದಾಗs ಕುಂಬಾರ ಚಿಕ್ಕಣ್ಣ ಇನ್ನೂ ಬಳಲ್ತಿದಾನ.

**ಬಸವಣ್ಣ ;** ಇದು ಹೋಗಲಿ, ಹೆಚ್ಚಿನದಾಗಿ ರಂಗಭೋಗದ ದೇವದಾಸಿ ಪದ್ಧತಿ, ಅಭಿಷೇಕ, ಅಡ್ಡಪಲ್ಲಕ್ಕಿ, ಪೂಜಾವಸ್ತುಗಳ ಖರೀದಿ ಇತ್ಯಾದಿ ಆಡಂಬರದ ಚಟುವಟಿಕೆಗಳು ದೇವಾಲಯಕ ಸುತಗೊಂಡಾವ. ಈ ಚಟುವಟಿಕೆಗಳನ್ನಲ್ಲ, ದೇವಾಲಯವನ್ನೇ ನಿರಾಕರಿಸಿದರ, ಇವೆಲ್ಲ ಆಡಂಬರ ತಾವಾಗೇ ನಾಶಾಗಿ ಹೋಗತಾವ.

**ನಂದಿಕೇಶ :** ಹಾಗಾದರ ಹಳ್ಳಿಪಳ್ಳಿಯ ಗ್ರಾಮೀಣರ ನಿರಾಡಂಬರ ಗುಡಿಗಳು ?

**ಬಸವಣ್ಣ :** ಅವೂ ನಮ್ಮನ್ನು ಉದ್ಧರಿಸಲಾರವು. ಗಡಿಗಿ -ಮಡಿಕಿ, ಬೀದಿಯ ಕಲ್ಲ, ಮರ-ಗಿಡ ಮೊದಲಾದವು ಇಲ್ಲಿ ದೇವರಾಗಿ ಮೆರಿತಾವ. ಮೈಲಾರನ ಪೂಜಿಸಿ ನಾಯಾಗಿ ಬೊಗಳೂದು, ಭೈರವನನ್ನಾರಾಧಿಸಿ ಬತ್ತಲೆ ತಿರುಗೂದು, ಕೆಂಡ ತುಳಿಯೂದು, ಸಿಡಿ ಆಡೂದು, ಬಸುರಿ, ಬಾಣಂತಿ, ಕೊಡಗೂಸ ಬಲಿಕೊಡೂದು ಇತ್ಯಾದಿ ಕ್ರೂರ ಆಚರಣೆ ಇಲ್ಲಿ ಬೆಳೆದು ಬಂದಾವ. ಈ ಗುಡಿಗಳನ್ನ ನಿರಾಕರಿಸಿದರ ಅವುಗಳ ಸುತ್ತ ಬೆಳೆದಿರೂ ಈ ಎಲ್ಲ ವಾಮಾಚಾರ ತಾವಾಗೇ ನಾಶ ಆಗ್ತಾವ.

**ನಂದಿಕೇಶ :** ನಿಜ, ನಿಜ. ಈ ದೇವಾಲಯ - ಈ ಗುಡಿ ನಿರಾಕರಿಸಿದರ, ಇವುಗಳ ಸುತ್ತ ಹಬ್ಬಿಕೊಂಡಿರೂ ಆಡಂಬರಭಕ್ತಿ, ಮೂಢಭಕ್ತಿಗಳ ಕಸ ದೂರಾಗಿ ಧರ್ಮಕ್ಷೇತ್ರ ಬಹುಮಟ್ಟಿಗಿ ಹಸನಾಗ್ತದ.

**ಬಸವಣ್ಣ :** ಅಷ್ಟೇ ಅಲ್ಲ, ದೇವಾಲಯ ಸಾಲದೆಂಬಂತೆ, ಮಠಗಳೂ ಶೋಷಣೆಯ ದೊಡ್ಡ ಕೇಂದ್ರ ಆಗ್ಯಾವ.

**ನಂದಿಕೇಶ :** ಹೌದು, ಮಠಗಳಲ್ಲಿ ಸಿದ್ಧಾಂತ ಇಲ್ಲ. ಆಡಂಬರ ಅದ, ಶ್ರೀಮಂತಿಕಿ ಅದ. ಪೀಠಾಧಿಪತಿಗಳಲ್ಲಿ ಹಣ ಅದ. ಅವರ ಮುಖಂಡತ್ವಕ್ಕ ತಾಳ ಹಾಕೂ ಭಕ್ತರು ಅದಾರ.

**ಬಸವಣ್ಣ :** ಇಂಥ ಭಕ್ತರ ಬಲದಿಂದಲೇ ಚೌರಂಗಿನಾಥ ಶೈವರ ಈ ಸಾರಂಗಮಠವನ್ನು ಕಳೆದ ವರ್ಷ ನಮ್ಮ ಕಣ್ಣುಮುಂದೆಯೇ ಶಿವಾಚಾರ್ಯರು ಕಸಗೊಂಡರು.

**ನಂದಿಕೇಶ :** ಸ್ವಾಮಿಗಳ ಮುಖಂಡತ್ವದಲ್ಲಿ ಇದೆಲ್ಲ ನಡೀತು.



**ಬಸವಣ್ಣ :** ಹೌದು, ದುಷ್ಟರ ಸಮಾಜದಾಗ ಅತಿ ದುಷ್ಟನೇ ಮುಖಂಡ ಎನ್ನೂ ಹಾಂಗಾದ, ಇಲ್ಲಿಯ ಪರಿಸ್ಥಿತಿ. ಕೈಯಾಗ ನಾಲ್ಕು ದುಡ್ಡು, ನಾಲ್ಕು ಜನ ದುಷ್ಟರು ಇದ್ದರ ಧರ್ಮದ ಹೆಸರಿನ್ಯಾಗ ಬೇಕಾದ್ದನ್ನ ಮಾಡಬಹುದಂತ ಭಾವಿಸ್ಯಾರ. ಆದರ ಈ ಹಣ, ಈ ಹಣಕ್ಕಾಗಿ ಸೇರಿರುವ ಈ ಸ್ವಾಮಿಗಳು, ಅವರ ಭಕ್ತರು, ಈ ಮಠಕ್ಕೆ ಮೃತ್ಯು ಆಗಿ ಪರಿಣಮಿಸೂ ಕಾಲ ದೂರ ಇಲ್ಲ.

**ನಂದಿಕೇಶ :** ನೀನು ಹೇಳೂದು ನಿಜ. ಈ ಮಠ, ಈ ಸ್ವಾಮಿ, ಇವರ ಸುತ್ತಲಿನ ಈ ಭಕ್ತವರ್ಗ- ಇದೆಲ್ಲ ನೋಡಿದರ ಹುತ್ತ ಸೇರಿಕೊಂಡ ಘಟಸರ್ಪ, ಅದರ ಪರಿವಾರಗಳ ನೆನಪಾಗ್ತದ.

**ಬಸವಣ್ಣ :** ದೇವಾಲಯದ ಅರ್ಚಕರು, ಮಠದ ಆಚಾರ್ಯರು ಸಾಲದೆಂಬಂತೆ ಪುರೋಹಿತರು ಹುಟ್ಟಿ ಮನೆಗಳನ್ನು ಹೊಕ್ಕು, ಅನೇಕ ಕೆಟ್ಟ ಆಚರಣೆಗಳನ್ನು ಅಲ್ಲಿsನೂ ಹುಟ್ಟಹಾಕ್ಯಾರ. ಜನನ -ಮರಣ, ಮದುವಿ -ಮುಂಜಿವಿ ಇತ್ಯಾದಿ ಸಂದರ್ಭಗಳಲ್ಲಿಯ ಅರ್ಥವಿಲ್ಲದ ವಿಧಿ -ವಿಧಾನಗಳು ಜನತೆಯನ್ನು ದಿನವೂ ದಾರಿ ತಪ್ಪಿಸತಾವ. ಇವನ್ನ ತಗದಹಾಕಿದರ ಜನರ ಕಷ್ಟ ಅರ್ಧದಷ್ಟು ಕಡಿಮಿ ಆಗ್ತದ. ಹೀಗಾಗಿ ಬ್ರಾಹ್ಮಣರ ಅಗ್ರಹಾರ ಬಹಿಷ್ಕರಿಸಿ ಬಂದ ನಾನು, ಶೈವ ಆಚಾರ್ಯರ ದೇವಾಲಯಗಳನ್ನೂ ಕಂದಾಚಾರಗಳನ್ನೂ ನಿರಾಕರಿಸಬೇಕಾಗ್ಯಾದ.

**ಈಶಾನ್ಯಗುರು :** (ಪ್ರವೇಶಿಸಿ) ಏನು, ದೇವಾಲಯ ನಿರಾಕರಿಸಬೇಕ ?

**ಬಸವಣ್ಣ :** ಹೌದು, ಗುರುಗಳೇ, ದೇವರ ದುರುಪಯೋಗದ ಕೇಂದ್ರವಾಗಿರುವ ದೇವಾಲಯ ನಿರಾಕರಿಸಬೇಕು. ನಮ್ಮ ಕಾಲ ಕಂಬ ಆಗಬೇಕು; ಶಿರ ಸುವರ್ಣದ ಕಳಸ ಆಗಬೇಕು; ದೇಹ ದೇವಾಲಯ ಆಗಬೇಕು. ವ್ಯಕ್ತಿತ್ವ ಸ್ಥಾವರದಿಂದ ಜಂಗಮಕ್ಕ ಪರಿವರ್ತನೆಗೊಳ್ಳಬೇಕು.

**ಈಶಾನ್ಯಗುರು :** (ನೆಮ್ಮದಿಯಿಂದ ) ಬಸವಣ್ಣಾ, ನೀನು ಎಲ್ಲರ ಹಾಗೆ ಯುಗದ ಮಗುವಾಗಿ ಹುಟ್ಟದಿ. ಆದರ ಯುಗದ ತಂದೆಯಾಗಿ ಬೆಳೀತಾ ಇರುವಿ. ನಿನ್ನ ವಿಚಾರ ಆಚಾರಕ್ಕಿಳಿದರ ಈ ಯುಗ ಸ್ಥಾವರದಿಂದ ಜಂಗಮಕ್ಕ ಖಂಡಿತ ಹೊರಳ್ತದ. ಖಂಡಿತ ಹೊರಳ್ತದ.

## ದೃಶ್ಯ - ೧೪

(ಪಶುಪತಿಶಿವಾಚಾರ್ಯ, ಮಾರ್ಜಾಲಪ್ಪ, ಸದ್ಯೋಜಾತ ರಹಸ್ಯ ಮಾತುಕತೆ ನಡೆಸಿದ್ದಾರೆ).

**ಪಶುಪತಿ :** ಮೊನ್ನಿನ ಘಟನೆಯ ಬಳಿಕ ಕೋಣೆಯಲ್ಲಿದ್ದೂ ಬಸವಣ್ಣ ಓದಲು ಮಠಕ್ಕ ಬರುತ್ತಿಲ್ಲ. ಸಂಗಮನಾಥ ದೇವಾಲಯಕ್ಕಂತೂ ಬರುತ್ತಲೇ ಇಲ್ಲ ಅಂತ ಕೇಳಿವಿ. ಅವನು ತೋರುತ್ತಿರುವ ಈ ಅಸಡ್ಡೆಯಿಂದಾಗಿ ಇಲ್ಲಿಯ ವಾತಾವರಣ ಮೌನಪ್ರತಿಭಟನೆಯಾಗಿ ರೂಪಗೊಳ್ಳತಾ ಇದೆ. ಇದರಿಂದ ನಮ್ಮ ವ್ಯವಸ್ಥೆಯ ದೋಷಗಳು ಎಲ್ಲ ವಿದ್ಯಾರ್ಥಿಗಳಿಗೂ ಕ್ರಮೇಣ ಗೊತ್ತಾಗತೊಡಗ್ಯಾವ.

**ಮಾರ್ಜಾಲಪ್ಪ :** ವಿದ್ಯಾರ್ಥಿಗಳಷ್ಟೇ ಅಲ್ಲ, ನಮ್ಮ ಬಗ್ಗೆ ಸಾರ್ವಜನಿಕರಲ್ಲೂ ಗುಜುಗುಜು ಕೇಳಿಬರತಾ ಇದೆ.

**ಸದ್ಯೋಜಾತ :** ಮೊನ್ನೆ ನೀವು ಬೆತ್ತದಿಂದ ಥಳಿಸಿದ ಬಳಿಕಂತೂ ನಮ್ಮದೇ ತಪ್ಪು ಅಂತ ಆರೋಪ ನಾವು ಹೊರೂ ಪರಿಸ್ಥಿತಿ ನಿರ್ಮಾಣ ಆಗ್ಯಾದ.

**ಮಾರ್ಜಾಲಪ್ಪ :** ಹೌದು ಗುರುಗಳೇ, ಈಗ ತಪ್ಪ ಅವನ ಮ್ಯಾಲೇ ಹೊರಿಸಿ, ಅವನನ್ನು ಆದಷ್ಟು ಬೇಗ ಮಠದಿಂದ ಹೊರಗ ಹಾಕಬೇಕು. ಇಲ್ಲದಿದ್ದರ ಇನ್ನೂ ತೊಂದರೆ.

**ಪಶುಪತಿ :** ಹೌದು, ಅವನದೇ ತಪ್ಪು ಅಂತ ಬರೆಸಿಕೊಂಡು ಹೊರಗ ಹಾಕೋಣ. ಕೋಣೆಯಿಂದ ಅವನನ್ನು ಕರೆತನ್ನಿ.

**ಮಾರ್ಜಾಲಪ್ಪ :** ಆಗಲಿ ಪ್ರಭು. ( ಹೋಗುತ್ತಾನೆ).

**ಸದ್ಯೋಜಾತ :** ಪ್ರಭೂ, ಒಬ್ಬ ಸಣ್ಣ ಹುಡುಗ ಎಂಥ ದೊಡ್ಡ ಸಮಸ್ಯೆ ನಿರ್ಮಿಸಿದನಲ್ಲ!

**ಪಶುಪತಿ :** ಹಾಗೇನಲ್ಲ, ನನ್ನ ದೃಷ್ಟ್ಯಾಗ ಈ ಸಮಸ್ಯೆ ಈಗಲೂ ಸಣ್ಣದೇ. ದೊಡ್ಡದಾಗಲಿಕ್ಕ ಬಿಡಬಾರದು. (ಅಷ್ಟರಲ್ಲಿ ಮಾರ್ಜಾಲಪ್ಪ ತಿರುಗಿ ಬರುತ್ತಾನೆ).

**ಮಾರ್ಜಾಲಪ್ಪ ;** ಪ್ರಭೂ, ಬಸವಣ್ಣ ಬರಲು ನಿರಾಕರಿಸಿದ. "ನನ್ನ ದೃಷ್ಟೀಲಿ ಅದು ಮಠ ಅಲ್ಲ. ಅವರು ಮಠಾಧಿಪತಿ ಇಲ್ಲ. ಅಲ್ಲಿಗೆ ನಾನು ಬರೂದಿಲ್ಲ" ಅನ್ನತಾ ಇದ್ದಾನ.

**ಪಶುಪತಿ :** ಜಗತ್ತೇ ಒಪ್ಪಿಕೊಂಡಿರೂ ನನ್ನ ಜಗುದ್ಗುರುತ್ವ ಇವ ನಿರಾಕರಿಸ್ತಾನ ? ಎಳಕೊಂಡು ಬರ್ರಿ. ( ಕೆಲವು ವಟುಗಳೊಂದಿಗೆ ಮಾರ್ಜಾಲಪ್ಪ ಹೋಗುತ್ತಾನೆ). ಚೋಟುದ್ದ ಹುಡುಗನ ಬಾಯಾಗ ಗೇಣುದ್ದ ನಾಲಗಿ.

**ಸದ್ಯೋಜಾತ :** ಪ್ರಭೂ, ಬಸವಣ್ಣ ವಾದದಾಗ ತುಂಬ ಗಟ್ಟಿಗ. ಈ ಹುಡುಗನೊಂದಿಗೆ ವಾದ ಬೆಳೆಸಬ್ಯಾಡ್ರಿ, ಕೆಸರಿನ್ಯಾಗ ಕಲ್ಲ ಎಸಿಬ್ಯಾಡ್ರಿ.

**ಪಶುಪತಿ :** ಕೆಸರ ಒಣಗಿಸಿ ಮಣ್ಣು ಮಾಡೂದು ನನಗೆ ಗೊತ್ತು. ಅವನ ರುಜು ಹಾಕಿಸಿಕೊಳ್ಳೋಣ, ಪತ್ರ ಸಿದ್ಧಮಾಡ್ರಿ. (ಸದ್ಯೋಜಾತ ಪತ್ರ ಸಿದ್ಧಮಾಡುತ್ತಾನೆ. ಅಷ್ಟರಲ್ಲಿ ಮಾರ್ಜಾಲಪ್ಪ ಕೆಲವು ವಟುಗಳೊಂದಿಗೆ ಬಸವಣ್ಣನನ್ನು ಒತ್ತಾಯದಿಂದ ಎಳೆದುಕೊಂಡು ಬರುತ್ತಾನೆ).

**ಪಶುಪತಿ :** ಬಸವಣ್ಣಾ, ನಿನ್ನಿಂದ ಇಲ್ಲಿಯ ಪವಿತ್ರ ವಾತಾವರಣ ಹಾಳಾಗ್ತಾ ಇದೆ.

**ಬಸವಣ್ಣ :** ಹಾಳಾಗ್ತಿರೂದು ನನ್ನಿಂದ ಅಲ್ಲ; ನಿಮ್ಮಿಂದ. ಅದಕ್ಕ ನಾನೂ ಭಾಗಿಯಾಗಧಾಂಗ ದೂರ ಉಳಿದೀನಿ, ಅಷ್ಟೇ.



**ಪಶುಪತಿ :** ಹಾಂಗ ದೂರ ಉಳಿಯೂದರಿಂದ ನೀನು ನಮ್ಮ ವ್ಯವಸ್ಥೆ ಬಹಿಷ್ಕರಿಸಿದಂತಾಗ್ತದ. ನಾವು ಅಪರಾಧಿ ಅಂತ ಅಪ್ರತ್ಯಕ್ಷವಾಗಿ ಸೂಚಿಸಿದ ಹಾಂಗಾಗ್ತದ. ನೀನೇ ಅಪರಾಧಿ ಅಂತ ನಮ್ಮ ಅಭಿಪ್ರಾಯ. ಅದನ್ನು ಬರೆದೀವಿ. ರುಜುಹಾಕಿ ಮಠ ಬಿಟ್ಟು ಹೋಗು.

**ಬಸವಣ್ಣ :** ನಾನು ಅಪರಾಧಿಯಲ್ಲ, ಯಾಕ ರುಜು ಹಾಕಬೇಕು ?

**ಪಶುಪತಿ :** ನಾವು ಅಪರಾಧಿಯಲ್ಲ ಅಂತ ಜನರಿಗಿ ತೋರಿಸಿಕೊಳ್ಳಲಾಕ.

**ಬಸವಣ್ಣ :** ನಿಮ್ಮ ರಕ್ಷಣೆಗಾಗಿ ನಾನು ರುಜು ಹಾಕಲಾರೆ.

**ವಟುಗಳು :** ಗುರುಗಳ ಮಾತ ಮೀರಿದರ ಕೈಕಾಲು ಕಟ್ಟಿ ರುಜು ಹಾಕಿಸಿಕೊಳ್ತೀವಿ,

**ಬಸವಣ್ಣ :** ಕೈಕಾಲು ಕಟ್ಟಿ ಯಾಕ ? ಕತ್ತರಿಸಿದರೂ ನಾನು ರುಜು ಹಾಕೂದಿಲ್ಲ.

**ಪಶುಪತಿ :** ಧರ್ಮಾಧಿಕಾರಿ ಎದುರ ಇಷ್ಟು ಉದ್ಧಟತನವೇ ?

**ಬಸವಣ್ಣ :** ನಿಮ್ಮನ್ನ ಧರ್ಮಾಧಿಕಾರಿ ಅಂತ ನಾನು ಒಪ್ಪಿದ್ದರಲ್ಲವೇ ?

**ಪಶುಪತಿ :** ಏನು ? (ಎದ್ದು ಬಂದು ಬೆತ್ತದಿಂದ ಮನಸೋಕ್ತ ಥಳಿಸುತ್ತಾನೆ. ವಟುಗಳೂ ಏಟು ಹಾಕುತ್ತಾರೆ.) ಹೂಂ. ರುಜು ಹಾಕಿಸಿಕೊಳ್ಳಿರಿ, ಹಾಕಿಸಿಕೊಳ್ಳಿರಿ. (ಒತ್ತಾಯದಿಂದ ಕೈ ಹಿಡಿಯುತ್ತಾರೆ. ಬಸವಣ್ಣ ಕೈ ಹಿಂದಕ್ಕೆ ತೆಗೆದುಕೊಳ್ಳುವಷ್ಟರಲ್ಲಿ ಪಶುಪತಿ ಶಿವಾಚಾರ್ಯ ಬಸವಣ್ಣನ ತೋಳಿನ ಮೇಲೆ ಪಾದ ಇಡುತ್ತಾನೆ. ಮಾರ್ಜಾಲಪ್ಪ ಸಹಿ ಹಾಕಿದ ಪತ್ರ ತೆಗೆದುಕೊಳ್ಳುತ್ತಾನೆ). ಕೋಣೆಗೆ ಹೊತಗೊಂಡು ಹೋಗ್ರಿ. ಆಗಷ್ಟು ಬೇಗ ಈ ಊರು ಬಿಡಿಸ್ರಿ. (ಅಯ್ಯೋ, ಅಯ್ಯೋ ಎಂದು ನರಳುವ, ರಕ್ತ ಸೋರುವ ಬಸವಣ್ಣನನ್ನು ಎತ್ತಿಕೊಂಡು ಹೋಗುತ್ತಾರೆ).

**ಮಾರ್ಜಾಲಪ್ಪ :** ಗುರುಗಳೇ, ಒಳ್ಳೆಯ ಕೆಲಸ ಮಾಡಿದ್ರಿ. ವ್ಯವಸ್ಥೆ ಹಾಳು ಮಾಡುವವರಿಗೆ ಇಂಥ ಶಿಕ್ಷೆ ಅವಶ್ಯ. ಇವನ ಮಾತಿಗೆ ಮರುಳಾಗುತ್ತಿದ್ದ ವಿದ್ಯಾರ್ಥಿಗಳಿಗೂ ಇದು ಎಚ್ಚರಿಕೆ. ಮಠ ಅಂದರ ಏನ ತಿಳದಾನ?

**ಸದ್ಯೋಜಾತ :** ಮೊದಮೊದಲು ದೇವಾಲಯವೇ ಬೇಡ ಅಂತಿದ್ದ ಬಸವಣ್ಣ ಈಗ ಮಠಗಳೂ ಯಾಕಬೇಕು ? ಅನ್ನಾಕ ಸುರು ಮಾಡ್ಯಾನ. ಮಠಗಳ ಹೊಣೆ ಪ್ರತಿಯೊಂದು ಮನೆ ಹೊರಬೇಕು. ಮನೆಗಳೇ ಮಠಗಳಾಗಬೇಕು ಅನ್ನೂ ವಾದ ಹುಟ್ಟಹಾಕ್ಯಾನ.

**ಪಶುಪತಿ :** ಈ ಯಾವ ವಿಚಾರನೂ ಇಲ್ಲಿ ಬೆಳೆಯಬಾರದು. ಮಾರ್ಜಾಲಪ್ಪ ಈ ಕಡಿ ಗಮನ ಕೊಡ್ರಿ (ಎನ್ನುತ್ತ ಎದ್ದು ಹೊರಡುತ್ತಾನೆ. ಮಿಕ್ಕವರೂ ಹಿಂಬಾಲಿಸುತ್ತಾರೆ).

**ಮಾರ್ಜಾಲಪ್ಪ :** ಆಗಲಿ ಗುರುಗಳೇ (ಎನ್ನುತ್ತ ಇವನೂ ಹಿಂಬಾಲಿಸುತ್ತಾನೆ).

## ದೃಶ್ಯ - ೧೫

(ಸಾಯಂಕಾಲ. ಬಸವಣ್ಣನ ಕೋಣೆ. ಅಲ್ಲಲ್ಲಿ ಗಾಯಗಳು. ತಲೆಗೆ, ಹಸ್ತಕ್ಕೆ ಪಟ್ಟಿ ಕಟ್ಟಿದ್ದಾರೆ. ನಾಗಲಾಂಬೆ ಕೈತುತ್ತು ಮಾಡಿ ಉಣಿಸುತ್ತಲಿದ್ದಾಳೆ. ದುಃಖ ಒತ್ತರಿಸಿ ಬಂದು ತುಟಿಕಚ್ಚಿ, ತುಟಿಕಚ್ಚಿ ಅಳುತ್ತಾಳೆ).

**ಬಸವಣ್ಣ :** ತಂಗೀ ಅಳಬ್ಯಾಡ, ನನಗೆ ಏನೂ ಆಗೂದಿಲ್ಲ. ಗುಣವಾಗ್ತಿದೆಯಲ್ಲ.

**ನಾಗಲಾಂಬೆ :** (ದುಃಖಿಸುತ್ತ) ಅವ್ವನ ನೆನಪಾಯ್ತು. ಅವಳಿದ್ರ ನಿನ್ನನ್ನು ಸರಿಯಾಗಿ ನೋಡಿಕೊಳ್ತಿದ್ದಳು.

**ಬಸವಣ್ಣ :** ಈಗ ಉಣಿಸುತ್ತಿರುವ ನೀನು ಯಾರು ? ಅವ್ವ ಅಲ್ಲದೇ ಮತ್ತಾರು ?

**ನಾಗಲಾಂಬೆ :** (ಇನ್ನೂ ದುಃಖಿಸುತ್ತ) ತಾಯಿಯಿಲ್ಲದ ಮಕ್ಕಳಿಗಿ ಸಮಾಜವೇ ತಂದೆ-ತಾಯಿಯಾಗಬೇಕು. ಆದರ ಈ ಸಮಾಜ ನಿನಗ, ಹರಿಯೂ ನೀರಿಗಿ ದಾರಿ ಬಿಡುತಿಲ್ಲವಲ್ಲ.

**ಬಸವಣ್ಣ :** ನಾಗಲಾ, ನನ್ನ ದಾರಿ ನನಗ ಸ್ಪಷ್ಟ ಆಗಿರೂದರಿಂದ ಈ ಮಠದ ಭಯೋತ್ಪಾದಕರ ಅಂಜಿಕೆಯೇ ನನಗಿಲ್ಲ.

**ನಾಗಲಾಂಬೆ :** ನನಗ ಮಾತ್ರ ಈ ವಾತಾವರಣದಿಂದ ಭಯವುಂಟಾಗ್ಯದ.

**ಬಸವಣ್ಣ :** (ಊಟ ಮುಗಿಸಿ, ನೀರು ಕುಡಿದು, ದಿಂಬಿಗೆ ಒರಗುತ್ತ) ಭಯ ಯಾಕಮ್ಮ, **ಇವರು ನನ್ನನ್ನು ಕೊಲ್ಲಬಹುದು, ನನ್ನ ವಿಚಾರ ಕೊಲ್ಲಲಾರರು.**

**ಈಶಾನ್ಯ ಗುರು :** (ಒಳಗೆ ಬರುತ್ತ) ಬಸವಾ, ಬಸವಣ್ಣಾ...

**ನಾಗಲಾಂಬೆ :** (ದೊಡ್ಡ ದನಿಯಿಂದ ಅಳುತ್ತ ಎದ್ದು, ಎದುರುಗೊಂಡು) ಊರಿಂದ ಯಾವಾಗ ಬಂದಿರಿ ? ಗುರುಗಳೇ, ಕಳೆದ ವಾರ ನೀವು ಇಲ್ಲದಾಗ ನಿಮ್ಮ ಬಸವಣ್ಣನ ಮ್ಯಾಲ ದೊಡ್ಡ ಹಲ್ಲೆ ನಡೀತು. ನನ್ನ ಅಣ್ಣಾನ್ನ ಉಳಿಸಿಕೊಡ್ರಿ. ತಂದೆ ತಾಯಿಗಳಿಲ್ಲದ ಪರದೇಶಿ ಮಕ್ಕಳು ನಾವು. ನನಗಾಗಿ ನನ್ನ ಅಣ್ಣನ ಉಳಿಸಿಕೊಡ್ರಿ. (ಕಾಲು ಹಿಡಿದು ಅಳುತ್ತಾಳೆ).

**ಈಶಾನ್ಯ ಗುರು :** (ಸಂತಯಿಸುತ್ತ) ನಿನಗಾಗಿ ಅಲ್ಲ ಮಗು, ಜಗತ್ತಿಗಾಗಿ ನಿನ್ನ ಅಣ್ಣ ಉಳೀಬೇಕಾಗ್ಯಾದ. (ಇಬ್ಬರೂ ಬಸವಣ್ಣನಲ್ಲಿಗೆ ಸಾಗಿ ಕುಳಿತುಕೊಳ್ಳುತ್ತಾರೆ).

**ನಾಗಲಾಂಬೆ :** ನೋಡಿ ಗುರುಗಳೇ, ಕರುಣೆಯ ಮೂರ್ತಿಯಾದ ನನ್ನ ಅಣ್ಣನ ಮ್ಯಾಲ ನಿಷ್ಕರುಣೆಯ ದಾಳಿ (ಒಂದೊಂದೇ ಗಾಯಗಳನ್ನು ತೋರಿಸುತ್ತಾಳೆ).

**ಈಶಾನ್ಯ ಗುರು :** ( ಕಣ್ಣೀರು ಸುರಿಸುತ್ತ, ಬಸವಣ್ಣನ ಬೆನ್ನಮೇಲೆ ಕೈಯಾಡಿಸುತ್ತಾನೆ). ಅನ್ಯಾಯ, ಅನ್ಯಾಯ. ಇನ್ನೊಬ್ಬರ ಕಾಲಾಗ ಮುಳ್ಳು ನಟ್ಟರ ನಿನ್ನ ಕಣ್ಣಾಗ ನಟ್ಟಾಂಗ ಮರುಗುವ ನೀನು. ನಿನ್ನಂಥವನಿಗಿ ಈ ಗತಿಯೇ ?

**ನಾಗಲಾಂಬೆ :** ನಾನು ಇನ್ನೂ ಸಣ್ಣವಳು. ಅಣ್ಣನ ಈ ಪರಿಸ್ಥಿತಿ ನೋಡಿ ಒಮ್ಮೊಮ್ಮೆ ಅತ್ತುಬಿಡ್ತೀನಿ (ದುಃಖಿಸುತ್ತಾಳೆ).

**ಈಶಾನ್ಯಗುರು :** ನಾಗಲಾ, ಎಲ್ಲ ಸರಿ ಹೋಗ್ತದ. ದುಃಖಿಸಬ್ಯಾಡ ಮಗೂ. (ಬಸವಣ್ಣನನ್ನು ಕುರಿತು) ಬಸವಣ್ಣಾ, ನೀನು ಸತ್ಯವನ್ನೇ ಹೇಳಿದಿ. ಈ ಮಠ ನಿನ್ನನ್ನು ಹಿಂಸಿಸಿತು. ಹಿಂಸೆ ಹೇಡಿಗಳ ಕೆಲಸ. ಈಗ ನೋವು ಹ್ಯಾಂಗ ಅದ ?

**ಬಸವಣ್ಣ :** ಗುಣವಾಗ್ತಾ ಅದ. ಆದರ ನನಗೆ ಬಿದ್ದಲ್ಲಿಯೇ ಬಿದ್ದು ಬ್ಯಾಸರ ಆಗ್ಯಾದ.

**ಈಶಾನ್ಯ ಗುರು :** ಹಾಗಾದರ ನದಿ ಕಡೆ ಸ್ವಲ್ಪ ತಿರುಗಾಡಿ ಬರೋಣ ? (ಬಸವಣ್ಣ ತಲೆ ಅಲ್ಲಾಡಿಸಿ, ಏಳುತ್ತಾನೆ. ಇಬ್ಬರೂ ಹೋಗುತ್ತಾರೆ).

**ನಾಗಲಾಂಬೆ :** (ಸ್ವಗತ) ದೇವರೇ, ನನ್ನ ಅಣ್ಣ ಕತ್ತಲಾಗ ದೀಪ ಆಗ್ಯಾನ. ಆದರ ಗಾಳಿ ಸುರು ಆಗ್ಯಾದ. ಈ ಗಾಳಿ ದೊಡ್ಡದಾಗದಿರಲಿ. ಈ ದೀಪ ಆರದಿರಲಿ. ಶಿವಶಿವಾ (ಎನ್ನುತ್ತ ಹಾಸಿಗೆ ಸುತ್ತಿ ಒಳಗೆ ಒಯ್ಯುವಳು).

## ದೃಶ್ಯ - ೧೬

(ಬಸವಣ್ಣ ಕೋಲೂರುತ್ತ ಈಶಾನ್ಯಗುರುವಿನ ಜೊತೆ ನದಿತೀರದಲ್ಲಿ ನಡೆದಿದ್ದಾನೆ).

**ಈಶಾನ್ಯಗುರು :** ಬಸವಣ್ಣಾ, ನನ್ನ ದೃಷ್ಟ್ಯಾಗ ಉಳಿದ ವಿದ್ಯಾರ್ಥಿಗಳೇ ಬ್ಯಾರೆ, ನೀನೇ ಬ್ಯಾರೆ. ಯಾವುದೋ ವಿಶಿಷ್ಟ ಶಕ್ತಿ ನಿನ್ನಲ್ಲಿ ಅದ. ಅದು ಕ್ರಮೇಣ ಜಾಗ್ರತವಾಗೂದನ್ನೂ ನಾನು ಕಂಡುಕೊಂಡೀನಿ. ಅದಕ್ಕಾಗೇ ನಾನು ಇಷ್ಟು ವರ್ಷ ಗುರುಕುಲದ ಯಾವ ನಿರ್ಬಂಧವನ್ನೂ ನಿನಗ ಹಾಕಿಲ್ಲ. ಈಗ ನಿನಗ ಕಾಡೂ ಪ್ರಶ್ನೆಯಾದರೂ ಯಾವುದು?

**ಬಸವಣ್ಣ :** (ಶೂನ್ಯಮನಸ್ಕನಾಗಿ) ಗುರುಗಳೇ, ಅಗ್ರಹಾರ ಹೋಗಲಿ, ದೇವಾಲಯಗಳ ಹಾಂಗ ಈ ಮಠಗಳೂ ನನಗ ಬ್ಯಾಸರ ಹುಟ್ಟಿಸ್ಯಾವ. ನಮ್ಮ ಮಠವನ್ನೇ ನೋಡ್ರಿ. ಪೀಠಾಧಿಕಾರಿ ಪಶುಪತಿ ಜಗದ್ಗುರುಗಳ ಒಳ ಜಗತ್ತು ನಿಮಗೂ ಗೊತ್ತದ; ವಿದ್ಯಾರ್ಥಿಗಳಿಗೂ ಗೊತ್ತದ. ಮಠದಾಗ ಸಣ್ಣ ದೊಡ್ಡ ಪಾಪಗಳನ್ನೇ ಮಾಡ್ತ, ಅವುಗಳನ್ನು ಪರಸ್ಪರರು ಮುಚ್ಚಿಕೊಳ್ತ ಕಾಲ ನೂಕುತಾ ಇದ್ದಾರ.

**ಈಶಾನ್ಯಗುರು :** ಗೊತ್ತಿದೆ ಮಗು. ಏನು ಮಾಡೂದು ?

**ಬಸವಣ್ಣ :** ಮಠದಾಗ ಬಡ್ಡಿ ವ್ಯವಹಾರ ವಿಪರೀತ ಬೆಳೆದದ. ಒತ್ತಿಹಾಕಿದ ಬಡವರ ಹೊಲಗಳೆಲ್ಲ ಮಠದ ಪಾಲಾಗ್ಯಾವ. ಕತ್ತಲಾಯಿತೋ, ಈ ಮಠ ಕಳ್ಳವ್ಯಾಪಾರಕ್ಕಾಗಿ ಬಡ್ಡಿ ಹಣ ಒಯ್ಯುವವರ ಚಟುವಟಿಕೆಯ ಕೇಂದ್ರ ಆಗಿ ಬಿಟ್ಟದ.

**ಈಶಾನ್ಯಗುರು** : ಬಳ್ಳಿಗಾವಿ ಕೇದಾರೇಶ್ವರ ಮಠದ ಬಡ್ಡಿವ್ಯವಹಾರದ ಕತಿ ಕೇಳಿಲ್ಲ?

**ಬಸವಣ್ಣ** : ಕೇಳೀನಿ, ಮಾಂಡಲೀಕರಾದ ಹಾನಗಲ್ಲ ಕದಂಬರ ಕಿರೀಟವನ್ನೇ ಕೇದಾರೇಶ್ವರ ಮಠ ಒತ್ತಿ ಇಟಗೊಂಡು ಸಾಲ ಕೊಟ್ಟಿದ್ದು, ಇಂದು ಗುಟ್ಟಿನ ವಿಷಯ ಆಗಿ ಉಳಿದಿಲ್ಲ.

**ಈಶಾನ್ಯಗುರು** : ಸಾಲ ತೀರಿಸಿದರೂ ಆ ಮಠದ ಸ್ವಾಮಿಗಳು ಕಿರೀಟ ಹಿಂದಿರುಗಿಸಲು ಹಿಂದುಮುಂದು ನೋಡಿದರಂತ. ಸಿಟ್ಟಿಗೆದ್ದ ಮಾಂಡಲಿಕರು ಆ ಜಗದ್ಗುರು ವಾಮಶಕ್ತಿದೇವನನ್ನು ಬಹಿರಂಗವಾಗಿಯೇ ಬಂಧಿಸಿದರಂತ.

**ಬಸವಣ್ಣ** : ಕೇಳೀನಿ, ಗುರುಗಳೇ. ಹೀಗೆ ಗಳಿಸಿದ ಪಾಪದ ಹಣವನ್ನು ಜಗದ್ಗುರುಗಳು ತಮ್ಮ ಕೀರ್ತಿ- ಪ್ರಸಿದ್ಧಿಗಿ ಬಳಸೂದು ಒಪ್ಪಿತ ವ್ಯವಸ್ಥೆ ಆಗಿಬಿಟ್ಟದ.

**ಈಶಾನ್ಯಗುರು** : ಹೌದು, ಸ್ವಾಮಿಗಳ ತುಲಾಭಾರ, ಷಷ್ಟಿಪೂರ್ತಿ, ವಾರ್ಷಿಕ ಗುರುವಂದನೆ, ಮೊದಲಾದ ಸಮಾರಂಭಗಳಲ್ಲಿ ಹಣದ ಹೊಳೀನಃ ಹರಿತದ. ಮಠ ಶ್ರೀಮಂತ ಆಗೂದಂದ್ರ ಮಠ ಬಡವ ಆಗೂದೆಂದೇ ಅರ್ಥ.

**ಬಸವಣ್ಣ** : ಹಣ ಹೋಗಲಿ, ಶಿಗ್ಗಾವಿ, ಅಣ್ಣಿಗೇರಿ ಗ್ರಾಮಗಳ ಮಠಾಧೀಶರನ್ನು ಜನರು ಹಾಡಹಗಲೇ ಮಠದಿಂದ ಹೊರಹಾಕಿ, ಬ್ರಹ್ಮಚಾರಿಗಳೇ ಮಠದ ಸ್ವಾಮಿಯಾಗಬೇಕು ಅಂತ ಶಾಸನಗಳನ್ನೇ ಬರದು ನಿಲ್ಲಿಸಿದರು. ಬಹಳಷ್ಟು ಮಠ ಹೀಂಗ ಇರೂದು ನಿಮಗೂ ಗೊತ್ತದ.

**ಈಶಾನ್ಯಗುರು ;** ಗೊತ್ತದ ಮಗು, ಏನು ಮಾಡೂದು? ಜಂಗಮಪೀಠದ ಮ್ಯಾಲ ಸ್ಥಾವರ ಜಗದ್ಗುರುಗಳು ಕುಳಿತಾರ. ನಾನು ಮಠದಲ್ಲಿ ಒಬ್ಬ ಅಧ್ಯಾಪಕ, ಅಸಹಾಯಕ.

**ಬಸವಣ್ಣ** : ಹೌದು, ಆದರ ಎಷ್ಟು ದಿನ ಇದನ್ನು ಸಹಿಸಿಕೊಳ್ಳೂದು ? ಎಲ್ಲ ಮಠಾಧೀಶರು ಅಂತಃಶಕ್ತಿ ಬೆಳೆಸಿಕೊಳ್ಳಬೇಕು. ಎಲ್ಲ ಮಠದಾಗ ಜಾತ್ಯತೀತ ಸಂಸ್ಕೃತಿ ತರಬೇಕು. ಆದರ ಪೀಠಾಧಿಕಾರಿಗಳ ಬಂಧು ಬಳಗದವರಂತೂ ಬಡಭಕ್ತರ ದಾನ-ದಕ್ಷಿಣೆ ಮೇಯುತ್ತ ಮಠಗಳಲ್ಲಿ ಬೇರ ಬಿಟ್ಟಾರ. ತಾವು ಮಾಡಲಿರುವ ಪಾಪದ ಕೆಲಸ ರಕ್ಷಿಸಲಿಕ್ಕ ಮಠಾಧೀಶರು ಸಣ್ಣಪುಟ್ಟ ಮಠಾಧಿಕಾರಿಗಳನ್ನು, ಗಾವುಂಡರನ್ನು, ವಿದ್ವಾಂಸರನ್ನು, ವರ್ತಕರನ್ನು ಭಕ್ತರೆಂದು ಸಾಕ್ಯಾರ.

**ಈಶಾನ್ಯಗುರು** : ಹೌದು, ಭಕ್ತರನ್ನಲ್ಲ, ಮಾರ್ಜಾಲ ಭಕ್ತರನ್ನು ಸಾಕ್ಯಾರ. ಸ್ವಾಮಿಗಳ ಬಂಧುಬಳಗಕ್ಕ- ಜಾತಿ ಬಾಂಧವರಿಗಿ ಬೆಣ್ಣಿ, ಈ ಮಾರ್ಜಾಲರಿಗೆ ಹಾಲ, ಬಡಭಕ್ತರಿಗಿ ಮಜ್ಜಿಗಿ. ಇದು ನಮ್ಮ ಮಠದ ವ್ಯವಸ್ಥೆ.

**ಬಸವಣ್ಣ** : ಹೋಗಲಿ, ಪಶುಪತಿಸ್ವಾಮಿಗಳು ಕಳೆದ ತಿಂಗಳ ತಮ್ಮ ಉತ್ತರಾಧಿಕಾರಿಯಾಗಿ ತಂಗಿಯ ಮಗ ಸದ್ಯೋಜಾತನನ್ನೇ ಪಟ್ಟಗಟ್ಟಿದರು.

**ಈಶಾನ್ಯಗುರು** : ಹೌದು, ಅವನೋ ಹೆಸರಿಗೆ ತಕ್ಕಂತೆ ನಿನ್ನೆ ಹುಟ್ಟಿದ ಸದ್ಯೋಜಾತ, ಇಂದು ಸ್ಥಾನಾಚಾರ್ಯನಾದ.



**ಬಸವಣ್ಣ** : ಇದೇ ಮುಂದುವರಿದರ, ಸಾರ್ವಜನಿಕ ಆಸ್ತಿ ಆಗಿರುವ ಮಠಗಳು ಈಗಾಗಲೇ ಒಂದೇ ಜಾತಿಯವರ ಆಸ್ತಿ ಆಗಿದ್ದು, ಇನ್ನು ಮುಂದೆ ಒಂದೇ ಮನೆತನದವರ ಸ್ವಂತ ಆಸ್ತಿಯಾಗೂ ಭಯ ಅದ.

**ಈಶಾನ್ಯಗುರು** : ಹೌದು ಬಸವಣ್ಣಾ. ಇತ್ತೀಚೆ ಶಿಷ್ಯವರ್ಗದ ಮಠಸಂಪ್ರದಾಯದ ಜೊತೆಗೆ ಪುತ್ರವರ್ಗದ ಮಠಸಂಪ್ರದಾಯ ಅಂಕುರಿಸುತ್ತಿದೆ.

**ಬಸವಣ್ಣ** : ಮಠಗಳನ್ನಷ್ಟೇ ಅಲ್ಲ. ಈ ಮಠಗಳು ರೂಪಿಸಿರುವ ಸಾಮಾಜಿಕ ತಾರತಮ್ಯವನ್ನೂ ತಪ್ಪಿಸಬೇಕಾಗ್ಯಾದ. ಇದು ಅಪಾಯದ ರೀತಿಯಲ್ಲಿ ಬೆಳೀತಾ ಇದೆ. ಇದನ್ನೂ ಶುದ್ಧೀಕರಿಸಬೇಕು.

**ಈಶಾನ್ಯಗುರು** : ಹೌದು, ನೀನು ಹೇಳೂ ಹಾಂಗ ಈ ಸಮಾಜ ಶುದ್ಧೀಕರಿಸೂದು ಇಂದು ಅಗತ್ಯ ನಡೆಯಬೇಕಾಗ್ಯಾದ. ಅದು ನಿನ್ನಂಥವನಿಂದ ಮಾತ್ರ ಸಾಧ್ಯ. ನಿನ್ನದು ನಮ್ಮೆಲ್ಲರಂತೆ ಗುರುವಿನ ಮೂಲಕ ಜ್ಞಾನಿಯಾದ ಜೀವವಲ್ಲ. ನಿನಗೆ ಯಾವ ಗುರುವೂ ಇಲ್ಲ. ಬುದ್ಧನಂತೆ ಸ್ವಯಂಜ್ಞಾನಿ ನೀನು. ನಿನ್ನ ಅರಿವೇ ನಿನಗೆ ಗುರು. ಆ ಅರಿವು ವ್ಯಕ್ತಿಯ ಉದ್ಧಾರಕ್ಕಷ್ಟೇ ಅಲ್ಲ, ಸಮಾಜದ ಉದ್ಧಾರಕ್ಕೂ ಉಪಯೋಗವಾಗಬೇಕಂತ ಇತ್ತೀಚೆ ನೀನು ಹಂಬಲಿಸುತ್ತಿರುವಿ. ಅದನ್ನು ನಾನು ಗಮನಿಸೀನಿ.

**ಬಸವಣ್ಣ** : ಹೌದು, ಗುರುಗಳೇ, ಆತ್ಮಜ್ಞಾನದ ಸಾಮಾಜಿಕರಣವೇ ಅನುಭಾವ. ಪ್ರತಿಯೊಬ್ಬರೂ ಇಂಥ ಅನುಭಾವಿ ಆಗಬೇಕು. ಮನುಷ್ಯ ದೇವರಾಗುವುದು ಮುಖ್ಯವಲ್ಲ. ಮುಂದುವರಿದ ಸಮಾಜವಾಗುವುದು ಮುಖ್ಯ. ಈ ವರೆಗೆ ನನಗೆ ಆತ್ಮಶುದ್ಧಿ ಮುಖ್ಯ ಅನಿಸಿತ್ತು. ಈಗ ಸಮಾಜಶುದ್ಧಿಯೂ ಅಷ್ಟೇ ಮುಖ್ಯ ಅನಸ್ತಾದ. **ವ್ಯಕ್ತಿ ಸುಧಾರಿಸದೆ ಸಮಾಜ ಸುಧಾರಿಸೂದಿಲ್ಲ ಅನ್ನೂದು ಎಷ್ಟು ಸತ್ಯವೋ, ಸಮಾಜ ಸುಧಾರಿಸದೆ ವ್ಯಕ್ತಿಯೂ ಸುಧಾರಿಸೂದಿಲ್ಲ ಅನ್ನೂದು ಅಷ್ಟೇ ಸತ್ಯ. ಹೀಗಾಗಿ ಇಂದಿನ ಈ ಸಮಾಜವ್ಯವಸ್ಥೆ ಮುರಿದು ಕಟ್ಟೂ ವರೆಗೆ ದುಃಖ, ನೋವುಗಳಿಂದ ಜನರಿಗೆ ಬಿಡುಗಡೆ ಇಲ್ಲ.**

**ಈಶಾನ್ಯಗುರು** : ಆದರ ಸಮಾಜದ ಕ್ರೂರ ವ್ಯವಸ್ಥೆ ಬದಲಿಸಲು ಕೈಹಾಕಿದರ, ಅಪಾಯಪರಂಪರೆಗಳೇ ಎದುರಾಗ್ತಾವ. ಆದುದರಿಂದಲೇ ವೈದಿಕ ತತ್ವಜ್ಞಾನಿಗಳು ಸಮಾಜಕಲ್ಯಾಣಕ್ಕ ಕೈಹಾಕದೆ, ವ್ಯಕ್ತಿಕಲ್ಯಾಣ ಮಾತ್ರ ಬೋಧಿಸಿದರು; ಅಮೂರ್ತವಾದ ಮಾನವ ಕಲ್ಯಾಣ ಮಾತ್ರ ಘೋಷಿಸಿದರು.

**ಬಸವಣ್ಣ** : ನನ್ನ ದಾರಿ ಅದಲ್ಲ. ಈಗ ರಾಜರಿಂದ ಪ್ರಜೆಗಳ, ಪುರೋಹಿತರಿಂದ ಭಕ್ತರ, ಪುರುಷರಿಂದ ಸ್ತ್ರೀಯರ ಶೋಷಣೆ ನಡದದ. ಇದರಿಂದ ಸಮಾಜದಾಗ ಶೋಷಣೆ ಮಾಡುವ, ಶೋಷಣೆ ಮಾಡಿಸಿಕೊಳ್ಳುವ ಎರಡು ಭಿನ್ನ ಪ್ರವಾಹಗಳು ನಿರ್ಮಾಣ ಆಗ್ಯಾವ.....

**ಈಶಾನ್ಯಗುರು :** (ನಡುವೆಯೇ ಬಾಯಿಹಾಕಿ) ಈ ಎರಡೂ ಪ್ರವಾಹ ಒಂದಾಗಬೇಕಂತ ನಿನ್ನ ವಿಚಾರವೇ ?

**ಬಸವಣ್ಣ :** ಹೌದು. ಎರಡೂ ಪ್ರವಾಹಗಳು ಒಂದಾಗ್ಬೇಕು. (ಬೆರಳು ಮಾಡಿ ತೋರಿಸುತ್ತ) ಈ ಕೃಷ್ಣೆ -ಮಲಪ್ರಭೆಯರು ಸೇರಿ ಕೂಡಲಸಂಗಮವಾಧಾಂಗ ಎರಡಾಗಿರುವ ಸಮಾಜ ಒಂದಾಗ್ಬೇಕು; ಒಂದಾಗಿ ಹರೀಬೇಕು. ವ್ಯಕ್ತಿಪ್ರಜ್ಞೆ ನೀರಿನ್ಹಾಂಗ ಚಲನಶೀಲವಾಗಬೇಕು- ಅಂತ ಈವರೆಗೆ ಹೇಳ್ತಿದ್ದ. ನನಗ ಈಗ ಸಮಾಜವ್ಯವಸ್ಥೆಯೂ ಸಣ್ಣ ದೊಡ್ಡ ಮಡುವುಗಳಾಗಿರಬಾರದು, ಏಕ ನದಿಯಾಗಿ ಸಮಪಾತಳಿಯಲ್ಲಿ ಪ್ರವಹಿಸಬೇಕು ಅನಸ್ತದ. ವರ್ಣ-ವರ್ಗ-ಲಿಂಗ ಭೇದಗಳೆಂಬ ಭೇದ ಸಂಸ್ಕೃತಿ ನೀಗಿ, ಅಭೇದ ಸಂಸ್ಕೃತಿ ಅಸ್ತಿತ್ವಕ್ಕೆ ಬರಬೇಕೆಂದು ಮನಸು ಹಂಬಲಿಸ್ತದ. ವ್ಯಕ್ತಿ ದೇವರಾಗಬೇಕು; ಮುಂದುವರಿದು ಸಮಾಜವಾಗಬೇಕು. ಸೋಹಂ ಪ್ರಜ್ಞೆಯದು ಅಪೂರ್ಣ ವ್ಯಕ್ತಿತ್ವ, ದಾಸೋಹಂ ಪ್ರಜ್ಞೆಯದು ಪೂರ್ಣ ವ್ಯಕ್ತಿತ್ವ.

**ಈಶಾನ್ಯಗುರು :** ಬಸವಣ್ಣಾ, ನಿನ್ನ ಈ ಧ್ಯೇಯ ಸಾಧನೆಗೆ ಈ ಮಠ ಯೋಗ್ಯ ನೆಲೆ ಅಲ್ಲ. ಭೇದ ನೀತಿಯಿಂದ ತುಂಬಿರುವ ಈ ಮಠ ನಿನ್ನ ವಿಚಾರಗಳನ್ನು ಸಹಜವಾಗೇ ನಾಶಮಾಡ್ತದ. ಮೇಲಾಗಿ ಕೂಡಲಸಂಗಮ ಒಂದು ಸಣ್ಣ ಹಳ್ಳಿ. ಕಾರಣ, ಯಾವುದೇ ದೊಡ್ಡ ನಗರಕ್ಕ, ಸಾಧ್ಯವಾದರ ನಿನ್ನ ಸೋದರಮಾವ ಬಲದೇವ ಮಂತ್ರಿಗಳಿರುವ ರಾಜಧಾನಿ ಕಲ್ಯಾಣಕ್ಕ ಹೋಗು. ಇಲ್ಲಿಯ ವ್ಯಕ್ತಿಕಲ್ಯಾಣದ ಮುಂದುವರಿಕೆ ಅನ್ನೂ ಹಾಂಗ ಅಲ್ಲಿ ಸಮಾಜಕಲ್ಯಾಣಕ್ಕ ತೊಡಗು. ಕೂಡಲಸಂಗಮದ ದೀಪವಾಗಿರುವ ನೀನು ಜಗತ್ತಿನ ಜ್ಯೋತಿಯಾಗಿ ಬೆಳಗು. (ಬಸವಣ್ಣ ನಮಸ್ಕರಿಸುತ್ತಾನೆ. ಗುರು ಆಶೀರ್ವದಿಸುತ್ತಾನೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಧ್ಯೇಯ ವಾಕ್ಯ ಪದೇ ಪದೇ ಕೇಳಿಸುತ್ತದೆ.)

## ದೃಶ್ಯ - ೧೭

("ಸ್ವಸ್ತಿ ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ, ರಾಜಪರಮೇಶ್ವರ, ಕಾಳಾಂಜರಪುರವರಾಧೀಶ್ವರ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್, ಭೋ ಪರಾಕ್" ವಂದಿ ಮಾಗಧರ ಈ ಜಯಘೋಷದೊಂದಿಗೆ ಬಿಜ್ಜಳನು ಆಸ್ಥಾನಕ್ಕೆ ಬಂದು ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾನೆ).

**ಬಿಜ್ಜಳ :** ಏನು ಮಂತ್ರಿ ಮಂಚಣ್ಣನವರೇ, ಗಣಕಶಾಲೆಯ ಲೆಕ್ಕಪತ್ರ ಹೊಂದಿಕೆಯಾಯ್ತ?

**ಮಂಚಣ್ಣ :** ಇಲ್ಲ ಪ್ರಭೂ. ಕಳೆದ ಒಂದು ವಾರದಿಂದ ಎಲ್ಲ ಅಧಿಕಾರಿಗಳು ಪ್ರಯತ್ನ ನಡಸ್ಯಾರ, ಸಮಸ್ಯೆ ಬಗೆ ಹರೀತಿಲ್ಲ. ಸ್ವಲ್ಪವೂ ಪ್ರಗತಿ ಕಾಣತಿಲ್ಲ.

ಬಿಜ್ಜಳ : ನನಗ ಹಲವಾರು ಹಳೆಯ ಚಿಂತೆಗಳು. ಇದೊಂದು ಹೊಸ ಚಿಂತೆ. ಕಲ್ಯಾಣಕ್ಕ ನಾನು ಬಂದು ಒಂದು ವರ್ಷವಾಯಿತು. ಗಣಕಶಾಲೆಯ ಆಡಳಿತ ನಿಯಂತ್ರಣಕ್ಕೇ ಬರತಿಲ್ಲ.



**ಮಂಚಣ್ಣ ;** ತುಂಬ ಎಚ್ಚರವಹಿಸಿದರೂ ತಪ್ಪು ಮತ್ತೆ ಮತ್ತೆ ಘಟಿಸ್ತಾ ಅದ. ನಾವು ಎಲ್ಲಿ ತಪ್ಪೀವಿ ಎಂಬುದೇ ಅರ್ಥ ಆಗತಾ ಇಲ್ಲ.

**ಬಿಜ್ಜಳ :** (ಸಿಟ್ಟಿನಿಂದ) ಸೈನ್ಯ ಮತ್ತು ಭಂಡಾರ - ಇವೆರಡೂ ರಾಜ್ಯ ರಥದ ಎರಡು ಚಕ್ರಗಳು. ಇವುಗಳಲ್ಲಿ ಭಂಡಾರ ಅಸ್ತವ್ಯಸ್ತ ಆಗೂದಂದರ...

**ಬಲದೇವ :** (ಬಸವಣ್ಣನೊಂದಿಗೆ ಬರುತ್ತಾನೆ) ನಮಸ್ಕಾರ ಪ್ರಭುಗಳಿಗೆ, ಏನು ತುಂಬ ಸಿಟ್ಟಿನಲ್ಲಿದ್ದೀರಿ?

**ಬಿಜ್ಜಳ :** ಬನ್ನಿ ಸಚಿವರೇ, ಗಣಕ ಶಾಲೆ ಮೊದಲಿನಿಂದ ನನಗೆ ಒಂದು ಸಮಸ್ಯೆ ಆಗ್ಯಾದ. ಇದು ಎಂದು ಸುಧಾರಿಸುವುದೋ. ಯಾವ ಪುಣ್ಯಾತ್ಮ ಬಂದು ಇದನ್ನು ಸುಧಾರಸ್ತಾನೋ.

**ಬಸವಣ್ಣ :** ನಾನು, ನಾನು ಸುಧಾರಿಸತೀನಿ, ಪ್ರಭು.

**ಬಿಜ್ಜಳ :** ನೀನು ? ಬಲದೇವ, ಯಾರು ಈತ ?

**ಬಲದೇವ :** ಪ್ರಭೂ, ನನ್ನ ಅಳಿಯ, ಬಸವಣ್ಣ - ಬಾಗೆವಾಡಿಯವ.

**ಬಿಜ್ಜಳ :** ಏನು ಬಲದೇವ ? ಸೂರ್ಯನೇ ಚಂದ್ರನಾಗಿ ಅವತರಿಸಿದಂಥ ವ್ಯಕ್ತಿ, ಕರುಣೇಯೇ ಜೀವ ಪಡೆದ ವ್ಯಕ್ತಿ. ನೀನು ಪುಣ್ಯವಂತ. ನಿನ್ನ ಮಗಳು ಗಂಗಾಂಬೆ ಪುಣ್ಯವಂತೆ.

**ಬಲದೇವ :** ಎಲ್ಲ ದೇವರಿಚ್ಛೆ.

**ಬಿಜ್ಜಳ :** ಅಂದ ಹಾಂಗ, ಬಸವಣ್ಣನ ವೃತ್ತಿ ?

**ಬಲದೇವ :** ನಿನ್ನೆಯೇ ಬಂದಾನ. ವೃತ್ತಿ ವಿಷಯವನ್ನೇ ಕುರಿತು ತಮ್ಮೊಂದಿಗೆ ಮಾತಾಡಲಿಕ್ಕ ಬಂದೀನಿ.

**ಬಿಜ್ಜಳ :** ಮಾತಾಡೂದೇನದ ? ಗಣಕ ಶಾಲೆ ಸುಧಾರಿಸುವುದಾಗಿ ಹೇಳತಾನ. ತುಂಬ ಆತ್ಮವಿಶ್ವಾಸದ ವ್ಯಕ್ತಿ ಅಂತ ಕಾಣತದ. ನಮ್ಮಲ್ಲಿ ಗಣಕಾಧಿಕಾರಿ ಆಗಿರಲಿ. (ಬಸವಣ್ಣನ ಕಡೆ ಹೊರಳಿ) ಏನು ಬಸವಣ್ಣಾ, ನಿನ್ನ ಅರ್ಹತೆಗಳೇನು ?

**ಬಸವಣ್ಣ :** ಪ್ರಾಮಾಣಿಕತೆ, ಪರಿಶ್ರಮ.

**ಬಿಜ್ಜಳ ;** ಹಾಂ! ಆಸಕ್ತಿ ?

**ಬಸವಣ್ಣ :** ಕಾರ್ಯ ಯೋಜಿಸೂದು, ಯೋಜನೆ ಕಾರ್ಯಗತಗೊಳಿಸೂದು.

**ಬಿಜ್ಜಳ :** ಭಲೇ, ಸೋಮವಾರದಿಂದ ಕೆಲಸಕ್ಕ ಬಂದುಬಿಡು.

**ಬಸವಣ್ಣ :** ಪ್ರಭೂ, ಕೆಲಸಗಾರರಿಗೆ ಮುಖ್ಯವಾದುದು ದಿವಸವಲ್ಲ; ಕೆಲಸ.

**ಬಿಜ್ಜಳ :** ನಿನ್ನ ಇಚ್ಛೆ. ಇಂದೇ ಕೆಲಸ ಸುರೂ ಮಾಡು. ಗಣಾಧಿಕಾರಿಯಾಗಿ ಅಲ್ಲ. ಮಹಾಗಣಾಧಿಕಾರಿಯಾಗಿಯೇ ಸುರೂ ಮಾಡು.

**ಬಸವಣ್ಣ :** ಆಗಲಿ ಪ್ರಭು (ಕೈಮುಗಿದು ಇಬ್ಬರೂ ಹೋಗುತ್ತಾರೆ).

## ದೃಶ್ಯ - ೧೮

(ಗಣಕಶಾಲೆ, ಬಾಗಿಲ ಮೇಲೆ "ಕಾಯಕವೇ ಕೈಲಾಸ" ನಾಮಫಲಕ. ಇಬ್ಬರು ಸೇವಕರು ಕಸಗುಡಿಸುತ್ತ ಮಾತನಾಡುತ್ತಿದ್ದಾರೆ).

**ಸೇವಕ ೧ :** ನಮ್ಮ ಗಣಕಶಾಲೆ ಈಗ ಮೊದಲಿನ ಹಾಂಗ ಉಳಿದಿಲ್ಲ.

**ಸೇವಕ ೨ ;** ಬಸವಣ್ಣನವರು ಬಂದಾಗಿನಿಂದ ಇದರ ಬಣ್ಣsನs ಬದಲಾಗ್ಯಾದ.

**ಸೇವಕ ೧ :** ಹೌದು, ಅವರು ಬಂದ ಆರು ತಿಂಗಳದಾಗೇ ಆರು ವರ್ಷಗಳ ಸುಧಾರಣೆ ಮಾಡಿದ್ರು. (ಮೇಲೆ ಬೆರಳು ಮಾಡುತ್ತ) ಈಗಂತೂ ಈ ವಾಕ್ಯದ ಪ್ರತಿಯೊಂದು ಅಕ್ಷರವೂ ಇಲ್ಲಿ ಆಚರಣೆಗೆ ಇಳೀತಾ ಇದೆ.

**ಸೇವಕ ೨:** ಕೆಲವರಿಗಿ ಇದರಿಂದ ತೊಂದರೆಯೂ ಆಗ್ಯಾದ. ದಡ್ಡರೂ, ದುಷ್ಟರೂ, ಆಲಸಿಗಳೂ ಸಂಸ್ಥೆಗೆ ದೊಡ್ಡ ಶಾಪ ಅಂತ ಇವರ ಅಭಿಪ್ರಾಯ.

**ಸೇವಕ ೧:** ಹೌದು, ಇಂಥವರು ಬಸವಣ್ಣನವರನ್ನು ದೂಷಿಸತಾ ಇದ್ದಾರ. ದುಡಿಯುವರಿಗಿ ಮಾತ್ರ ಇಲ್ಲಿ ಮುಕ್ತ ಅವಕಾಶ ಅದ.

**ಸೇವಕ ೨:** 'ಸರಿಯಾದ ಸಮಯಕ್ಕ ಸರಿಯಾದ ಕೆಲಸ ಮಾಡು" ಎಂಬ ಇವರ ಹೊಸ ನೀತಿಯಿಂದಾಗಿ ಕೆಲಸದ ವೇಗವೂ ಹೆಚ್ಚಾಗ್ಯಾದ, ಗುಣಮಟ್ಟವೂ ಹೆಚ್ಚಾಗ್ಯಾದ. ಈ ವಿಷಯ ಬಿಜ್ಜಳ ಮಹಾರಾಜರಿಗೆ ಸಂತೋಷ ಉಂಟುಮಾಡ್ಯಾದ.

**ಸೇವಕ ೨ :** ಹೌದು, ಈಗ ಮಹಾರಾಜರು ಎಲ್ಲ ಕೆಲಸಗಳಿಗೂ ಬಸವಣ್ಣನನ್ನೇ ಕೇಳ್ತಾರ.

**ಸೇವಕ ೧ :** ಹಾಗಾದರ, ಉಳಿದ ಅಧಿಕಾರಿಗಳು ಸಿಟ್ಟಿಗೇಳ್ತಾರ ನೋಡು.

**ಸೇವಕ ೨ :** ಈಗಾಗಲೇ ಕೊಂಡಿ ಮಂಚಣ್ಣ ಮೊದಲಾದವರು ಸಿಟ್ಟಾಗ್ಯಾರ. ಬಸವಣ್ಣನ ಹೀಂಗ ಬೆಳಿಲಾಕ ಬಿಡಬಾರದಂತ ಪಿತೂರಿ ಸುರು ಮಾಡ್ಯಾರ.

**ಸೇವಕ ೧ :** ಯಾರು ಏನೇ ಮಾಡಲಿ, ಬಸವಣ್ಣನವರು ಅದ್ಭುತ ವ್ಯಕ್ತಿ. ಗಣಕಶಾಲೆಯ ಲೆಕ್ಕವೆಲ್ಲ ಇವರ ಕೈಮ್ಯಾಲ.

**ಸೇವಕ ೨:** ಹಣದ ವಿಷಯದಾಗ ಮಿತವ್ಯಯ -ಪಾವಿತ್ರ್ಯ ಸಾಧ್ಯ ಆಗಿ, ಸೋರೂದು ನಿಂತು, ಭಂಡಾರ ಬೆಳೀತಾ ಅದ.



**ಸೇವಕ ೧ :** ನಿನ್ನೆ ಹೇಳಿದರು **'ಹಣವನ್ನು ನೀರಿನ ಹಾಂಗ ಗಳಿಸ್ರಿ, ತೀರ್ಥದ ಹಾಂಗ ಬಳಸ್ರಿ'** ಅಂತ. ಮೊನ್ನೆ ಹೇಳಿದರು 'ರಾಜ್ಯ ವಿಸ್ತಾರ ಯಾಕ ಬೇಕು ? ಯುದ್ಧ ಅನವಶ್ಯ. ಎಲ್ಲರೂ ದುಡಿದರ, ದಯೆಯಿಂದ ನಡದರ ರಾಜ್ಯಾಡಳಿತವೂ ಬ್ಯಾಡ' ಅಂತ.

**ಸೇವಕ ೨:** ಹೇಳೂದೇನು ಬಂತು ? ಹೇಳಿದಾಂಗ ಬಾಳತಾರ. ಶಕ್ತಿ ಇರುವಷ್ಟು ದುಡೀತಾರ, ಅವಶ್ಯವಿರುವಷ್ಟು ಸಂಬಳ ಪಡೀತಾರ. ಇದು ಕೆಲಸ -ಸಂಬಳಗಳ ಬಗ್ಗೆ ಇವರು ಇಟಗೊಂಡ ನೀತಿ.

**ಸೇವಕ ೧:** ಅಷ್ಟೇ ಯಾಕ, ಕೆಲಸದಲ್ಲಿ ತಾರತಮ್ಯನೇ ಮಾಡೂದಿಲ್ಲ. ಮೊನ್ನೆ ಅವರ ಸೇವಕ ಬಂದಿರಲಿಲ್ಲ. ತಾವೇ ಬಾಗಿಲ ತಗದ್ರು, ಕಸ ಗುಡಿಸಿದ್ರು, ತಮ್ಮ ಕೆಲಸಕ್ಕ ತೊಡಗಿದ್ರು. ಇವೆಲ್ಲ ನಮಗೆ ದೊಡ್ಡ ಪಾಠಗಳಾಗಿ ಪರಿಣಮಿಸ್ಯಾವ (ಕಸಗುಡಿಸುತ್ತ ಹೋಗುತ್ತಾರೆ).

## ದೃಶ್ಯ - ೧೯

(ಬಿಜ್ಜನ ಅರಮನೆ. ರಾಣಿ ರಂಭಾದೇವಿಯೊಂದಿಗೆ ಬಿಜ್ಜಳನ ಮಾತುಕತೆ)

**ಬಿಜ್ಜಳ :** ರಂಭಾ, ಪುರುಷನ ಭಾಗ್ಯ ಬಲ್ಲವರಾರು ? ಕೇವಲ ಮಾಂಡಲಿಕ ಆಗಿದ್ದ ನಾನು ಚಕ್ರವರ್ತಿ ಆಗೂ ಕನಸ ಕಂಡಿರಲಿಲ್ಲ. ಹೇಡಿ ತೈಲಪ ಅರಮನೆ ಬಿಟ್ಟು ಓಡಿಹ್ಯಾದ. ಆದರ ಚಾಲುಕ್ಯರ ಸ್ವಾಮಿನಿಷ್ಠ ಮಾಂಡಲಿಕರು ನನ್ನ ಚಕ್ರಾಧಿಪತ್ಯ ಒಪ್ಪಿಕೊಳ್ಳಲು ಇನ್ನೂ ಹಿಂದುಮುಂದ ನೋಡತಾ ಇದ್ದಾರ.

**ರಂಭಾ :** ಹೌದು ಮಹಾರಾಜ. ಕುರುಗೋಡ ಸಿಂದರು, ಗೋವೆಯ ಕದಂಬರು ಬಂಡೆಗಲ್ಲಿನ್ಹಾಂಗ ನಿಮ್ಮ ಎದುರ ನಿಂತಾರ.

**ಬಿಜ್ಜಳ :** ಈಗ ಪ್ರಜೆಗಳಲ್ಲಿ ನನ್ನ ಬಗ್ಗೆ ಪ್ರಶ್ನಾತೀತ ವಿಶ್ವಾಸ ಬೆಳೆಯೂದು ಅವಶ್ಯ ಅದ. ಹೀಗಾಗಿ ನಾನು ಒಬ್ಬ ಪ್ರಭಾವಶಾಲಿ ವ್ಯಕ್ತಿಯ ವರ್ಚಸ್ಸನ್ನು ಬಳಸಿಕೊಳ್ಳಬೇಕಾಗ್ಯಾದ, ರಂಭಾ.

**ರಂಭಾ :** ಪ್ರಭು, ಸಮಯ ಬಹಳ ಸೂಕ್ಷ್ಮ ಅದ. ಜಾಗ್ರತೆಯಿಂದ ಹೆಜ್ಜಿ ಹಾಕ್ರಿ. ಪ್ರಭಾವಶಾಲಿ ವ್ಯಕ್ತಿ ಸಿಗಬಹುದು. ಪ್ರಾಮಾಣಿಕ ವ್ಯಕ್ತಿ ಸಿಗಬೇಕಲ್ಲ.

**ಬಿಜ್ಜಳ :** ಹುಡುಕೀನಿ, ಈಗ ಇಲ್ಲಿಗೂ ಬರಲಿಕ್ಕ ಹೇಳೀನಿ.

**ರಂಭಾ :** ಯಾರ ಅವರು ?

**ಬಿಜ್ಜಳ :** ನಮ್ಮ ಮಹಾಗಣಾಧಿಕಾರಿ ಬಸವಣ್ಣ.

**ರಂಭಾ :** ನಾನೂ ಕೇಳೀನಿ. ಕಳೆದ ಎರಡು ವರ್ಷಗಳಿಂದ ಅವರ ಹೆಸರು ಬೆಳೀತಾ ನಡದದ. ತುಂಬ ಸಾತ್ವಿಕ ವ್ಯಕ್ತಿ ಅಂತ ಜನ ಹೇಳೂದನ್ನ ಕೇಳೀನಿ.

**ಬಿಜ್ಜಳ :** ಕೇವಲ ಸಾತ್ವಿಕ ಅಲ್ಲ. ಅದನ್ನೂ ಮೀರಿದ ದೈವೀವ್ಯಕ್ತಿ. ವಿಶ್ವಾಸಕ್ಕ ಬರೆದ ವ್ಯಾಖ್ಯಾನ; ಪ್ರಾಮಾಣಿಕತೆಗೆ ಬರೆದ ಭಾಷ್ಯ. ದಿನದಿಂದ ದಿನಕ್ಕ ಅವನ ವರ್ಚಸ್ಸಿನ ವರ್ತುಲ ವಿಸ್ತಾರವಾಗ್ತಾ ನಡದದ. ಅವನ ಆಗಮನ ಕಲ್ಯಾಣನಗರಕ್ಕ ಕಿರಣ, ಕುಂತಳ ನಾಡಿಗಿ ಬೆಳಕ.

**ರಂಭಾ :** ತುಂಬಾ ಸಾತ್ವಿಕರು ರಾಜಕಾರ್ಯದ ಚಾಣಕ್ಯನೀತಿಗಿ ಉಪಯೋಗ ಬೀಳ್ತಾರ?

**ಬಿಜ್ಜಳ :** ಉಪಯೋಗಿಸಿಕೊಳ್ಳುವ ನಮ್ಮ ಕೈಯಾಗ ಅದ. ಆ ವಿಚಾರ ನನಗ ಇರಲಿ.

(ಅಷ್ಟರಲ್ಲಿ ಬಲದೇವ, ಬಸವಣ್ಣ ಆಗಮಿಸುತ್ತಾರೆ, ರಂಭಾ ಎದ್ದು ಒಳಗೆ ಹೋಗುತ್ತಾಳೆ).

**ಬಲದೇವ ಬಸವಣ್ಣ :** ನಮಸ್ಕಾರ, ಪ್ರಭುಗಳಿಗೆ.

**ಬಿಜ್ಜಳ :** ಬನ್ನಿ ಕುಳಿತುಕೊಳ್ರಿ. (ಕುಳಿತುಕೊಳ್ಳುತ್ತಾರೆ).

**ಬಲದೇವ :** ನಮ್ಮಿಬ್ಬರನ್ನು ಕರೆಸಿದ ಕಾರಣವೇನು ಪ್ರಭು?

**ಬಿಜ್ಜಳ :** ಸಚಿವರೇ, ಕುಂತಳ ನಾಡಿನ ಹಣೆಯ ಬರಹ ಕ್ರಮವಾಗಿ ಬದಲಾಗುತ್ತಿರುವ ಲಕ್ಷಣಗಳು ತೋರಿ ಬರತಾ ಇವೆ. ಮಾಂಡಲಿಕನಾಗಿದ್ದ ನಾನು ಚಕ್ರವರ್ತಿಯಾದುದಕ್ಕಿಂತ, ಬಸವಣ್ಣ ಮಹಾಗಣಾಧಿಕಾರಿಯಾಗಿ ಬಂದು ಭಂಡಾರ ಸುಧಾರಿಸಿರೂದು ಮಹತ್ವಪೂರ್ಣ ಘಟನೆಯಾಗ್ಯಾದ.

**ಬಸವಣ್ಣ :** ಏನೋ ನ್ನ ಕೈಯಿಂದಾಗುವ ಕೆಲಸ ಶ್ರದ್ಧೆಯಿಂದ ಮಾಡತಾ ಇದ್ದೇನೆ.

**ಬಿಜ್ಜಳ :** ಇರಬಹುದು, ಆದರ "ನಮ್ಮ ಪ್ರಾಮಾಣಿಕತೆಯೇ ನಮ್ಮ ಆಸ್ತಿ" ಎಂಬ ನಿಮ್ಮ ನಡತೆಯಿಂದಾಗಿ ರಾಜ್ಯಭಂಡಾರದ ಕಾರ್ಯಕಲಾಪ ಸುಧಾರಿಸ್ತ ನಡದಾದ.

**ಬಲದೇವ :** ಪ್ರಜೆಗಳೂ ಹೀಗೆಯೇ ಹೇಳ್ತಿದಾರ, ಪ್ರಭು.

**ಬಿಜ್ಜಳ :** ಈಗ ಒಂದು ವಿಷಯ. ಕಳೆದ ವಾರ ಭಂಡಾರ ಸಚಿವ ಸಿದ್ಧರಸರು ತೀರಿಕೊಂಡ್ರು. ಆ ಸ್ಥಾನ ತುಂಬಲು ಬಸವಣ್ಣಾ, ನೀವೇ ಸಮರ್ಥರೆಂದು ನನ್ನ ಅನಿಸಿಕೆ. ನೀವು ಈ ಹೊಣೆ ಹೊರಬೇಕು. ಅದಕ್ಕಾಗಿ ನಿಮ್ಮನ್ನು ಕರೆಸಿದ್ದು. ಹಿಡಿಯಿರಿ (ಎನ್ನುತ್ತ ಅಧಿಕಾರಪತ್ರವನ್ನು ಎತ್ತಿ ಹಿಡಿಯುತ್ತಾನೆ).

**ಬಸವಣ್ಣ :** ಇದೇನು ಪ್ರಭುಗಳೇ ಇಷ್ಟು ದೊಡ್ಡ ಭಾರ.....

**ಬಿಜ್ಜಳ :** ಹೌದು, ನಾನು ದೊಡ್ಡ ಭಾರ ಕಡಿಮೆ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ನೀವು ಹೊರಬಲ್ಲಿರಿ, ಇವತ್ತಿನ ಸಂದರ್ಭದಾಗ ನೀವೊಬ್ಬರೇ ಹೊರಬಲ್ಲಿರಿ. ಹಿಡಿಯಿರಿ (ಅಧಿಕಾರ ಪತ್ರ ಕೊಡುತ್ತಾನೆ).

**ಬಸವಣ್ಣ :** ಆಗಲಿ ಪ್ರಭು. (ಅಧಿಕಾರ ಪತ್ರವನ್ನು ಸ್ವೀಕರಿಸುತ್ತಾನೆ).



**ಬಿಜ್ಜಳ :** ಬಸವಣ್ಣಾ, ಈವರೆಗೆ ನಿಮ್ಮ ಕೈ ರಾಜ್ಯದ ಕಡತಗಳ ಮ್ಯಾಲ; ಈಗ ರಾಜ್ಯ ಸಂಪತ್ತು ನಿಮ್ಮ ಕೈ ಮ್ಯಾಲ. ಅದರ ನೇರ ವಿನಿಯೋಗದ ಪರಮಾವಧಿ ಅಧಿಕಾರ ನಿಮ್ಮದು. ಇದೊಂದು ನಿಮಗ ಅಗ್ನಿಪರೀಕ್ಷೆ.

**ಬಸವಣ್ಣ :** ನನಗ ಅಗ್ನಿಪರೀಕ್ಷೆ ಅಂದರ ಯಾವಾಗಲೂ ಪ್ರಿಯವಾದುದು. ಹಣದ ಮಧ್ಯೆ ಇದ್ದೂ ಶುದ್ಧವಾಗಿರೂದು ಒಂದು ರೀತಿ ನನ್ನನ್ನು ನಾನು ಪರೀಕ್ಷೆಗೆ ಒಡ್ಡಿಕೊಂಡಂಗ. ಇದು ಒಂದು ಬಗೆಯ ಆತ್ಮಶುದ್ಧಿಯ ಪ್ರಯೋಗ ಅಂತs ಭಾವಿಸ್ತೀನಿ.

**ಬಲದೇವ :** ಬಸವಣ್ಣಾ, ಈ ವರೆಗೆ ನಿನ್ನ ಪ್ರಯೋಗಗಳನ್ನು ಜನ ನೋಡ್ಯಾರ, ಕೇಳ್ಯಾರ. ನಿನ್ನ ಬಗ್ಗೆ ಅನೇಕರಿಗೆ ಕುತೂಹಲ ಅದ.

**ಬಸವಣ್ಣ :** ಏನೋ ನಾನೊಬ್ಬ ಸಾಮಾನ್ಯ, ಶಿವಸಾಮಾನ್ಯ. ಮಹಾರಾಜರು ವಹಿಸಿಕೊಟ್ಟ ಈ ಹೊಣೆ ಪ್ರಾಮಾಣಿಕವಾಗಿ ನಿರ್ವಹಿಸತೀನಿ.

**ಬಿಜ್ಜಳ :** ನನಗೆ ನಿಮ್ಮ ಮ್ಯಾಲ ತುಂಬ ವಿಶ್ವಾಸ ಅದ. ಬಲದೇವಾ, ನೀವು ಆಗಾಗ ಭಂಡಾರ ಸಚಿವ ಬಸವಣ್ಣನವರಿಗೆ ಮಾರ್ಗದರ್ಶನ ಮಾಡತಿರಬೇಕು.

**ಬಲದೇವ :** ಆಗಲಿ, ಪ್ರಭು (ಇಬ್ಬರೂ ನಮಸ್ಕಾರ ಹೇಳಿ ಹೋಗುತ್ತಾರೆ).

## ದೃಶ್ಯ - ೨೦

(ಡಂಗುರ ಸಾರುವುದು. "ಕೇಳಿರಿ, ಕೇಳಿರಿ, ದೀನರು-ದಲಿತರು ಭಂಡಾರ ಶಾಲಿಗಿ ಬರಬೇಕಂತ ಸಚಿವ ಬಸವಣ್ಣನವರು ಆದೇಶ ಹೊರಡಿಸ್ಯಾರ. ನಿಮ್ಮ ಕುಂದುಕೊರತೆ ಕೇಳಿ, ಸಾಧ್ಯವಿರುವ ಪರಿಹಾರ ನೀಡ್ತಾರ. ಎಲ್ಲರೂ ಬರಬೇಕು" ಎನ್ನುತ್ತು ಹೋಗುತ್ತಾನೆ. ಭಂಡಾರದತ್ತ ಜನ ಸಾಗಿಬರುತ್ತದೆ).

**ಪ್ರಜೆ ೧:** ಈ ವರೆಗೆ ಮಂತ್ರಿಗಳನ್ನೇ ನೋಡದವ್ರು ನಾವು. ನಮ್ಮನ್ನು ನೋಡಲು ಈ ಮಂತ್ರಿ ಆಮಂತ್ರಿಸ್ಯಾರ. ಇವರು ಹೊಸ ರೀತಿಯ ಮಂತ್ರಿಗಳಂತs ಕಾಣ್ತಾದ. (ಜನಸಮೂಹ ನೆರೆದಿದೆ).

**ಬಸವಣ್ಣ :** (ಹೊರಬಂದು, ಸ್ವಗತ) ಅಯ್ಯೋ ಬಡತನವೇ ಅಪಾರ ದಾರಿದ್ರ್ಯವೇ. (ವ್ಯಕ್ತವಾಗಿ) ಬಂಧುಗಳೇ, ಇಲ್ಲಿ ದೀನರೂ-ದಲಿತರೂ ಸೇರಿರಿ, ಈ ಎರಡೂ ಯಾತನೆಗಳಿಂದ ಬಿಡಿಸಿಕೊಂಡರ ಮಾತ್ರ ನಿಮ್ಮ ಉದ್ಧಾರ ಸಾಧ್ಯ.

**ಪ್ರಜೆ ೧ :** ಬಿಡಿಸಿಕೊಳ್ಳೂ ದಾರಿ ಯಾವುದು ಸ್ವಾಮೀ ?

**ಬಸವಣ್ಣ :** ಧರ್ಮಾಧಿಕಾರಿಗಳ ಧೂರ್ತತನದಿಂದ ದಲಿತರು -ದಲಿತರಲ್ಲದವರೆಂಬ ಜಾತಿಭೇದ ಹುಟ್ಟಿಕೊಂಡದ. ನಿಮ್ಮ ಸೋಮಾರಿತನದಿಂದ ಬಡವರು-ಶ್ರೀಮಂತರೆಂಬ ಭೇದ ಹುಟ್ಟಿಕೊಂಡದ.

**ಪ್ರಜೆ ೨ :** ದಲಿತ-ದಲಿತರಲ್ಲದವರು ಎಂಬ ಜಾತಿಭೇದವನ್ನು ಧರ್ಮಾಧಿಕಾರಿಗಳು ಹುಟ್ಟಿಸ್ಯಾರ?

**ಬಸವಣ್ಣ :** ಹೌದು. ದೇವಾಲಯದ ಪುರೋಹಿತರು, ಮಠದ ಆಚಾರ್ಯರು-ಇವೆರಡೂ ಪ್ರತಿಗಾಮಿಶಕ್ತಿಗಳು. ಧರ್ಮದ ಹೆಸರಿನ್ಯಾಗ ದಲಿತವರ್ಗವನ್ನು ಸೃಷ್ಟಿಸುತ್ತ ಬಂದ ಎರಡು ಕ್ರೂರ ಕೈಗಳು. ಇವೆರಡನ್ನೂ ನಾವು ದುರ್ಬಲಗೊಳಿಸಬೇಕು. ಇಲ್ಲದಿದ್ದರ ನಾವು ಬೆಳೆಸಿದುದನ್ನು ಇವು ಅಳಿಸ್ತಾ ಹೋಗ್ತಾವ.

**ಪ್ರಜೆ :** ಹಾಗಾದರೆ ನಾವು ಏನು ಮಾಡಬೇಕು ?

**ಬಸವಣ್ಣ :** ಆಚಾರ್ಯರ ಮಠ ನಿಮ್ಮನ್ನು ತಿರಸ್ಕರಿಸ್ಯಾದ, ನೀವಾಗಿಯೇ ಮಠಗಳನ್ನು ನಿರಾಕರಿಸಿ. ನಿಮ್ಮ ಮನೆಗಳೇ ಮಠಗಳೆಂದು ಭಾವಿಸಿರಿ. ಪುರೋಹಿತರ ದೇವಾಲಯ ನಿಮ್ಮನ್ನು ತಿರಸ್ಕರಿಸ್ಯಾದ, ನೀವಾಗಿಯೇ ದೇವಾಲಯವನ್ನು ನಿರಾಕರಿಸಿ, ದೇಹವನ್ನೇ ದೇವಾಲಯ ಮಾಡಿಕೊಳ್ಳಿರಿ.

**ಪ್ರಜೆ ೨ :** ದೇಹದೇವಾಲಯಕ್ಕ ದೇವರು ?

**ಬಸವಣ್ಣ :** ನಿಮ್ಮ ಆತ್ಮವೇ ದೇವರು. ಅದರ ಪ್ರತೀಕವೆಂಬಂತೆ ಇಷ್ಟಲಿಂಗ ಧರಿಸಿರಿ. ದಿನನಿತ್ಯದ ಉಪಾಸನೆಯಿಂದ ಇದು ಆತ್ಮೋದ್ಧಾರದ ಸಾಧನ ಆಗ್ತದ. ಸ್ಪೃಶ್ಯ-ಅಸ್ಪೃಶ್ಯರೆನ್ನದೆ ಎಲ್ಲರ ಎದಿ ಮ್ಯಾಲ ಇರೂದರಿಂದ ಸಾಮಾಜಿಕ ಸಮಾನತೆಯ ಕುರುಹೂ ಆಗ್ತದ.

**ಪ್ರಜೆ ೧ :** ಹೌದು, ದೇವರು ಮತ್ತು ನಮ್ಮ ನಡುವ ನಿಂತು ನಮ್ಮನ್ನು ಪುರೋಹಿತರು ಹರಿದು ತಿನ್ನೂದನ್ನು ಇದು ತಪ್ಪಸ್ತದ, ನಿಜ. ಆದರ ನಮ್ಮ ಬಡತನ ನೀಗಿಸುವ ದಾರಿ ಯಾವುದು ?

**ಬಸವಣ್ಣ ;** ದುಡಿಮೆಯೊಂದೇ ಇದಕ್ಕೆ ಅನಿವಾರ್ಯ ದಾರಿ.

**ಪ್ರಜೆ ೧ :** ಸ್ವಾಮೀ, ದುಡಿಯಲು ಹೊಲ ಹೋಗಲಿ, ಉಪಕರಣಗಳೂ ನಮ್ಮಲ್ಲಿ ಇಲ್ಲ.

**ಬಸವಣ್ಣ :** ನನಗೆ ಗೊತ್ತು, ದುಡಿಯಲು ನಿಮಗೆ ಸ್ವಂತ ಹೊಲವಿಲ್ಲ, ಉದ್ಯೋಗವಿಲ್ಲ. ಇನ್ನೊಬ್ಬರಲ್ಲಿ ದುಡಿಯಬೇಕಂದರ ಕೈಯಲ್ಲಿ ಉಪಕರಣಗಳೂ ಇಲ್ಲ. ಅವನ್ನು ರಾಜ್ಯಭಂಡಾರದಿಂದ ಪೂರೈಸತೀವಿ. ಸಾಮೂಹಿಕವಾಗಿ ದುಡಿದು, ಸಾಮೂಹಿಕವಾಗಿ ಉಣ್ಣೂದನ್ನೂ ಕೆಲವರಿಗೆ ಕಲ್ಪಿಸತೀವಿ.

**ಪ್ರಜೆ ೨ :** ಇದಕ್ಕ ನಮ್ಮ ಒಪ್ಪಿಗಿ ಅದ. ಆದರ ತಕ್ಷಣ ಬದುಕಲು ?

**ಬಸವಣ್ಣ :** ಹೌದು. ರಾಜ್ಯದ ಮೂಲಸದಸ್ಯರಾದ ನಿಮ್ಮ ಪ್ರಾಥಮಿಕ ಆವಶ್ಯಕತೆ ಪೂರೈಸೂದು ರಾಜ್ಯದ ನೈತಿಕ ಹೊಣೆ ಆಗ್ಯಾದ. ಆದುದರಿಂದ ನಿಮಗ ವಾಸಿಸಲು ಒಂದು ಮನಿ, ಮರ್ಯಾದಿ ಮುಚ್ಚಿಕೊಳ್ಳಲು ಒಂದಿಷ್ಟು ಬಟ್ಟೆ ಇತ್ಯಾದಿ ಮೊದಲ ಸಲ ಭಂಡಾರದಿಂದ ಪೂರೈಸತೀವಿ.



**ಪ್ರಜೆ ೧ :** ರಾಜ ಸುಮ್ಮನಿರ್ತಾನ ? ಅವನ ಭಂಡಾರ ನಮಗಾಗಿ ಬಳಸಿದರ ?

**ಬಸವಣ್ಣ :** ರಾಜ್ಯಭಂಡಾರ ರಾಜನದಲ್ಲ. ಪ್ರಜೆಗಳಾದ ನಿಮ್ಮದು. ನಿಮಗರಿಯದಂತೆ ಅದನ್ನು ನೀವು ಬೆಳೆಸೀರಿ. ಹೀಗಾಗಿ ನಾಳೆ ಬಂದು ಮನೆಯ ಜಾಗ - ಹೊಲ ಪಡೆಯಿರಿ, ವೃತ್ತಿ-ಉಪಕರಣಗಳನ್ನು ಒಯ್ಯಿರಿ. ಈಗ ಸಧ್ಯದ ಆವಶ್ಯಕತೆ ನೀಗಿಸಿಕೊಳ್ಳುವುದಕ್ಕಾಗಿ ಒಂದಿಷ್ಟು ಬಟ್ಟೆ, ಒಂದಿಷ್ಟು ಹಣ ಹಿಡೀರಿ. (ಎಲ್ಲರಿಗೂ ಹಂಚಲಾಗುವುದು. ಪಡೆದ ಪ್ರಜೆಗಳು ಹಿಂದಿರುಗುತ್ತಾರೆ. 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ"ಎಂಬ ಧ್ಯೇಯ ವಾಕ್ಯ ಪದೇ ಪದೇ ಕೇಳಿಸುತ್ತದೆ).

## ದೃಶ್ಯ - ೨೧

(ಬಸವಣ್ಣನವರ ಮಹಾಮನೆ)

**ದನಗಾಹಿ :** (ಓಡಿಬಂದು) ಒಡೆಯಾ ಒಡೆಯಾ, ಮಹಾಮನಿಯ ಆಕಳು, ಮಹಾಮನಿಯ ಆಕಳು....

**ಬಸವಣ್ಣ :** ಏನು ? ಏನಾಯ್ತು ?

**ದನಗಾಹಿ :** ಮೇಯತಿದ್ದ ನಮ್ಮ ಆಕಳ ವೈರಿಗಳು ಸೆರೆಹಿಡಿದುಕೊಂಡು ಹೋದ್ರು. ಅವನ್ನ ಬಿಡಿಸಿಕೊಳ್ಳಬೇಕು, ಇಲ್ಲ ಸತ್ತು ವೀರಸ್ವರ್ಗವೇರಬೇಕಂತ ಹೋರಾಡಿದೆವು. ಆದರ ನಮ್ಮನ್ನೆಲ್ಲ ಹೊಡೆದು, ಗಾಯಗೊಳಿಸಿ ಅವುಗಳನ್ನು ಒಯ್ದೇ ಬಿಟ್ರು.

**ಬಸವಣ್ಣ :** ಒಯ್ದೇ ಬಿಟ್ರ? ತಡೀರಿ. (ಕೊಟ್ಟಿಗೆಗೆ ಹೋಗಿ, ಕರುಗಳನ್ನು ಬಿಚ್ಚಿ ಹಿಡಿದುಕೊಂಡು ಬಂದು) ಈ ಕರುಗಳನ್ನೂ ಅವರಿಗೆ ಕೊಟ್ಟು ಬರ್ರಿ, ಇವುಗಳ ತಾಯಿ ಮರುಗಬಾರದು, ಪಾಪ.

**ದನಗಾಹಿ :** ಒಡೆಯಾ, ಇದೆಂಥಾ ರೀತಿ ?

**ಬಸವಣ್ಣ :** ಇದೇ ಸರಿಯಾದ ರೀತಿ. ಹಾಲ ನಾವು ಉಂಡರೇನು ? ಅವರು ಉಂಡರೇನು? ಕೂಡಲ ಸಂಗಮದೇವ ಏಕೋಭಾವ.

**ದನಗಾಹಿ :** ಹಾಗಲ್ಲ ಒಡೆಯಾ, ಸೈನ್ಯ ತಗೊಂಡು ಹೋಗಿ ಹೋರಾಡಿ ಹಸು ಬಿಡಿಸಿ ತರಬೇಕು, ಇಲ್ಲವೆ ಸತ್ತು ವೀರ ಸ್ವರ್ಗ ಸೇರಬೇಕು.

**ಬಸವಣ್ಣ :** (ಸಿಟ್ಟಿನಿಂದ) ಅದು ಅರ್ಥ ಇಲ್ಲದ ಆಚರಣೆ. ಎಲ್ಲಿದೆ ವೀರಸ್ವರ್ಗ ? ಒಂದು ಪ್ರಾಣಿಗಾಗಿ ನೂರಾರು ಜನ ಪ್ರಾಣ ಕಳೆದುಕೊಳ್ಳೂದು, ಅವರ ಕುಟುಂಬ ಅನಾಥವಾಗೂದು...

**ದನಗಾಹಿ :** ಪ್ರಭೂ, ಬ್ರಾಹ್ಮಣರ ಹಾಂಗ ಗೋವುಗಳೂ ದೇವರು. ಹೋರಾಡಿ ಅವನ್ನು ಮರಳಿ ತರಬೇಕಂತ ನಮ್ಮ ಧರ್ಮ ಹೇಳ್ತದ.

**ಬಸವಣ್ಣ :** ಧರ್ಮ, ಧರ್ಮ, ಧರ್ಮ. ಯಾರು ಸೇರಿಸಿದ್ರು ಇವುಗಳನ್ನು ಧರ್ಮದೊಳಗ? ಅರ್ಥವಿಲ್ಲದ ವೈದಿಕ ಆಚರಣೆಗಳು, ನನಗ ಸಮ್ಮತ ಇಲ್ಲ. ಕರ ಹೊಡೆದುಕೊಂಡು ಹೋಗಿ ಅವರಿಗೇ ಕೊಟ್ಟುಬಿಡ್ರಿ. (ದನಗಾಹಿಗಳು ಕರುಗಳನ್ನು ಹೊಡೆದುಕೊಂಡು ಹೋಗುತ್ತಾರೆ. ಅಷ್ಟರಲ್ಲಿ ಮಹಾಮನೆಗೆ ಕೆಲಸದ ಉಪಕರಣ ಹೊತ್ತ ೧೦-೧೫ ಜನ ಜಂಗಮರ ಪ್ರವೇಶ. ಹೊಸ್ತಿಲಲ್ಲಿಯೇ ಪಾದಕ್ಕೆ ನೀರು ಸುರುವಿ ಬಸವಣ್ಣ ನಮಸ್ಕರಿಸುತ್ತಾನೆ).

**ಜಂಗಮ ೧ :** (ದೂರ ಸರಿದು) ಏನು ಬಸವಣ್ಣನವರs, ನೀವು ಮಹಾಮಂತ್ರಿಗಳು, ಮೇಲಾಗಿ ಹುಟ್ಟಾ ಹಾರೂರು, ನಮ್ಮ ಪಾದ ಮುಟ್ಟೂದs?

**ಬಸವಣ್ಣ ;** ನಾನು ಹಾರುವ ಅಂದರ ಕೂಡಲಸಂಗಯ್ಯ ನಗತಾನ. ನಾನು ಬ್ರಾಹ್ಮಣ ಅಲ್ಲ, ನೀವು ಬ್ರಾಹ್ಮಣೇತರರಲ್ಲ. ಈ ಅಸಮಾನತೆ ದೂರ ಮಾಡೂದಕ್ಕಾಗಿಯೇ ಈ ಪಾದಪೂಜೆ. ಇದು, ಒಂದು ಜೀವ ಇನ್ನೊಂದು ಜೀವಕ್ಕ ತೋರೂ ಗೌರವವೂ ಹೌದು. ನನ್ನ ಸಾಮಾಜಿಕ ಸಂವಿಧಾನದಾಗ ಬ್ರಾಹ್ಮಣರೂ ಇಲ್ಲ, ಬ್ರಾಹ್ಮಣೇತರರೂ ಇಲ್ಲ. ನಾವೆಲ್ಲ ಮಾನವರು, ಸಮಾನರು.

**ಜಂಗಮ ೨ :** ಅಲ್ಲ, ನೀವು ಆಳುವವರು, ನಾವು ಆಳಾಗಿರುವವರು. ಒಡೆಯರಿಗಿ ಆಳು ಗೌರವ ತೋರಬೇಕು, ಅದನ್ನು ಬಿಟ್ಟು ಒಡೆಯರೇ ಆಳುಗಳನ್ನು ಗೌರವಿಸೂದ? ಪ್ರಭುಗಳು ಈ ರೀತಿ ಮಾಡಬಾರದು.

**ಬಸವಣ್ಣ :** (ನಕ್ಕು ) ಯಾರು ಪ್ರಭು ? ಯಾರು ಸೇವಕರು? ನೀವೇ ಪ್ರಭು, ನಾವು ಸೇವಕರು. ದುರ್ದೈವ, ನಮ್ಮ ರಾಜನೀತಿ ತಿರುವು ಮುರುವು ಆಗ್ಯಾದ.

**ಜಂಗಮ ೩ :** ಹಾಗಾದರ ಬಿಜ್ಜಳ ಮಹಾರಾಜ ?

**ಬಸವಣ್ಣ :** ಅವರು ಇನ್ನೂ ದೊಡ್ಡ ಸೇವಕರು.

**ಜಂಗಮ ೩:** ಹಾಂ. ಇದೆಂಥ ಮಾತ?

**ಬಸವಣ್ಣ:** ಇದೇ ಸರಿಯಾದ ಮಾತ. ಬರ್ರಿ, ಒಳಗ ಹೋಗಿ ಪ್ರಸಾದ ಸ್ವೀಕರಿಸಿರಿ. (ಒಳಗೆ ಹೋಗುತ್ತಾರೆ. ಅಷ್ಟರಲ್ಲಿ ಪ್ರಸಾದ ಸ್ವೀಕರಿಸಿದ ಕೆಲವು ಪ್ರಜೆಗಳು ಹೊರಗೆ ಬರುತ್ತಾರೆ. ಅವರನ್ನು ಉದ್ದೇಶಿಸಿ) ದುಡಿಯುವ ನೀವು ನನ್ನ ದೇವರು. ನಿಮ್ಮಂಥವರ ಆಗಮನದಿಂದ ನನ್ನ ಮನಿ ಮಹಾಮನಿಯಾಗ್ತ ಇದೆ.

**ಜಂಗಮ ೪ :** ಏನು ಬಸವಣ್ಣನವರೆ, ನಾವು ದೇವರs ?



**ಬಸವಣ್ಣ :** ಖಂಡಿತ, ನೀವು ದೇವರು. ಭಾವಶುದ್ಧಿ ಉಳ್ಳ ನಿಮ್ಮ ಕಾಯ ಕೈಲಾಸ. ನಿಮ್ಮ ಕಾಯಕವೂ ಕೈಲಾಸ.

**ಜಂಗಮ ೧ :** ನಮಗ ಏನೊಂದೂ ಅರ್ಥವಾಗ್ತ ಇಲ್ಲ.

**ಬಸವಣ್ಣ :** ಅರ್ಥವೇನು ಬಂತು ? ಆಚರಿಸ್ತ ಇರುವಿರಿ. ಮೈ ಅಷ್ಟನ್ನೇ ಅಲ್ಲ, ಮನಸ್ಸನ್ನೂ ದುಡಿಸೂದು, **ತಾವು ಬದುಕಲು ಅಲ್ಲ, ಸಮಾಜ ಬದುಕಲು ದುಡಿಯೂದು ಕಾಯಕ.**

**ಜಂಗಮ ೧ :** ನಮ್ಮಲ್ಲಿ ಬಹಳ ಜನ ಕುಂಬಾರ, ಕಂಬಾರ, ಮಡಿವಳ, ಸಮಗಾರ, ಡೋಹರ, ನಾವಿದ ಕೆಲಸ ಮಾಡ್ತಾರ. ನಮ್ಮದು ಕೀಳು ಕೆಲಸ ಅಂತ ಹೇಳ್ತಾರ.

**ಬಸವಣ್ಣ :** ವ್ಯಕ್ತಿ ವ್ಯಕ್ತಿಗಳಲ್ಲಿ ಮೇಲು-ಕೀಳು ಇಲ್ಲ. ಹಾಗೇ ವೃತ್ತಿ ವೃತ್ತಿಗಳಲ್ಲಿಯೂ ಮೇಲು-ಕೀಳುಗಳಿಲ್ಲ. ಶ್ರದ್ಧೆಯಿಂದ ಮಾಡಿದ ಸಮ್ಮಗಾರಿಕೆ, ಶ್ರದ್ಧೆಯಿಲ್ಲದೆ ಮಾಡಿದ ಪೂಜೆಗಿಂತ ಶ್ರೇಷ್ಠ. ಹೀಗಾಗಿ ಅವರವರ ಮನೆತನದ ವೃತ್ತಿ ಅಥವಾ ಅವರಿಗೆ ಇಷ್ಟವಾದ ವೃತ್ತಿಗಳನ್ನು ಕಾಯಕವನ್ನಾಗಿ ಪರಿವರ್ತಿಸಿಕೊಂಡವರೆಲ್ಲರೂ ಭೂಮಿಯ ಮೇಲಿನ ದೇವರು.

**ಜಂಗಮ ೨ :** ಹಾಂ ! ಬ್ರಾಹ್ಮಣರು ತಾವು ಮಾತ್ರ ಭೂಮಿಯ ಮೇಲಿನ ದೇವರು, ಮಿಕ್ಕವರು ಪಾಪಿಗಳು, ನರಕಿಗಳು ಅಂತ ಹೇಳ್ತಾರ.

**ಬಸವಣ್ಣ ;** ಪಾಪ, ನರಕ, ಇವೆಲ್ಲ ಭಯ ಹುಟ್ಟಿಸುವ ಹುಸಿ ಕಲ್ಪನೆಗಳು. ಭಯ ಹುಟ್ಟಿಸಿ ಜನರನ್ನು ಶೋಷಿಸುವ ಕಪಟವಿಚಾರಗಳು. ಇವುಗಳನ್ನು ಕಿವಿಯಲ್ಲಿ ಹಾಕಿಕೊಳ್ಳದೆ 'ಆಚಾರವೇ ಸ್ವರ್ಗ, ಅನಾಚಾರವೇ ನರಕ"- ಈ ಭಾವದಿಂದ ಬದುಕಬೇಕು, ಕಾಯಕ ಮಾಡಬೇಕು. ಈ ಕಾಯಕದ ಸಾರ್ಥಕತೆ ಇರೂದು ಜಂಗಮ ದಾಸೋಹ ಮಾಡುವಲ್ಲಿ.

**ಜಂಗಮ ೩ ;** ಅಂದರ ದುಡಿದು ಗಳಿಸಿದ್ದರಲ್ಲಿ ಒಂದಿಷ್ಟು ದಾನ ಮಾಡಬೇಕಲ್ಲs?

**ಬಸವಣ್ಣ :** ಅಲ್ಲ, ದಾಸೋಹಮಾಡಬೇಕು. ದಾನ ಬ್ಯಾರೆ, ದಾಸೋಹ ಬ್ಯಾರೆ. ನಮ್ಮ ಒಡೆತನದ ವಸ್ತು ಇನ್ನೊಬ್ಬರ ಒಡೆತನಕ್ಕ ಒಪ್ಪಿಸೂದು ದಾನ. ವಸ್ತುವಿನ ಮ್ಯಾಲ ನನ್ನ ಒಡೆತನವೂ ಇಲ್ಲ, ನಿನ್ನ ಒಡೆತನವೂ ಇಲ್ಲ, ದೇವರ ಒಡೆತನ ಅದ ಅಂತ ಭಾವಿಸಿ, ಅದನ್ನು ಇನ್ನೊಬ್ಬನಿಗೆ ವಿನಿಯೋಗಿಸೂದು, ದಾಸೋಹ. ಇಲ್ಲಿ ಸಂಗ್ರಹಕ್ಕ ಅವಕಾಶವಿಲ್ಲ. ಸಂಗ್ರಹಿಸದಿದ್ದರ ನಾವೆಲ್ಲ ಸುಖವಾಗಿ ಬಾಳತೀವಿ, ಭಂಡಾರವೂ ಸಮೃದ್ಧವಾಗಿ ಬೆಳೀತದ.

**ಜಂಗಮರು :** ನಾವೆಲ್ಲ ಈ ಆದರ್ಶ ಬದುಕತೀವಿ. ಬಸವಣ್ಣಾ, ಹೋಗಿಬರುತೀವಿ. (ಪರಸ್ಪರ ಕೈಮುಗಿಯುತ್ತಾರೆ. ವಿವಿಧ ಕೃಷಿ ಹಾಗೂ ಕೈಗಾರಿಕೆಗಳ ದೃಶ್ಯ)

## ದೃಶ್ಯ -೨೨

(ಅನುಭವ ಮಂಟಪ, ಎಲ್ಲ ಶರಣರೂ ನೆರೆದಿದ್ದಾರೆ)

**ಮಾಚಿದೇವ :** ಶರಣರೇ, ಶ್ರಮ ನಮಗ ಬಹಳ ದೊಡ್ಡ ಪಾಠವಾಗಿ ಪರಿಣಮಿಸ್ಯಾದ. ದುಡಿಯುವವನ ಮನಸ್ಸು ಶುದ್ಧ ಆಗಿರ್ತದಂತ ನಮಗ ಮನವರಿಕೆಯಾಗ್ಯಾದ. ಇದರಿಂದ ಕಲ್ಯಾಣದಾಗ "ಶ್ರಮಸಂಸ್ಕೃತಿ"ರೂಪಗೊಳ್ತ ಇದೆ.

**ಬಸವಣ್ಣ :** ಹೌದು, ಶ್ರಮವನ್ನು ನಾವೆಲ್ಲ ದೈವೀಕರಿಸಿಕೊಳ್ಳುವಲ್ಲಿ ನಿರ್ಮಾಣವಾಗಿರುವ 'ಕಾಯಕತತ್ವ'ದ ಜೊತೆ "ದಾಸೋಹತತ್ವ"ವೂ ಬೆಳದದ. **'ನಾನು ದುಡಿಯಬೇಕು. ನಾವು ಉಣ್ಣಬೇಕು'** ಎಂಬ ತತ್ವದಿಂದಾಗಿ ಸಮಾಜದಾಗ ಸುಖ ಸಂತೃಪ್ತಿ ನೆಲೆಯೂರತೊಡಗ್ಯಾದ. ನಮ್ಮದು "ಕಾಯಕ -ದಾಸೋಹಧರ್ಮ'ವೆಂಬ ಚಿತ್ರ ತಾನಾಗಿಯೇ ಆಕಾರ ಪಡಿಯತೊಡಗ್ಯಾದ.

**ಮಧುವಯ್ಯ ;** ಗುರುವಿಗಿ "ತನು ದಾಸೋಹ", ಲಿಂಗಕ್ಕ "ಮನ ದಾಸೋಹ"ವೆಂಬ ಹಳೆಯ ತತ್ವ ನಂಬಿದ ನಾವು, ಜೊತೆಗೆ ಜಂಗಮಕ್ಕ 'ಧನ ದಾಸೋಹ"ವೆಂಬ ಹೊಸ ತತ್ವ ಅಸ್ತಿತ್ವಕ್ಕೆ ತಂದೆವು. ಈ "ಅರ್ಥಮೂಲ ಸಿದ್ಧಾಂತ'ದಿಂದಾಗಿ ಸಮಾಜದಾಗ ಶ್ರೀಮಂತ-ಬಡವ ಎನ್ನುವ ವರ್ಗಭೇದ ವ್ಯವಸ್ಥೆ ಸಡಿಲಾಗ್ತ ನಡದದ.

**ಮಾಚಿದೇವ :** ಈ ವರ್ಗಭೇದ ಅಷ್ಟೇ ಯಾಕ? ಇಷ್ಟಲಿಂಗತತ್ವ ಎಲ್ಲರಿಗೂ ಅನ್ವಯಿಸಿದ ಕಾರಣ, ವರ್ಣಭೇದ ವ್ಯವಸ್ಥೆ ನಾಶಪಡಿಸುವ ಒಂದು ಪರ್ಯಾಯ ಪ್ರಯೋಗ, ಇಲ್ಲಿ ತಾನಾಗಿಯೇ ತೆರೆದುಕೊಳ್ಳತಾ ಇದೆ.

**ಬಸವಣ್ಣ :** ಹೌದು, ಆದರ ಇನ್ನೊಂದು ಹೊಸ ಜಾತಿಯನ್ನಾಗಿಸುವ ಅಪಾಯವೂ ಈ ಇಷ್ಟಲಿಂಗದಲ್ಯಾದ. ಆದುದರಿಂದ ಅಂತರಾತ್ಮನ ಆರಾಧನೆಯೆಂಬ ಅರ್ಥದ ಮೇಲೆ ಒತ್ತು ಬೀಳೂ ಹಾಂಗ ಈ ಲಿಂಗತತ್ವ ಬೆಳೆಸಬೇಕು.

**ನಾಗಲಾಂಬಿಕೆ :** ಇದು ಖಂಡಿತ ಒಪ್ಪಬೇಕಾದುದೇ. ಇನ್ನೊಂದು ಮಾತು, ಮಹಿಳೆಯರು ನಮ್ಮೊಂದಿಗೆ ಇನ್ನೂ ತೀವ್ರ ಹೆಜ್ಜೆ ಹಾಕಬೇಕಾಗ್ಯಾದ.

**ಬಸವಣ್ಣ :** ಇದು ಸ್ವಲ್ಪ ನಿಧಾನವಾಗೂದು ಸಹಜ. "ಸತಿ ಭಕ್ತೆಯಾದರೆ ಹೊಲೆಗಂಜಲಾಗದು" ಎಂಬ ನಮ್ಮ ತತ್ವ ಕಾರಣವಾಗಿ, ಸ್ತ್ರೀಯರಲ್ಲಿ ತಾನು 'ಅಸ್ಪೃಶ್ಯಳಲ್ಲ" ಎಂಬ ವಿಶ್ವಾಸ ಬೆಳಿsತಾ ನಡದದ. ಅನುಭವ ಮಂಟಪದ ಸಂಪರ್ಕ ಈ ಆತ್ಮವಿಶ್ವಾಸವನ್ನು ಇನ್ನೂ ಬೆಳಸತಾ ಇದೆ.

**ಮಾಚಿದೇವ :** ಹೌದು, ಈ ಅನುಭವ ಮಂಟಪ ನಾವೆಲ್ಲ ಒಂದು ಎನ್ನುವ ಭಾವ ಬೆಳಿಸ್ಯಾದ. ಅರ್ಚಕರ ದಬ್ಬಾಳಿಕಿಗಿ ದಾರಿಮಾಡಿಕೊಟ್ಟ ದೇವಾಲಯ ಸಂಸ್ಕೃತಿಯನ್ನು ನಿರಾಕರಿಸಿ, ಈ



ಹಿಂದೆ ಆಚಾರ್ಯರ ಮಠಸಂಸ್ಕೃತಿ ಅಸ್ತಿತ್ವಕ್ಕ ಬಂತು. ಈಗ ಆಚಾರ್ಯರ ದಬ್ಬಾಳಿಕಿಗಿ ದಾರಿಮಾಡಿಕೊಟ್ಟ ಈ ಮಠ ಸಂಸ್ಕೃತಿಯನ್ನು ನಿರಾಕರಿಸಿ, ಅದರ ಸ್ಥಾನದಾಗ ನಾವು ಅಸ್ತಿತ್ವಕ್ಕ ತಂದ ಈ "ಅನುಭವ ಮಂಟಪ" ನಮ್ಮಲ್ಲಿ ಸಮೂಹ ಸಂಸ್ಕೃತಿಯನ್ನು, ಸಂಘಟನೆಯನ್ನು ಬೆಳಸತಾ ಇದೆ.

**ಬಸವಣ್ಣ :** ಇಲ್ಲಿ ಜರುಗತಾ ಇರೂ ಸಾಮಾಜಿಕ ಮತ್ತು ಧಾರ್ಮಿಕ ಚರ್ಚೆಗಳು, ನಮಗರಿಯದ ಹಾಂಗ ಸಿದ್ಧಾಂತಗಳಾಗಿ ರೂಪಗೊಳ್ಳತಾ ಇವೆ. ಈ ಸಿದ್ಧಾಂತ ಜನರಿಗೆ ಮುಟ್ಟಿಸಬೇಕೆಂಬ ನಮ್ಮ ಪ್ರಾಮಾಣಿಕ, ಉತ್ಕಟ 'ಮಾತು' ವಚನ'ಕೃತಿ'ಯಾಗಿ ತುಂಬ ಪರಿಣಾಮಕಾರಿ ಕೆಲಸ ಮಾಡತಾ ಇದೆ.

**ಮಾಚಿದೇವ :** ಖಂಡಿತವಾಗಿಯೂ, ಈ ಮೊದಲು ರಾಜರ ಸ್ತುತಿಗಿ ಬಳಸುವ ಮೂಲಕ, ಮಾತು ಮಲಿನವಾಗಿತ್ತು; ಭಾಷೆ ಭವಿಯಾಗಿತ್ತು. ಈಗ ಜನಕಲ್ಯಾಣದ ಉಪಕರಣವನ್ನಾಗಿ ಬಳಸುವ ಮೂಲಕ ಮಾತು ತನ್ನ ಮಾಲಿನ್ಯವನ್ನು ಕಳೆದುಕೊಳ್ಳತಾ ಇದೆ; ಅದರ ದುರ್ಬಳಕೆ ತಪ್ಪತಾ ಇದೆ.

**ಮಧುವಯ್ಯ :** ಹೌದು, "ಲಿಂಗವಿಲ್ಲದ ಅಂಗ ಭವಿ, ಮುಟ್ಟಲಾಗದು, ಲಿಂಗವಿಲ್ಲದ ಮಾತು ಸೂತಕ ಕೇಳಲಾಗದು" ಎಂಬ ನಿಮ್ಮ ಧೋರಣೆಯಿಂದಾಗಿ ವಚನಗಳ ಭಾಷೆಯ ಬಳಕೆ ಪವಿತ್ರ, ಶೈಲಿ ಸರಳ, ಧೋರಣೆ ಜನಪರ - ಅಂತ ಎಲ್ಲರಿಗೂ ಮನವರಿಕ್ಯಾಗ್ಯಾದ. ಎಲ್ಲರೂ ಅದನ್ನು ಪ್ರೀತಿಸತಾ ಇದಾರ.

**ನಾಗಲಾಂಬೆ ;** ಕೆಲವರು ಅದನ್ನು ಒಳಗೊಳಗs ದ್ವೇಷಿಸತಾ ಇದಾರ. ಈ ವರೆಗಿನ ಧಾರ್ಮಿಕ ಸಾಹಿತ್ಯಕ್ಕಿಂತ ಭಿನ್ನವಾಗಿ ಇದು ಸಾಮಾಜಿಕ ಬದಲಾವಣೆಯನ್ನೂ ಪ್ರತಿಪಾದಿಸೂದರಿಂದ, ಸಮಾಜದಾಗ ಬೇರುಬಿಟ್ಟರೂ ಪುರೋಹಿತವರ್ಗದವರು, ಆಡಳಿತವರ್ಗದವರು ಈ ಸಾಹಿತ್ಯದ ಬಗ್ಗೆ ಅಸೂಯೆ ವ್ಯಕ್ತಪಡಿಸತಾ ಇದಾರ.

**ಮಾಚಿದೇವ :** ಹೌದು, ಇದನ್ನು ನಾನೂ ಗಮನಿಸೀನಿ. ಮಾನವೀಯ ಸಂದೇಶಕ್ಕಾಗಿ ಸಾಹಿತ್ಯ ನಿರ್ಮಿಸೂದು ಬ್ಯಾರೆ. ಸಾಮಾಜಿಕ ನ್ಯಾಯಕ್ಕಾಗಿ ಸಾಹಿತ್ಯ ನಿರ್ಮಿಸೂದು ಬ್ಯಾರೆ. ವಚನ ಸಾಹಿತ್ಯ ಸಾಮಾಜಿಕ ನ್ಯಾಯವನ್ನೂ ಪ್ರತಿಪಾದಿಸೂದರಿಂದ ಪಟ್ಟಭದ್ರ ಸಮಾಜ ಸಿಟ್ಟಾಗೂದ ಸಹಜ.

**ಬಸವಣ್ಣ :** "ಆರು ಮುನಿದು ನಮ್ಮನೇನು ಮಾಡುವರು?" ಮಾಚಯ್ಯಾ. ನಮ್ಮ ವಿಚಾರಶುದ್ಧ, ಆಚಾರಶುದ್ಧ, ಅಭಿವ್ಯಕ್ತಿ ಶುದ್ಧ ಇದ್ದರೆ ಸಾಕು. ಈ ವಚನಸಾಹಿತ್ಯವನ್ನು ನಮ್ಮ ಚಳುವಳಿಯ ಒಂದು ದೊಡ್ಡ ಅಸ್ತ್ರವನ್ನಾಗಿ ಬೆಳೆಸಬಹುದು.

**ನಾಗಲಾಂಬಿಕೆ :** ಈಗ ಅನುಭವಮಂಟಪದಾಗ ಅಕ್ಷರ ಚಳುವಳಿ ಅಸ್ತಿತ್ವಕ್ಕ ಬಂದು, ನೂರಾರು ಜನ ಶರಣ-ಶರಣೆಯರು ವಚನ ಬರೀತಾ ಇದ್ದಾರ. ಇನ್ನ ಮ್ಯಾಲ ಇವನ್ನು ಪ್ರತಿಮಾಡುವ,

ತಾಳೆಗರಿ ಕಟ್ಟು ಸಿದ್ಧಪಡಿಸುವ, ಸರಿಯಾಗಿ ರಕ್ಷಿಸುವ ಒಂದು ದೊಡ್ಡ ವ್ಯವಸ್ಥೆಯನ್ನೇ ನಾವು ಆರಂಭಿಸಬೇಕಾಗ್ಯಾದ.

**ಮಾಚಿದೇವ :** ಜೊತೆಗೆ ಓದೂದು, ಓದಿ ಹೇಳಿ ಜನರೊಳಗ ಜಾಗೃತಿಯನ್ನುಂಟು ಮಾಡೂದು, ವಚನಕಟ್ಟು ಬ್ಯಾರೆ ಬ್ಯಾರೆ ಪ್ರದೇಶಗಳಿಗೆ ಸಾಗಿಸೂದೂ ಅವಶ್ಯ ಅದ. ಆಗ ಈ ವಚನಗಳು ಅನುಭವಮಂಟಪದ ಸಿದ್ಧಾಂತಗಳ ಪ್ರತಿನಿಧಿಗಳ ಹಾಂಗ ದೂರ ದೂರ ಹೋಗಿ, ವ್ಯಕ್ತಿಯನ್ನು, ಸಮಾಜವನ್ನು ತಿದ್ದೂ ಕೆಲಸಮಾಡತಾವ.

**ಬಸವಣ್ಣ :** ಒಳ್ಳೇ ಸಲಹೆ. "ಅನುಭವಮಂಟಪ" ವಿಚಾರ-ಆಚಾರಗಳ ಮಂಟಪವಷ್ಟೇ ಅಲ್ಲ, ಸಾಹಿತ್ಯಮಂಟಪವಾಗಿಯೂ ಬೆಳೆಯೂ ಹಾಂಗ ನಾವೆಲ್ಲ ನೋಡಿಕೊಳ್ಳೋಣ.

## ದೃಶ್ಯ - ೨೩

(ಬಿಜ್ಜಳನ ಆಸ್ಥಾನ. ಅಧಿಕಾರಿಗಳು, ದ್ವಿಜರು, ಶಿವಾಚಾರ್ಯರು ಆಸ್ಥಾನದಲ್ಲಿ ಕುಳಿತುಕೊಂಡಿದ್ದಾರೆ. "ಸ್ವಸ್ತಿ ಸಮಸ್ತಭುವನಾಶ್ರಯ, ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ, ರಾಜಪರಮೇಶ್ವರ, ಕಾಳಾಂಜರ ಪುರವರಾಧೀಶ್ವರ, ಡಮರುಗತೂರ್ಯನಿರ್ಘೋಷಣ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್, ಭೋ ಪರಾಕ್" ಎಂಬ ಘೋಷಣೆಯೊಂದಿಗೆ ಬಿಜ್ಜಳ ಒಳಗೆ ಬರುತ್ತಲೇ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಿ ಕುಳಿತುಕೊಳ್ಳುತ್ತಾರೆ).

**ಕೇಶವಭಟ್ಟ :** ಏನು ? ಕೇಶವಭಟ್ಟರ, ವಾಮದೇವಶಿವಾಚಾರ್ಯರ ಆಗಮನ ?

**ಕೇಶವಭಟ್ಟ :** ಪ್ರಭೂ, ಎಲ್ಲ ಗ್ರಾಮಗಳ ಹಾಂಗ ಅಗ್ರಹಾಗಳಿಗೂ ಭಂಡಾರ ಸಚಿವ ಬಸವಣ್ಣ ತೆರಿಗಿ ವಿಧಿಸ್ಯಾನ. ಅವುಗಳಿಗೆ ರಾಜ್ಯದಿಂದ ಸಲ್ಲಬೇಕಾದ ಸಹಾಯಧನವನ್ನೂ ಅರ್ಧದಷ್ಟು ಕಡಿಮೆ ಮಾಡ್ಯಾನ. ಇದರಿಂದ ಅಗ್ರಹಾರಗಳು ತಮ್ಮ ವೈಭವ ಕಳಕೊಂಡು ಸೊರಗ್ತಾ ನಡದಾವ. ವಿಪ್ರರು ವೈದಿಕಕರ್ಮ ಇಲ್ಲದೆ ದಿನ ನೂಕುತಾ ಇದ್ದಾರ.

**ವಾಮದೇವ ಶಿವಾಚಾರ್ಯ :** ದೇವಾಲಯಗಳೂ ದುಸ್ಥಿತಿಯಲ್ಲ್ಯಾವ. ಚಕ್ರವರ್ತಿಗಳು ಕಟ್ಟಿಸಿದ ಅವು ಮೊದಲಿನ ವೈಭವದಿಂದ ವಂಚಿತ ಆಗ್ಯಾವ. ಭಂಡಾರಿ ಬಸವಣ್ಣ ರಾಜ್ಯದಿಂದ ದೇವಾಲಯಗಳಿಗೆ ಸಲ್ಲಬೇಕಾದ ವಾರ್ಷಿಕ ಹಣ ಬಹಳಷ್ಟು ಕಡಿಮೆಗೊಳಿಸ್ಯಾನ. ಅವನ ಇಷ್ಟಲಿಂಗ ಪೂಜಾಕ್ರಮದಿಂದ ದೇವಾಲಯಕ್ಕ ಬರುವ, ಕಾಣಿಕೆ ಸಲ್ಲಿಸುವ ಜನರ ಸಂಖ್ಯೆಯೂ ಕಡಿಮೆ ಆಗ್ಯಾದ.

**ಬಿಜ್ಜಳ :** ಇದು ವಿಚಿತ್ರ ಆಡಳಿತ. ಅಗ್ರಹಾರಗಳೂ ದೇವಾಲಯಗಳೂ ಸುಖವಾಗಿದ್ದರ, ರಾಜ್ಯಕ್ಕೂ ಸುಖ.



**ಕೇಶವಭಟ್ಟ :** ರಾಜರಿಗೂ ಸುಖ. ದೇವಾಲಯ, ಅಗ್ರಹಾರ ರಕ್ಷಿಸೂದು ರಾಜಧರ್ಮ. ಇದನ್ನು ನಿರಾಕರಿಸೂದಂದರ ನಿಮ್ಮನ್ನೇ ನಿರಾಕರಿಸಿದ ಹಾಂಗ. ಬಸವಣ್ಣಗ ಜನರೇ ದೇವರು. ನೀವು ಲೆಕ್ಕಕ್ಕೇ ಇಲ್ಲ.

**ಬಿಜ್ಜಳ :** ಏನು, ನಾನು ಲೆಕ್ಕಕ್ಕೇ ಇಲ್ಲ?

**ಕೇಶವ ಭಟ್ಟ :** ಇಲ್ಲ; ನೀವು ಪಾಲಿಸತಾ ಬಂದ ಯಜ್ಞ-ಯಾಗ-ದೇವಪೂಜೆ, ದಾನ-ದಕ್ಷಿಣೆ ಇವೆಲ್ಲ ಕ್ರಮೇಣ ನಿಲ್ಲುತ್ತ ನಡದಾವ. ಇದು ಸುಧಾರಣೆಯೇ ? ಹಣದಲ್ಲಿ ಸಮಾನತೆ ಬಂದರ ಕ್ರಮೇಣ ಸಮಾಜದಲ್ಲಿ ಸಮಾನತೆ ತಾನಾಗಿಯೇ ಬರತದಂತ ಹೊಸ ಅರ್ಥನೀತಿ ಹೇಳತಾನ. ಬೀದಿ ಭಿಕಾರಿಗಳಿಗಿ ಬೊಕ್ಕಸದಿಂದ ಹಣದ ಹೋಳೀನs ಹರಸ್ಯಾನ.

**ಬಿಜ್ಜಳ :** ಏನು ? ಬೊಕ್ಕಸದ ಹಣ ?

**ಕೇಶವ ಭಟ್ಟ :** ಹೌದು, ತುತ್ತ ಕೂಳ ಕಾಣದ ಅವರಿಗಿ ಸುಖಭೋಜನ, ನಮಗೋ ಉಪವಾಸ. ತುಂಡುಬಟ್ಟೆ ಕಾಣದ ಅವರಿಗಿ ದಿವ್ಯದುಕೂಲ. ನಮಗೋ ಇನ್ನೊಂದು ಪಂಚೆಯಿಲ್ಲ. ವಿಪರೀತ ಆಡಳಿತ.

**ಮಂಚಣ್ಣ :** ನಮ್ಮದೂ ಅದೇ ಸ್ಥಿತಿ. ರಾಜ್ಯದ ಬೊಕ್ಕಸದಿಂದ ನಮಗೆ ಸಲ್ಲತಿದ್ದ ವಾರ್ಷಿಕ ಸಂಬಳ, ಕಾಣಿಕೆ ಅರ್ಧದಷ್ಟು ಕಡಿಮೆಗೊಳಿಸ್ಯಾನ.

**ಬಿಜ್ಜಳ :** ನನ್ನ ಪರಿವಾರದವರ ವಿಷಯವಾಗಿಯೂ ಹೀಂಗs ನಡಕೊಳ್ಳಲು ಆರಂಭಿಸ್ಯಾನಂತ ತಿಳಿದುಬಂದಾದ. ಇದೇನು ಬಸವಣ್ಣನ ಸ್ವಂತ ಆಸ್ತಿಯೇ ? ಕರೆಯಿರಿ ಅವನನ್ನು (ಅಷ್ಟರಲ್ಲಿ ಬಸವಣ್ಣ ಬರುತ್ತಾನೆ).

**ಮಂಚಣ್ಣ :** ಅದೋ, ಕರೆಸಬೇಕೆನ್ನುವಷ್ಟರಲ್ಲಿ ಬಂದೇಬಿಟ್ಟ.

**ಬಸವಣ್ಣ :** ನಮಸ್ಕಾರ ಪ್ರಭೂ, ಏನಿದು ? ಆಸ್ಥಾನದಲ್ಲಿ ಇವರೆಲ್ಲ !

**ಬಿಜ್ಜಳ :** ಇವರೆಲ್ಲ ಯಾರು ಗೊತ್ತ ?

**ಬಸವಣ್ಣ :** ಗೊತ್ತು. ಅಗ್ರಹಾರಗಳ ಬ್ರಾಹ್ಮಣರು, ಮಠದ ಆಚಾರ್ಯರು, ಆಡಳಿತದ ಅಧಿಕಾರಿಗಳು.

**ಬಿಜ್ಜಳ :** ಇವರಿಗೆ ಇರುವ ಆರ್ಥಿಕ ಸವಲತ್ತು ಯಾಕ ಕಡಿಮೆ ಮಾಡಿದಿರಿ ?

**ಬಸವಣ್ಣ :** ಕಡಿಮೆ ಮಾಡಿಲ್ಲ. ಅನ್ಯಾಯವಾಗಿ ಹೆಚ್ಚು ಆಗಿದ್ದುದನ್ನು ಸರಿಪಡಿಸೀನಿ.

**ಬಿಜ್ಜಳ :** ಯಾರನ್ನು ಕೇಳಿ ಸರಿಪಡಿಸಿದಿರಿ ?

**ಬಸವಣ್ಣ :** ನನ್ನ ವಿವೇಕವನ್ನು.

**ವಾಮದೇವ ಶಿವಾಚಾರ್ಯ :** ಅಲ್ಲ, ರಾಜರನ್ನು ಕೇಳಬೇಕು.

**ಬಸವಣ್ಣ :** ಒಂದೆರಡು ಸಲ ರಾಜರನ್ನು ಕೇಳಿ ನೋಡಿದೆ. ಪ್ರಯೋಜನವಾಗಲಿಲ್ಲ. ಅವರು ನಿಮ್ಮಿಂದ ಪ್ರಭಾವಿತರು. ಹೀಗಾಗಿ ನನ್ನ ವಿವೇಕವನ್ನು ಕೇಳಿ, "ಭಂಡಾರದ ಒಡೆಯ ರಾಜರಲ್ಲ, ಪ್ರಜೆಗಳೆ"ಂದು ಉತ್ತರ ಪಡೆದೀನಿ.

**ಕೇಶವ ಭಟ್ಟ :** ಬಸವಣ್ಣಾ, ಹಣದ ವಿಷಯವಾಗಿ ಈ ಹೊಸ ಬಗೆಯ ನೀತಿ ಪ್ರಾರಂಭಿಸಿದರ ಈಗಿರುವ ಆರ್ಥಿಕ ವ್ಯವಸ್ಥೇ ಹಾಳಾದೀತು. ಅಷ್ಟೇ ಅಲ್ಲ, ಕೆಟ್ಟೀತು ಕಲ್ಯಾಣ, ಹಾಳಾದೀತು ನೋಡಾ ಬಸವಣ್ಣ.

**ಬಿಜ್ಜಳ :** ಸಾಕು, ಸಾಕು, ನಾನು ಕಷ್ಟಪಟ್ಟು ಗೆದ್ದಿರುವ ಈ ಕಲ್ಯಾಣದ ಬಗ್ಗೆ ಅಪಶಕುನ ನುಡಿಬ್ಯಾಡರಿ. (ಕಿವಿ ಮುಚ್ಚಿಕೊಳ್ಳುತ್ತಾನೆ, ಅರ್ಥಪೂರ್ಣವಾಗಿ). ನನಗ ಎಲ್ಲಾ ಗೊತ್ತಾಯ್ತು. ಸೂಕ್ತಕಾಲದಾಗ ನಿರ್ಣಯ ತೆಗೆದುಕೊಳ್ಳತೀನಿ. (ಎಂದವನೇ ತಟ್ಟನೇ ಎದ್ದು ಹೋಗುತ್ತಾನೆ. ಎಲ್ಲರೂ ಬೆರಗಾಗುತ್ತಾರೆ. ಸಭೆ, ನಿರ್ಗಮನ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಧ್ಯೇಯವಾಕ್ಯ ಮತ್ತೆ ಮತ್ತೆ ಕೇಳಿಸುತ್ತದೆ).

## ದೃಶ್ಯ -೨೪

(ಮಹಾಮನೆಯ ಮುಂಭಾಗ, ಜಂಗಮರು ಗುಂಪುಗುಂಪಾಗಿ ಪ್ರವೇಶಿಸುತ್ತಿದ್ದಾರೆ. ದುಡಿದು ದಣಿದಿದ್ದಾರೆ. ಕೃಷಿ, ಬಡಿಗತನ, ಕಂಬಾರಿಕೆ, ಮೊದಲಾದ ಉಪಕರಣ ಹೊತ್ತಿದ್ದಾರೆ. ಬಾಗಿಲು ಮುಂದೆ ಘಟವಾಳಯ್ಯ ನಿಂತು ಬಂದವರನ್ನು ಕೈಮುಗಿದು ಬರಮಾಡಿಕೊಳ್ಳುತ್ತಾನೆ).

**ಬಸವಣ್ಣ :** (ಹೆಳವನನ್ನು ಹೆಗಲಾಸರೆಯಿಂದ ಕರೆದುಕೊಂಡು ಬಂದು) ಶರಣಾರ್ಥಿ, ಘಟ್ಟಿವಾಳಯ್ಯನವರೇ, ಇಲ್ಲೇಕೆ ? ಒಳಗ ನಡೀರಿ.

**ಘಟ್ಟಿವಾಳಯ್ಯ :** ಬರತೀನಿ. ನೀವು ನಡೀರಿ. (ಬಸವಣ್ಣ ಒಳಗೆ ಹೋಗುತ್ತಾನೆ. ಮಹಾಮನೆ ಪ್ರವೇಶಿಸುವ ಕೆಲವರನ್ನು ಘಟ್ಟಿವಾಳಯ್ಯ ಮತ್ತೆ ಮತ್ತೆ ಮರಳಿಸುತ್ತಿದ್ದಾನೆ. ಪ್ರತಿಭಟಿಸಿದರವನ್ನು ಒತ್ತಾಯದಿಂದ ಹೊರದೂಡುತ್ತಿದ್ದಾನೆ. ಆಗಾಗ ಗದ್ದಲ, ಘರ್ಷಣೆಯ ವಾತಾವರಣ ನಿರ್ಮಾಣವಾಗುತ್ತಲಿದೆ) ತಡೀರಿ. ಇದು ಭವಿಯ ಮನಿ ಅಲ್ಲ, ಭಕ್ತ ಬಸವಣ್ಣನ ಮನಿ.

**ಗುಂಪು :** ನಮಗ ಗೊತ್ತು.

**ಘಟ್ಟಿವಾಳಯ್ಯ :** ಏನು ಗೊತ್ತು? ಇಲ್ಲಿ ಜಂಗಮರಿಗ ಮಾತ್ರ ಪ್ರಸಾದಕ್ಕ ಅವಕಾಶ,

**ಗುಂಪು :** ಕಾಳಾಮುಖ ಶೈವರೂ, ಶುದ್ಧ ಶೈವರೂ ಆದ ನಾವೂ ಜಂಗಮರೇ.

**ಘಟ್ಟಿವಾಳಯ್ಯ :** ಅಲ್ಲ, ನೀವು ಸ್ಥಾವರವ್ಯಕ್ತಿಗಳು. ಜಂಗಮವ್ಯಕ್ತಿಗಳಲ್ಲ.



**ಒಬ್ಬ :** ನಾನು ಜಂಗಮವ್ಯಕ್ತಿ ಅಲ್ಲ? ನಾನು ಕ್ರಿಯಾಶಕ್ತಿಗಳ ಮಗ ನೀಲಕಂಠಜೀಯ ಇದೀನಿ.

**ಇನ್ನೊಬ್ಬ :** ನಾನು ಬ್ರಹ್ಮೇಶ್ವರ ಮಠದ ಶಿವಾಚಾರ್ಯ ಸೋಮದೇವ ಇದೀನಿ.

**ಮತ್ತೊಬ್ಬ :** ನಾನು ಶ್ರೀ ವಿರೂಪಾಕ್ಷೇಶ್ವರ ಮೂಲಸ್ಥಾನದ ಅರ್ಚಕರ ಮಗ ಮಹಾದೇವಸ್ವಾಮಿ ಇದೀನಿ.

**ಘಟ್ಟಿವಾಳಯ್ಯ :** ಅಯ್ಯಾ, ಸಿಟ್ಟಿಗೆಬ್ಬಿಸಬ್ಯಾಡ್ರಿ ಹೋಗರಿ, ನೀವು ಜಂಗಮರಲ್ಲ.

**ಒಬ್ಬ :** ನಾವಲ್ಲದ ಮತ್ಯಾರು ಜಂಗಮರು? (ನುಗ್ಗುತ್ತಾರೆ).

**ಘಟ್ಟಿವಾಳಯ್ಯ :** (ತಡೆದು) ಅಲ್ಲ, ನಿಮ್ಮ ಭಾವನೆ ಜಂಗಮ ಆಗಿಲ್ಲ.

**ಇನ್ನೊಬ್ಬ :** ಈಗ ಒಳಗ ಹ್ವಾದ ಹೆಳವ ಹೂವಯ್ಯ ಜಂಗಮನೇ ? ರೋಗಿಗಳೂ, ಕುರುಡರೂ, ಕುಂಟರೂ - ಈ ಅಂಗಹೀನರೆಲ್ಲ ಅಶುಭ. ಸಮಾಜಕ್ಕ ಭಾರ. ಇಂಥವರೆಲ್ಲ ಹ್ಯಾಂಗ ಜಂಗಮರು ?

**ಘಟ್ಟಿವಾಳಯ್ಯ :** ನಾಲಿಗಿ ಸರಿಯಾಗಿ ಬಳಸ್ರಿ.

> ಹಾಲ ಕಂದಲು, ತುಪ್ಪದ ಮಡಕೆಯ ಬೋಡು ಮುಕ್ಕಿನಬೇಡ.
> ಹಾಲು ಸಿಹಿ, ತುಪ್ಪ ಕಮ್ಮನೆ: ಲಿಂಗಕ್ಕೆ ಬೋನ.
> ಕೂಡಲಸಂಗನ ಶರಣರ ಅಂಗಹೀನರೆಂದೆಡೆ ನಾಯಕ ನರಕ.

ಇದು ನಮ್ಮ ಬಸವಣ್ಣನ ನೀತಿ-ನಿಲುವು. ಇವರ ದೇಹ ಊನವಾಗಿರಬಹುದು; ಭಾವ ಜಂಗಮ ಆಗ್ಯಾದ.

**ಒಬ್ಬ :** ಒಳಗೆ ಹೊರಟಿರುವ ಈ ಮಾದರ ಧೂಳ, ಆ ಬಡಿಗರ ಬಸವ ಇವರ ಭಾವನೆ ಜಂಗಮವೇ ?

**ಘಟ್ಟಿವಾಳಯ್ಯ :** ಹೌದು. ಇವರು ಕಾಯದಲ್ಲಿ ಜಂಗಮರು. ಪ್ರಾಣದಲ್ಲಿ ಜಂಗಮರು, ಭಾವದಲ್ಲಿ ಜಂಗಮರು.

**ಒಬ್ಬ :** ಅಲ್ಲ, ಅವರು ದುಡಿಯುವ ಕೆಳವರ್ಗದ ಜನ.

**ಘಟ್ಟಿವಾಳಯ್ಯ :** ಹೋಗಯ್ಯಾ, ಅಲ್ಲಿ ಸಾಮೂಹಿಕವಾಗಿ ದುಡೀತಾರ, ಇಲ್ಲಿ ಸಾಮೂಹಿಕವಾಗಿ ಉಣ್ತಾರ, ನಿಮ್ಮ ಹಾಂಗ ದುಡಿಯದೇ ಉಣ್ಣೂದಿಲ್ಲ.

**ಇನ್ನೊಬ್ಬ :** ನಾವು ದುಡಿಯಬೇಕೆಂದೇನಿಲ್ಲ. ಯಾರ ಮನ್ಯಾಗಾದರೂ ಊಟ ಮಾಡೂ ಅಧಿಕಾರ ಮಾಹೇಶ್ವರರ ಮಕ್ಕಳಾದ ನಮಗದ.

**ಘಟ್ಟಿವಾಳಯ್ಯ :** ನೀವು ಜಂಗಮರೇ ಅಲ್ಲ ಅಂತ ಹೇಳುವಾಗ ಮತ್ಯಾಕ ವಾದಿಸ್ತೀರಿ?

**ಇನ್ನೊಬ್ಬ :** ನಾವೂ ಇತ್ತೀಚೆ ಲಿಂಗಾಯ್ತರು ಆಗೀವಿ. ನಮಗ ಎದಿ ಮ್ಯಾಲ ಲಿಂಗ ಅದ ನೋಡು, ನಿನಗೆ ಮತ್ತೇನು ಸಾಕ್ಷಿಬೇಕು ? (ಕೆಂಪುವಸ್ತ್ರದಲ್ಲಿ ಕಟ್ಟಿಕೊಂಡ ಎದೆಯ ಮೇಲಿನ ಲಿಂಗ ತೋರಿಸುತ್ತಾರೆ).

**ಘಟ್ಟಿವಾಳಯ್ಯ :** ಅಯ್ಯೋ ಅಜ್ಞಾನವೇ, ವಸ್ತ್ರದಾಗ ಲಿಂಗ ಕಟಗೊಂಡ ಮಾತ್ರಕ್ಕ ಜಂಗಮರೇ? (ಎನ್ನುತ್ತ ಬೀದಿಯಲ್ಲಿ ಬಿದ್ದ ಕಲ್ಲನ್ನು ಹೆಗಲ ಮೇಲಿನ ವಸ್ತ್ರದಲ್ಲಿ ಬಂಧಿಸಿ, ಕೊರಳಿಗೆ ಕಟ್ಟಿಕೊಳ್ಳುತ್ತ) ನೋಡ್ರಿ. ನೋಡ್ರಿ. ನನ್ನ ಕೊರಳ ಈ ಕಲ್ಲು, ನಿಮ್ಮ ಕೊರಳ ಆ ಲಿಂಗ, ಎರಡೂ ಸಮ.

**ಗುಂಪು :** ಮೂರ್ಖಾ,ನಮ್ಮ ಕೊರಳ ದೇವರನ್ನು ಕಲ್ಲ ಅಂತ ನಿಂದಿಸ್ತೀಯಾ ? (ಒಳಗೆ ನುಗ್ಗುತ್ತಾರೆ).

**ಘಟ್ಟಿವಾಳಯ್ಯ :** ಮಾಹೇಶ್ವರರು ಅನ್ನೂ ಅಧಿಕಾರದಿಂದ ಅಶನಕ್ಕಾಗಿ ಕಂಡವರ ಮನಿಗಿ ನುಗ್ಗುವ ನಿಮ್ಮನ್ನು ಈ ಮಹಾಮನಿ ನುಗ್ಗಲು ನಾನು ಬಿಡೂದೇ ಇಲ್ಲ. ಪದಾರ್ಥವಾದಿಗಳಿಗೆ ಪ್ರಸಾದ ಸೇವಿಸೂ ಅಧಿಕಾರವಿಲ್ಲ. (ನೂಕುತ್ತಾನೆ. ಗುಂಪು ಕಲ್ಲು ತೂರುತ್ತದೆ, ಬಳಿಕ ಬಡಿಗೆಯಿಂದ ಏಟಿನ ಮೇಲೆ ಏಟು ಹಾಕುತ್ತಾರೆ. ಘಟ್ಟಿವಾಳಯ್ಯ ಪ್ರಜ್ಞೆತಪ್ಪಿ ಬೀಳುತ್ತಾನೆ. ಎಲ್ಲರೂ ಓಡಿ ಹೋಗುತ್ತಾರೆ).

## ದೃಶ್ಯ - ೨೫

(ಅಶ್ವಾರೋಹಿ ಬಸವೇಶ್ವರ ಆಸ್ಥಾನಕ್ಕೆ ಹೊರಟಿದ್ದಾನೆ. ಸುತ್ತ ಪರಿಮಿತ ಪರಿವಾರ. ಎದುರು ಕಹಳೆ ಹಲಗೆಗಳ ಅಬ್ಬರ. ಇಬ್ಬರು ಸ್ತ್ರೀಯರು ಹೊಸ ಸೀರೆಯುಟ್ಟು, ದಂಡಿ-ಕುಂಕುಮ ಧರಿಸಿ, ಬಲಗೈಯಿಂದ ಲಿಂಬೆ ಹಣ್ಣು ತೂರುತ್ತ, ಎಡಗೈಯಲ್ಲಿ ಕನ್ನಡಿ ಹಿಡಿದು ಕುಣಿಯುತ್ತ ಬರುತ್ತಲಿದ್ದಾರೆ. ಹಿಂದೆ ಸುಮಂಗಲಿಯರು ಹಾಡುತ್ತಲಿದ್ದಾರೆ. ಒಬ್ಬಳ ಬಗಲಲ್ಲಿ ಕೂಸುಯಿದೆ. "ಮಾರಸಿಂಗ ದಂಡನಾಯಕರಿಗೆ ವೀರಸ್ವರ್ಗ ಲಭಿಸಲಿ"; "ವೇಳೆವಾಳಿ ಶಂಕಪಯ್ಯನಿಗೆ ವೀರಸ್ವರ್ಗ ಲಭಿಸಲಿ" ಎಂದು ಘೋಷಿಸುತ್ತ ನಡೆದಿದ್ದಾರೆ).

**ಬಸವಣ್ಣ :** ಏನದು ಗದ್ದಲ ?

**ಅಧಿಕಾರಿ :** (ಹೋಗಿ ಮರಳಿ ಬಂದು) ನಿನ್ನೆ ಮಾರಸಿಂಗ ದಂಡನಾಯಕರು ಯುದ್ಧದಾಗ ವೀರಸ್ವರ್ಗ ಏರಿದರು. ಅವರ ವೇಳೆವಾಳಿ ವ್ಯಕ್ತಿ ಶಂಕಪಯ್ಯ ಇದೀಗ ರುಂಡ ಕತ್ತರಿಸಿಕೊಂಡು ವೀರಸ್ವರ್ಗ ಏರಿದ. ಈಗ ಅವನ ಇಬ್ಬರೂ ಹೆಂಡಿರು ಸಹಗಮನಕ್ಕಾಗಿ ಉತ್ಸವದೊಂದಿಗೆ ಹೊಂಟಾರ.

**ಬಸವಣ್ಣ :** ಅಯ್ಯೋ ಕ್ರೂರ ಆಚರಣೆಯೆ ? (ಎಂದವನೇ ಕುದುರೆಯಿಂದ ಇಳಿದು, ಜನರ ಮಧ್ಯೆ ಧುಮುಕುತ್ತಾನೆ).



**ಅಧಿಕಾರಿ :** ಪ್ರಭೂ, ಇದು ಕ್ರೂರ ಆಚರಣೆ ಅಲ್ಲ. ಪರಂಪರಾಗತವಾಗಿ ನಡೆದುಬಂದ ಪುಣ್ಯ ಆಚರಣೆ. ಒಡೆಯ ಜೀವಂತವಾಗಿರುವಾಗ ಅವನಿಗಿ ಸುಖಸಂತೋಷ ಒದಗಿ ಬರಲೆಂದೋ, ಸತ್ತಾಗ ಅವನು ಸ್ವರ್ಗ ಸೇರಲೆಂದೋ ಜೀವತ್ಯಾಗ ಮಾಡಿಕೊಳ್ಳೂದು ವೇಳೆವಾಳಿ ವ್ಯಕ್ತಿಯ ಕರ್ತವ್ಯ. ಹಾಗೇ ಗಂಡ ಸತ್ತಾಗ ಚಿತೆ ಏರೂದು ಹೆಂಡಂದಿರ ಕರ್ತವ್ಯ.

**ಬಸವಣ್ಣ :** ಯಾರು ಹೇಳಿದರು ? ಈ ವೇಳೆವಾಳಿ ಮರಣ, ಮಾಸ್ತಿಮರಣಗಳು ಪುಣ್ಯ ಆಚರಣೆ ಅಂತ ?

**ಅಧಿಕಾರಿ :** ಪ್ರಭೂ, ಪುರಾಣಕಾಲದಿಂದ ನಡೆದು ಬಂದ ವೈದಿಕ ಸಂಪ್ರದಾಯಗಳಿವು. ಸಾಮಾಜಿಕ ಮೌಲ್ಯಗಳಿವು.

**ಬಸವಣ್ಣ ;** ಮೌಲ್ಯವಲ್ಲ. ಮೌಲ್ಯದ ಸೋಗುಹಾಕಿದ ಶೋಷಣೆಗಳಿವು. ರಾಜವರ್ಗದಿಂದ ಪ್ರಜೆಗಳ ಶೋಷಣೆ, ಪುರುಷವರ್ಗದಿಂದ ಸ್ತ್ರೀಯರ ಶೋಷಣೆ. (ಎಂದವನೇ, ಬಸವಣ್ಣ ಸ್ತ್ರೀಯರ ಹತ್ತಿರ ಹೋಗುತ್ತಾನೆ). ತಾಯಿಗಳಿರಾ, "ಕೂಡಲಸಂಗಯ್ಯನನೊಲಿಸಲು ಬಂದ ಪ್ರಸಾದಕಾಯವ ಕೆಡಿಸಲಾಗದು." ನಿಮ್ಮ ಪತಿ ಒಡೆಯನಿಗಾಗಿ ರುಂಡ ಕತ್ತರಿಸಿಕೊಂಡುದು ಅಮಾನುಷ ಆಚರಣೆ. ಅವನ ಸಲುವಾಗಿ ನೀವು ಬೆಂಕಿಯಲ್ಲಿ ಬಿದ್ದು ಸಾಯೂದು ಇನ್ನೊಂದು ಅಮಾನುಷ ಆಚರಣೆ. ಸ್ವರ್ಗ, ಸ್ವರ್ಗಪ್ರವೇಶ ಮೊದಲಾದವು ಹುಸಿಕಲ್ಪನೆ, ಭ್ರಮೆ. (ಕೂಸನ್ನು ಎತ್ತಿಕೊಂಡು) ಈ ಕಂದಮ್ಮನಿಗಾದರೂ ನೀವು ಉಳೀಬೇಕು.

**ಜನರು :** ಪ್ರಭೂ. ಈಗಾಗಲೇ ಸತಿ ಹೋಗೂದರ ಸಲುವಾಗಿ ಗಾವುಂಡರಿಂದ ದಂಡೆ ಕುಪ್ಪಸ ಪಡೆದೀವಿ. ಒಪ್ಪಿಗಿ ಲಭಿಸ್ಯಾದ.

**ಬಸವಣ್ಣ :** ರಾಜ್ಯದ ಸಚಿವನಾಗಿ ಈ ಒಪ್ಪಿಗಿ ನಾನು ನಿರಾಕರಿಸತೀನಿ.

**ಜನರು :** ಪ್ರಭು, ಇದನ್ನು ಬಿಡಲು ಹ್ಯಾಂಗ ಸಾಧ್ಯ ?

**ಬಸವಣ್ಣ :** ವಾದಿಸಬ್ಯಾಡ್ರಿ. ಈ ಆಚರಣೆಗೆ ನನ್ನ ಒಪ್ಪಿಗೆ ಇಲ್ಲ. ಇನ್ನು ಮುಂದಿನ ಇಂಥ ವೇಳೆವಾಳಿ ಮತ್ತು ಮಾಸ್ತಿ ಆಚರಣೆಗಳಿಗೆ ಈ ರಾಜ್ಯದಲ್ಲಿ ನಿಷೇಧ ಅದ. ನಡೀರಿ. (ಮಾಸ್ತಿ ನಿಲ್ಲುತ್ತದೆ. ಎಲ್ಲರೂ ಮನೆಗೆ ಹಿಂದಿರುಗುತ್ತಾರೆ).

**ಅಧಿಕಾರಿ :** ಪ್ರಭೂ, ಇಂಥ ಆದೇಶಗಳು ಯೋಗ್ಯವೇ ? ಈಗ ಗಂಡ ಸತ್ತ ಹೆಂಡತಿ ಏನ ಮಾಡಬೇಕು?

**ಬಸವಣ್ಣ :** ಹೆಂಡತಿ ಸತ್ತರ ಗಂಡ ಏನ ಮಾಡತಾನ ?

**ಅಧಿಕಾರಿ :** ಮದುವೆಯಾಗತಾನ.

**ಬಸವಣ್ಣ :** ಹಾಗಿದ್ದರ, ಗಂಡ ಸತ್ತ ಹೆಂಡತಿಯೂ ಮತ್ತೆ ಮದುವೆಯಾಗಬಹುದು ಅಷ್ಟೇ.

**ಅಧಿಕಾರಿ :** ರುಂಡ ಕತ್ತರಿಸಿಕೊಂಡ ಈ ವೇಳೆವಾಳಿ ಪದ್ಧತಿಯೂ ತ್ಯಾಜ್ಯವೇ?

**ಬಸವಣ್ಣ :** ಖಂಡಿತವಾಗಿಯೂ ತ್ಯಾಜ್ಯ.

**ಅಧಿಕಾರಿ :** ಅಂಗದ ಮೇಲಿನ ಸ್ಥಾವರ ಲಿಂಗ ಜಾರಿಬಿದ್ದರ ಶೈವರು ಲಿಂಗದ ವೇಳೆವಾಳಿ ಅಂತ ಪ್ರಾಣಘಾತ ಮಾಡಿಕೊಳ್ಳೂದಿಲ್ಲವೇ ? ಅಲ್ಲಿ ಲಿಂಗನಿಷ್ಠೆ ಅದ, ಇಲ್ಲಿ ರಾಜನಿಷ್ಠೆ ಅದ, ಅಷ್ಟೇ.

**ಬಸವಣ್ಣ ;** ಇಂಥ ಲಿಂಗನಿಷ್ಠೆ, ಇಂಥ ರಾಜನಿಷ್ಠೆ ನನಗ ಸಮ್ಮತ ಇಲ್ಲ. ಲಿಂಗಕ್ಕಾಗಿ ಭಕ್ತ ಪ್ರಾಣತ್ಯಾಗ ಮಾಡಿಕೊಳ್ಳೂದು ಶಿವಭಕ್ತಿಯ ಭ್ರಮೆ. ರಾಜನಿಗಾಗಿ ಪ್ರಜೆ ಪ್ರಾಣತ್ಯಾಗ ಮಾಡಿಕೊಳ್ಳೂದು ರಾಜಭಕ್ತಿಯ ಭ್ರಮೆ. ನಿಜ ಹೇಳಬೇಕಂದರ ರಾಜನಿಗಿಂತ ಶ್ರೇಷ್ಠನಾದವನು ಪ್ರಜೆ. ಅವನೇ ರಾಜ್ಯದ ಮೂಲ ಸದಸ್ಯ. ಮೂಲ ಸಂಪತ್ತು. ಆದುದರಿಂದ ರಾಜನಿಗಿ ಪ್ರಜೆ ವೇಳೆವಾಳಿಯಾಗಬಾರದು, ಪ್ರಜೆಗಳಿಗಿ ರಾಜನೇ ವೇಳೆವಾಳಿಯಾಗಬೇಕು.

**ಅಧಿಕಾರಿ :** ಅಂದರ ಪ್ರಜೆಗಳಿಗಾಗಿ ರಾಜನು ಪ್ರಾಣತ್ಯಾಗ ಮಾಡಿಕೊಳ್ಳಬೇಕೆ ?

**ಬಸವಣ್ಣ :** ಅಲ್ಲ, ಪ್ರಜೆಗಳಿಗಾಗಿ ರಾಜ ಪ್ರಾಣತ್ಯಾಗ ಮಾಡಿಕೊಳ್ಳಬಾರದು; ಪ್ರಾಣದಂತೆ ಅವರನ್ನು ಪ್ರೀತಿಸಬೇಕು. ಪ್ರಜೆಗಳೊಂದಿಗೆ ವೇಳೆವಾಳಿ ಭಾವಸಂಬಂಧ ಇಟ್ಟುಕೋಬೇಕು. ಇಂದಿನಿಂದ ನಾನು 'ರಾಜವೇಳೆವಾಳಿ' ಎಂಬ ವೈದಿಕ ಮೌಲ್ಯ ಧಿಕ್ಕರಿಸಿ, ಪ್ರಜೆಗಳೇ ನನ್ನ ಪ್ರಾಣ ಅಂತ ಭಾವಿಸುವ 'ಪ್ರಜಾವೇಳೆವಾಳಿ' ಪ್ರತಿಜ್ಞಾಬದ್ಧನಾಗತೀನಿ. (ಕೈ ಎತ್ತುತ್ತಾನೆ. ಅಷ್ಟರಲ್ಲಿ ಹೊಲೆಯರ ಬಾಲಕನೊಬ್ಬ ಬೆನ್ನಿಗೆ ಕಟ್ಟಿದ ಮುಳ್ಳು ರೆಂಬೆ ಎಳೆಯುತ್ತ, ಕೊರಳಲ್ಲಿ ಉಗುಳುಗಡಿಗೆ ಕಟ್ಟಿಕೊಂಡು ಊರಲ್ಲಿ ಬರುತ್ತಿದ್ದಾನೆ).

**ಹೊಲೆಯ :** ಸಂಬೋಳಿ, ಸಂಬೋಳಿ, ಸಂಬೋಳಿ. (ಜನ 'ಹೊಲೆಯ ಬಂದ, ಹೊಲೆಯ ಬಂದ, ದೂರ ಸರೀರಿ' ಎನ್ನುತ್ತಾ ಓಡುತ್ತಾರೆ. ಬಾಗಿಲ ಮುಚ್ಚಿಕೊಳ್ಳುತ್ತಾರೆ. ಬಸವಣ್ಣ ಬಾಲಕನ ಹತ್ತಿರ ಬಂದು)

**ಬಸವಣ್ಣ :** ಮಗು ನಿಲ್ಲು.

**ಅಧಿಕಾರಿ :** ಪ್ರಭೂ. ಅವನು ಹೊಲೆಯ. ಮಾತಾಡಿಸಬ್ಯಾಡ್ರಿ.

**ಬಸವಣ್ಣ :** ಸುಮ್ಮನಿರಿ, ಏನು ಮಗು ? ಎಲ್ಲಿಗಿ ಹೊಂಟಿರುವಿ ?

**ಹೊಲೆಯ :** ಗಾವುಂಡರ ಮನೆಯ ಬಚ್ಚಲ ಹಸನುಮಾಡಲು ಹೊಂಟೇನಿ (ಎಂದವನೇ "ಸಂಬೋಳಿ, ಸಂಬೋಳಿ" ಎನ್ನುತ್ತಾ ಹೊರಡುತ್ತಾನೆ).

**ಬಸವಣ್ಣ :** (ಕೈ ಹಿಡಿದು ನಿಲ್ಲಿಸಿ) ಹೋಗಬೇಡ ನಿಲ್ಲು. ಮೊದಲು ಈ ಮುಳ್ಳುರೆಂಬೆ ಬಿಚ್ಚು. (ಕೈಮುಟ್ಟಿ ಬಿಚ್ಚುತ್ತ) ಅನಾಗರಿಕ, ಅಮಾನವೀಯ. ನಿಮ್ಮ ಕೇರಿಗಿ ನಡಿ (ಹೊರಡುತ್ತಾರೆ).



# ದೃಶ್ಯ -೨೬

(ಹೊಲಗೇರಿ ಸಮೀಪಿಸುತ್ತಸಲೇ ಒಂದು ಬಾವಿ. ಅದರ ಬಳಿಯಲ್ಲಿ ಒಂದು ಎಲುಬಿನ ಹಂದರವನ್ನು ನೇತು ಬಿಡಲಾಗಿದೆ.)

**ಬಸವಣ್ಣ :** (ಅಧಿಕಾರಿಗೆ) ತಗಿಸಿರಿ ಇದನ್ನು.

**ಅಧಿಕಾರಿ :** ಪ್ರಭೂ, ತಗದರ ಇದು ಹೊಲೇರ ಬಾವಿ ಅಂತ ಉತ್ತಮರಿಗಿ ಹ್ಯಾಂಗ ಗೊತ್ತಾಗಬೇಕು?

**ಬಸವಣ್ಣ :** ಯಾಕ ಗೊತ್ತಾಗಬೇಕು ? ತಗದು ಹಾಕಿರಿ. (ಎಲುವಿನ ಹಂದರ ತೆಗೆಯಲಾಗುತ್ತದೆ, ಹೊಲಗೇರಿ ಪ್ರವೇಶಿಸುತ್ತಾನೆ. ಕೇರಿಯಲ್ಲಿ ನಾಲ್ಕಾರು ಜನ ಗಂಡು-ಹೆಣ್ಣು ಬಾಲ-ವೃದ್ಧರು ಬೆನ್ನಿಗೆ ಮುಳ್ಳು ರೆಂಬೆ ಕಟ್ಟಿಕೊಂಡು ಊರ ಪ್ರವೇಶಕ್ಕೆ ಸಿದ್ಧರಾಗಿದ್ದಾರೆ. ಬಸವಣ್ಣನನ್ನು ನೋಡಿ 'ನಮಸ್ಕಾರ ಪ್ರಭೂ' ಎನ್ನುತ್ತಾರೆ. ಬಸವಣ್ಣ ಪ್ರತಿ ನಮಸ್ಕಾರ ಹೇಳುತ್ತಾನೆ).

**ಬಸವಣ್ಣ :** ಅಯ್ಯೋ, ಈ ಅಮಾನವೀಯ ಜೀವನ ಇನ್ನೂ ಎಷ್ಟು ದಿನ ?

**ವೃದ್ಧ :** ದೇವಾ, ಅನಾದಿಕಾಲದಿಂದ ಬಂದದ್ದು, ಕಾಲಕಾಲಕ್ಕ ನಡೀಬೇಕಾದದ್ದು.

**ಬಸವಣ್ಣ :** (ಸಮೂಹವನ್ನು ಕುರಿತು) ನೀವು ಮನುಷ್ಯರು ಅನ್ನೂದನ್ನು ಜನರೂ ಮರತಾರ, ನೀವೂ ಮರತೀರಿ. ಬಿಚ್ಚಿರಿ ಇದನ್ನು (ಬಿಚ್ಚಲಾಗುತ್ತದೆ. ಅಷ್ಟರಲ್ಲಿ

"ಹೊಲೆಯರ ಬಾವಿಯಲೊಂದು ಎಲು ನೆಟ್ಟಿದ್ದರೆ
ಹೊಲೆ ಹೊಲೆ ಎಂಬುದೀ ಲೋಕವೆಲ್ಲ.
ಹಲುವೆಲುವಿದ್ದ ಬಾಯಿಯಿಂದ ಒಲವರವ ನುಡಿದರೆ
ಹೊಲೆಯರ ಬಾವಿಗಿಂದ ಕರಕಷ್ಟ ಕಾಣಾ ರಾಮನಾಥಾ"

ಎಂಬ ವಚನ ಕೇಳಿಸುತ್ತದೆ).

**ಬಸವಣ್ಣ :** ಮಹಾಶರಣ ಜೇಡರ ದಾಸಿಮಯ್ಯನವರ ವಚನ ! ಯಾರ ಧ್ವನಿ ?

**ವೃದ್ಧ :** ಸಂಬೋಳಿ ನಾಗಿಮಯ್ಯನ ಧ್ವನಿ. ಇದೇ ಅವನ ಮನೆ (ಅಷ್ಟರಲ್ಲಿ ನಾಗಿಮಯ್ಯ ಹೊರಗೆ ಬರುತ್ತಾನೆ).

**ಬಸವಣ್ಣ :** ಶರಣಾರ್ಥಿ (ಪಾದಮುಟ್ಟಿ ನಮಸ್ಕರಿಸುತ್ತಾನೆ).

**ನಾಗಿಮಯ್ಯ :** ದೇವಾ, ಬೇಡ. ನೀವು ಯಾರು, ನಾನು ಯಾರು! ಸಸಿಃ ಮ್ಯಾಲ ಸಾಗರ ಹರಿಃಬಾರದು.

**ಬಸವಣ್ಣ :** ಅದನ್ನs ನಾನೂ ಹೇಳೊದು. ನೀವು ಯಾರು, ನಾನು ಯಾರು ! ನೀನು ನಾಗಿಮಯ್ಯನಲ್ಲ, ಶಿವನಾಗಿಮಯ್ಯ. ಮೋಡ ಕವಿದ ಸೂರ್ಯನ ಹಾಂಗಿರುವ ನಿನ್ನನ್ನು ನಿನ್ನ ಸಮಾಜವನ್ನು ಮುಟ್ಟದೆ ದೂರ ಇಟ್ಟಿರುವ ಸಾಮಾಜಿಕ ಅಪರಾಧಕ್ಕಾಗಿ ನಾನು ಜನತೆಯ ಪರವಾಗಿ ಕ್ಷಮಾ ಕೇಳತೀನಿ.

**ನಾಗಿಮಯ್ಯ :** ಇರಲಿ ಬಿಡಿ ದೇವಾ, ಶತಶತಮಾನಗಳಿಂದ ಇದು ಬೆಳೆದು ಬಂದದ, ಬೆಳೀತಾ ಹೋಗತದ.

**ಬಸವಣ್ಣ :** ನಾನು ಬೆಳೀಗೊಡೂದಿಲ್ಲ. "ನೆಲನೊಂದೇ ಹೊಲಗೇರಿ -ಶಿವಾಲಯಕ್ಕೆ, ಜಲವೊಂದೇ ಶೌಚ-ಆಚಮನಕ್ಕೆ, ಕುಲವೊಂದೇ ತನ್ನ ತಾನರಿದವಂಗೆ.... "ಇದು ನನ್ನ ನಿಲುವು. ಹುಟ್ಟುತ್ತ ಯಾವನೂ ಹೊಲೆಯ ಅಲ್ಲ, ಯಾವನೂ ಹಾರುವ ಅಲ್ಲ. ಹೀಗಿದ್ದೂ ಮನುಷ್ಯರಲ್ಲಿ ಈ ಭೇದಕಲ್ಪನೆ ಹುಟ್ಟಿಸಿದವನೇ ಹೊಲೆಯ.

**ವೃದ್ಧ ;** ಹಾಗಾದರ ಈ ಜಾತಿ ಯಾಕ ಹುಟ್ಟಿಸಿದ್ರು?

**ಬಸವಣ್ಣ :** ಸ್ವಾರ್ಥಕ್ಕ. "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ". ಇವೆಲ್ಲ ಶ್ರಮದ ವಿವಿಧ ರೀತಿಗಳು. ಹೀಗಿರುವಾಗ ಬೌದ್ಧಿಕ ಶ್ರಮದವನು ಶ್ರೇಷ್ಠ, ದೈಹಿಕ ಶ್ರಮದವನು ಕನಿಷ್ಠ ಹ್ಯಾಂಗ ? ಈ ಜಾತಿಯೆಂಬ ಕೆಟ್ಟ ಸಂಪ್ರದಾಯ ನಾಶಮಾಡಬೇಕಾಗ್ಯಾದ.

**ನಾಗಿಮಯ್ಯ :** ಪ್ರಭೂ, ನೀವು ಹೇಳೊದು ನಿಜ. ಆದರ ಜಾತಿಭೇದ ವ್ಯವಸ್ಥೆಯ ನಾಶಕ್ಕ ಕೈಹಾಕಿದವ್ರು ನಾಶ ಆಗಬೇಕಾಗ್ತದ.

**ಬಸವಣ್ಣ :** ಅದೆಲ್ಲ ನನಗ ಗೊತ್ತು. ಅದಕ್ಕೂ ನಾನು ಸಿದ್ಧ. 'ವಿಪ್ರ ಮೊದಲು, ಅಂತ್ಯಜ ಕಡೆಯಾಗಿ ಶಿವಭಕ್ತರನು ಒಂದೇ ಎಂಬೆ" ಎಂಬ ನಿಲುವು ನನ್ನದು. ಧರ್ಮದ ಹೆಸರಿನ್ಯಾಗ ತಲೆಯೆತ್ತಿರುವ ಈ ಅನ್ಯಾಯ ಸರಿಪಡಿಸ್ತೀನಿ.

**ನಾಗಿಮಯ್ಯ :** ದೇವಾ, ಈ ಕೆಲಸಕ್ಕ ಕೈ ಹಾಕುವಾಗ ಇನ್ನೊಮ್ಮೆ ವಿಚಾರ ಮಾಡ್ರಿ. ಮಿಕ್ಕ ಮಹಾತ್ಮರ ಹಾಂಗ ಆತ್ಮಕಲ್ಯಾಣದ ಮಟ್ಟಿಗೆ ನಿಮ್ಮ ಧರ್ಮತತ್ವ ಸೀಮಿತವಾಗಿರೂದೇ ಸುರಕ್ಷಿತ. ಸಮಾಜಕಲ್ಯಾಣಕ್ಕ ಕೈಹಾಕಿದರ, ಸಮಾಜದ ವೈರ ಕಟ್ಟಿಕೊಳ್ಳಬೇಕಾಗ್ತದ.

**ಬಸವಣ್ಣ :** ನನಗ ಇದೆಲ್ಲ ಗೊತ್ತು. **ನಮ್ಮ ಪ್ರಾಚೀನ ಸಿದ್ಧಾಂತಗಳು ಆತ್ಮಕಲ್ಯಾಣ ಪ್ರತಿಪಾದಿಸಿ, ಸಮಾಜಕಲ್ಯಾಣ ಉಪೇಕ್ಷಿಸಿದವು. ಇದರಿಂದ ನಾವು ವೈಯಕ್ತಿಕವಾಗಿ ಸಬಲರು, ಸಾಮಾಜಿಕವಾಗಿ ದುರ್ಬಲರಾದೆವು.** ಈಗ ಆ ತಪ್ಪ ತಿದ್ದಿಕೊಳ್ಳುವ ರೀತಿಯಲ್ಲಿ ಸಮಾಜಕಲ್ಯಾಣವೂ ನಮ್ಮ ಗುರಿಯಾಗಬೇಕು.



**ನಾಗಿಮಯ್ಯ :** ಅಷ್ಟು ದೂರ ಹೋಗಬ್ಯಾಡ್ರಿ ಪ್ರಭೂ. ನಿಮ್ಮ ಕಾಯಕತತ್ವದ ಆಚರಣೆಯಿಂದ ನಮ್ಮ ಕೇರಿ ಸುಧಾರಿಸ್ತ ನಡದದ. ಇಲ್ಲಿ ಲಿಂಗಪೂಜೆ, ಕಾಯಕನಿಷ್ಠೆ ಬೆಳೀತಾ ಇದೆ. ನಮ್ಮಿಂದ ದೂರವಿದ್ದೇ ಈ ಕೆಲಸ ಮಾಡ್ರಿ. ಸಮಾಜ ಮಿಶ್ರ ಮಾಡೂದರಿಂದ ದೊಡ್ಡ ಅಪಾಯ ಸಂಭವಿಸ್ತಾವ.

**ಬಸವಣ್ಣ :** ಅದೆಲ್ಲ ನನಗೆ ಕಾಣಿಸ್ತದ. ನಾನು ಲೆಕ್ಕಿಸಲಾರೆ. ಕಲ್ಯಾಣ ಪಟ್ಟಣದ ನಕ್ಷೆಯಿಂದ, ಕುಂತಳ ರಾಜ್ಯದ ನಕ್ಷೆಯಿಂದ ಹೊಲಗೇರಿ ಎಂಬ ರೇಖೆಯನ್ನು ಅಳಿಸಿಹಾಕಬೇಕಾಗ್ಯಾದ. ಅಂತ್ಯಜ - ಕುಲಜರೆಂಬ ಭೇದ ಅಳಿಯಬೇಕಾಗ್ಯಾದ (ಎಂದವನೇ ನಾಗಿಮಯ್ಯನನ್ನು ಅಪ್ಪಿಕೊಳ್ಳುತ್ತಾನೆ).

**ವೃದ್ಧ :** ದೇವಾ, ಎಲ್ಲ ಉತ್ತಮರೂ ನಿಮ್ಮ ಹಾಗೇ ನಡೆದುಕೋಬೇಕು. ನಮ್ಮೊಂದಿಗೆ ಬೆರೀಬೇಕು, ನಮ್ಮ ಮನ್ಯಾಗ ಊಟ ಮಾಡಬೇಕು.....

**ಬಸವಣ್ಣನವರು :** ಹೌದು, ಬೆರೀಬೇಕು, ಊಟಮಾಡಬೇಕು. ಹಾಗಿದ್ದರೆ ನಾಗಿಮಯ್ಯಾ, ನಿಮ್ಮ ಮನೆಯ ಪ್ರಸಾದ ಕೊಡು.

**ನಾಗಿಮಯ್ಯ :** ಬ್ಯಾಡ ದೇವಾ, ಅಷ್ಟು ದೂರ ಹೋಗಬ್ಯಾಡ್ರಿ.

**ಬಸವಣ್ಣ :** ನಿನ್ನ ಮನೆಯ ಪ್ರಸಾದದಿಂದ ನಾನು ಪವಿತ್ರ ಆಗಬೇಕಾಗ್ಯಾದ. ಬೇಗ ಕೊಡು; (ನಾಗಿಮಯ್ಯ ಒಳಗೆ ಹೋಗುತ್ತಾನೆ. ಹೆಂಡತಿ ಎರಡು ತಟ್ಟೆಗಳಲ್ಲಿ ರೊಟ್ಟಿ ತರುತ್ತಾಳೆ. ಬಸವಣ್ಣ ನಾಗಿಮಯ್ಯನ ಜೊತೆ ಜನಸಮ್ಮುಖದಲ್ಲಿಯೇ ಕುಳಿತು ಊಟಕ್ಕೆ ತೊಡಗುತ್ತಾನೆ).

**ನಾಗಿಮಯ್ಯ :** ದೇವಾ, ಇಂದು ನಾನು ಧನ್ಯನಾದೆನು.

**ಬಸವಣ್ಣ :** ಹಾಗೇನೂ ಇಲ್ಲ. ಶಿವನಾಗಿಮಯ್ಯಾ, ನಿನ್ನ ಮನೆಯ ಊಟವೇನು ? ನನ್ನ ಮನೆಯ ಊಟವೇನು? ಭಾವ ಮುಖ್ಯ. ಭಿನ್ನಭಾವದಿಂದ ಸ್ವೀಕರಿಸಿದರ ಎರಡೂ ಪದಾರ್ಥ; ಶಿವಭಾವದಿಂದ ಸ್ವೀಕರಿಸಿದರ ಎರಡೂ ಪ್ರಸಾದ. ನಾನು ಬೇರೆಯಲ್ಲ, ನೀನು ಬೇರೆಯಲ್ಲ, ಇಬ್ಬರೂ ಶರಣರು, ಶ್ರಮದಿಂದ ಗಳಿಸಿ ಸಿದ್ಧಮಾಡಿದ ಅಡಿಗಿ ಹಿರಿಯ ಪ್ರಸಾದ (ಶಿವ, ಶಿವಾ ಎನ್ನುತ್ತ ಊಟ ಮುಂದುವರಿಸುತ್ತಾರೆ).

## ದೃಶ್ಯ - ೨೭

(ಬಿಜ್ಜಳನ ಆಸ್ಥಾನ. 'ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ, ಕಾಳಾಂಜರ ಪುರವರಾಧೀಶ್ವರ, ಸುವರ್ಣ ವೃಷಭಧ್ವಜ ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ 'ಭೋ ಪರಾಕ್, ಭೋ ಪರಾಕ್' - ಬಿಜ್ಜಳ ಆಗಮಿಸಿ ಸಿಂಹಾಸನಾರೂಢನಾಗುತ್ತಾನೆ. ಕೇಶವಭಟ್ಟ, ನಾರಾಯಣಭಟ್ಟರ ಅವಸರದ ಪ್ರವೇಶ).

**ಕೇಶವ ಭಟ್ಟ :** ಪ್ರಭುಗಳಿಗೆ ಜಯವಾಗಲಿ. ಪ್ರಭೂ, ನಿಮ್ಮ ಮಂತ್ರಿ ಬಸವಣ್ಣನ ಚರಿತ್ರೆ ದಿನವೂ ವಿಪರೀತದಿಂದ ವಿಪರೀತಕ್ಕ ಬೆಳೀತಾ ಇದೆ. ಭಾಂಡಾರ ಹಾಳು ಮಾಡೂದು ಹೋಗಲಿ, ವರ್ಣವ್ಯವಸ್ಥೆಯನ್ನೂ ಹಾಳು ಮಾಡಲು ಆರಂಭಿಸ್ಯಾನ.

**ಬಿಜ್ಜಳ ;** ಈಗೇನಾಯಿತು?

**ಕೇಶವ ಭಟ್ಟ :** ಆಸ್ಥಾನಕ್ಕ ಬರುವಾಗ ಹೊಲಗೇರಿ ಪ್ರವೇಶ ಮಾಡಿದ. ಅಲ್ಲಿಗಿ ಹೋದವನs ಸಂಬೋಳಿ ನಾಗಿಮಯ್ಯನ ಮನ್ಯಾಗ ಊಟಮಾಡಿದ. ತಾವು ಈ ವರೆಗೆ ಕಾಪಾಡ್ತ ಬಂದ ವರ್ಣಧರ್ಮ ಮತ್ತ್ಯಾರೂ ಅಲ್ಲ, ನಿಮ್ಮ ಮಂತ್ರಿಯೇ ದಾಟೂದಂದರ ?

**ಬಿಜ್ಜಳ :** ಹೌದು, ಬಸವಣ್ಣ ಈವರೆಗೆ ನನ್ನ ಕೆಲವು ಗೆರೆ ದಾಟದ. ಇದನ್ನೂ ದಾಟುವಷ್ಟು ದೂರ ಹೋಗುವನೆಂದು ಭಾವಿಸಿರಲಿಲ್ಲ.

**ನಾರಣಭಟ್ಟ :** ಬ್ರಾಹ್ಮಣರದ ನಾವು ಇದನ್ನು ಸಹಿಸೂದಿಲ್ಲ. ನೀವು, ನಿಮ್ಮ ಬಸವಣ್ಣ ಈ ಕಲ್ಯಾಣದಾಗ, ಈ ರಾಜ್ಯದಾಗ ಸುಖವಾಗಿ ಇದ್ದುಬಿಡಿರಿ. ನಾವು ಈ ರಾಜ್ಯ ಬಿಟ್ಟು ಹೋಗತೀವಿ. (ಬ್ರಾಹ್ಮಣರು ಹೊರಡುತ್ತಾರೆ).

**ಬಿಜ್ಜಳ :** ತಡೀರಿ, ತಡೀರಿ. ನಿಮ್ಮ ಅಭಿಪ್ರಾಯ ಏನು ?

**ಕೇಶವ ಭಟ್ಟ :** ನ್ಯಾಯ ವಿಚಾರಣೆ ಆಗಬೇಕು. ವರ್ಣಸಂಕರ ಮಾಡಿದರ ಕಲ್ಯಾಣ ಕೆಟ್ಟೀತು, ಕೆಟ್ಟೀತು ಕಲ್ಯಾಣ.

**ಬಿಜ್ಜಳ :** (ಕಿವಿಮುಚ್ಚಿಕೊಳ್ಳುತ್ತ) ಇದನ್ನು ನುಡಿ ಬ್ಯಾಡರಿ, ನಾನು ಕಷ್ಟಪಟ್ಟು ಗೆದ್ದುಕೊಂಡ ಈ ಕಲ್ಯಾಣಕ್ಕೆ ಅಪಶಕುನ ನುಡಿ ಬ್ಯಾಡರಿ. ಯಾರಿಲ್ಲಿ?

**ಸೇವಕ :** (ಬರುತ್ತಾನೆ) ಪ್ರಭೂ

**ಬಿಜ್ಜಳ :** ಹೊಲಗೇರಿಗಿ ಹೋಗಿ ಬಸವಣ್ಣನ್ನ ಕರೆತನ್ನಿ. (ಸೇವಕ ಹೋಗುತ್ತಾನೆ).

**ಕೇಶವಭಟ್ಟ :** ಪ್ರಭೂ, ಹೊಲೆಯರ ಮನ್ಯಾಗ ಊಟಮಾಡಿ ಮೈಲಿಗಿ ಆಗಿರುವ ಬಸವಣ್ಣ ಒಳಗ ಬಂದರ ಆಸ್ಥಾನ ಮೈಲಿಗಿ ಆಗ್ತಾದ.

**ಬಿಜ್ಜಳ :** ಹೌದು, ಏನು ಮಾಡೂದು ?

**ನಾರಣಭಟ್ಟ :** ಸಿಂಹಾಸನ ಆಸ್ಥಾನದ ಹೊರಗ ಇಡಿಸ್ರಿ. ಬೀದ್ಯಾಗs ನ್ಯಾಯವಿಚಾರಣೆ ನಡೀಲಿ.

**ಬಿಜ್ಜಳ :** ಹೌದು, (ಬೀದಿಗೆ ಸಿಂಹಾಸನ ಎತ್ತಿ ತರುತ್ತಾರೆ. ಅಷ್ಟರಲ್ಲಿ ಬಸವಣ್ಣನೊಂದಿಗೆ ಹೊಲೆಯರೂ ಬರುತ್ತಾರೆ. ಬಿಜ್ಜಳ-ಪುರೋಹಿತರು ಒಂದು ಕಡೆ, ಬಸವಣ್ಣ-ಹೊಲೆಯರು ಇನ್ನಂದು ಕಡೆ).



**ಬಿಜ್ಜಳ :** ಬಸವಣ್ಣಾ, ಇದು ಎರಡನೆಯ ಸಲ ನಡೀತಿರುವ ವಿಚಾರಣೆ. ರಾಜಾಜ್ಞೆ ಮೀರಿದವ್ರು ಉಗ್ರಶಿಕ್ಷೆಗೆ ಒಳಗಾಗಬೇಕಾಗ್ತದ.

**ಬಸವಣ್ಣ :** ಯಾವ ತಪ್ಪಿಗಾಗಿ ಈ ನ್ಯಾಯ ವಿಚಾರಣೆ ? ನನಗೊಂದೂ ಅರ್ಥವಾಗ್ತಿಲ್ಲ.

**ಬಿಜ್ಜಳ :** ನಿಮ್ಮ ಚಲನವಲನ ನಮಗ ಗೊತ್ತು. ದೇವರು -ಪೂಜೆ ಇಷ್ಟರಮಟ್ಟಿಗೆ ನಿಮ್ಮ ಚಟುವಟಿಕಿ ಸೀಮಿತವಾದರ ನನ್ನ ಅಭ್ಯಂತರವೇನೂ ಇಲ್ಲ. ಆದರ ನೀವು ಭಂಡಾರದ ಮ್ಯಾಲಿನ ನನ್ನ ಅಧಿಕಾರನs ಪ್ರಶ್ನಿಸುವ ರೀತಿಯಲ್ಲಿ ವರ್ತಿಸ್ತ ಬಂದಿರಿ. ಈ ಬಗ್ಗೆ ಸೂಕ್ಷ್ಮ ಎಚ್ಚರಿಕೆ ನೀಡಿದರೂ ಪ್ರಯೋಜನ ಆಗಲಿಲ್ಲ. ಈ ಭಂಡಾರಕ್ಕ ನಾನು ಹಕ್ಕುದಾರ ಅಲ್ಲ. ಪ್ರಜೆಗಳು ಅಂತ ಅವರಲ್ಲಿ ತಿಳುವಳಿಕೆ ಬೆಳಸ್ತ ಇದ್ದೀರಿ.

**ಬಸವಣ್ಣ :** ಅದು ನಿಜವೇ ಆಗಿದೆ. ಪ್ರಜೆಗಳೇ ಪ್ರಭುಗಳು.

**ಬಿಜ್ಜಳ ;** ಬಾಯಿಮುಚ್ಚು. ಭಾಂಡಾರ ನನ್ನದು, ಚಕ್ರವರ್ತಿ ನಾನು.

**ಬಸವಣ್ಣ ;** ಹೌದು ಪ್ರಭೂ, ಚಕ್ರವರ್ತಿಗಳು ನೀವಾಗಿರಬಹುದು. ಈ ಭಂಡಾರ ಬೆಳೆದದ್ದು ಪ್ರಜೆಗಳಿಂದ, ಬೆಳೆಸಿದವ್ರು ಪ್ರಜೆಗಳು.

**ಬಿಜ್ಜಳ :** ಹೀಗೋ ನಿಮ್ಮ ಲೆಕ್ಕಾಚಾರ ? ಈಗಾಗಲೇ ನೀವು ಪ್ರಜೆಗಳ ಪ್ರೀತಿ ಗಳಿಸಲಿಕ್ಕ ಹೊರಟು, ಅವರಿಗಿ ಹಣ ವಿನಿಯೋಗಿಸಿದ ಆರೋಪ ನಿಮ್ಮ ಮ್ಯಾಲದ. (ಅಧಿಕಾರಿಗಳ ಪುರೋಹಿತರ ಕಡೆ ಬೆರಳು ಮಾಡಿ) ಇವರು ನಮ್ಮ ಪ್ರಜೆಗಳಲ್ಲ? ಇವರಿಗ್ಯಾಕ ನೀವು ವಿನಿಯೋಗಿಸೂದಿಲ್ಲ?

**ಬಸವಣ್ಣ :** ಪ್ರಭೂ, ನಿಮ್ಮದು ತಪ್ಪು ತಿಳುವಳಿಕೆ. ಅವರು ದುಡಿಯೂ ಜನ, ದಾಸೋಹದ ಜನ. ಅಂಥವರು ಮಾತ್ರ ನಮ್ಮ ಜನ.

**ಬಿಜ್ಜಳ :** ಅಂದರ ಅಂಥವರೆಲ್ಲ ನಿನ್ನ ಜನ. (ಈ ಕಡೆ ಬೆರಳು ಮಾಡಿ) ಇಂಥವರೆಲ್ಲ ನನ್ನ ಜನ ಅಂತ ನಿಮ್ಮ ಅರ್ಥs?

**ಬಸವಣ್ಣ :** ನಾನು ವಿವರಿಸಲಾರೆ, ನೀವೇ ವಿಚಾರ ಮಾಡಿಕೊಳ್ರಿ.

**ಬಿಜ್ಜಳ :** ವಿಚಾರ ಮಾಡಿಕೊಂಡೀನಿ. ಈ ಬಗ್ಗೆ ಸೂಕ್ತಕಾಲದಾಗ ನಿರ್ಣಯ ತೆಗೆದುಕೊಳ್ತೀನಿ. (ಮಾತಿನ ಧಾಟಿ ಬದಲಿಸಿ) ಅದಿರಲಿ, ಈಗ ನಿಮ್ಮನ್ನು ಕರೆಸಿರುವ ಉದ್ದೇಶ, ನೀವು ಹೊಲಗೇರಿಗಿ ಹೋದಿರಿ; ಅಲ್ಲಿ ಊಟ ಮಾಡಿ ಜಾತಿವ್ಯವಸ್ಥಾಪದ್ಧತಿ ಮೀರಿದಿರಿ. ಹೀಂಗ ಮೀರೂದಂದರ ರಾಜಾಜ್ಞೆ ಮೀರಿದಾಂಗ.

**ಬಸವಣ್ಣ :** ಇದು ರಾಜಾಜ್ಞೆ ಮೀರುವಿಕೆ ಅಂತ ಎಲ್ಲಿ ಹೇಳ್ಯಾದ ?

**ಕೇಶವಭಟ್ಟ :** ಮನುಸ್ಮೃತ್ಯಾಗ ಹೇಳ್ಯಾದ.

**ಬಸವಣ್ಣ :** ನಾನು ಅದನ್ನ ಮನ್ನಿಸೂದಿಲ್ಲ.

**ಬಿಜ್ಜಳ :** ಬಸವಣ್ಣಾ, ಅದನ್ನು ಮನ್ನಿಸೂದಿಲ್ಲ ಅಂದರ ರಾಜಾಜ್ಞೆ ಮನ್ನಿಸೂದಿಲ್ಲ ಅಂತ ಪರ್ಯಾಯವಾಗಿ ಹೇಳಿದಂತಾಗ್ತದ. ಅದು ನಮ್ಮ ಪರೋಕ್ಷ ಸಂವಿಧಾನ. ಅದಕ್ಕ ಈ ರಾಜ್ಯದಲ್ಲಿರುವವರು ಬದ್ಧರಾಗಿರಬೇಕು.

**ಬಸವಣ್ಣ :** ಅದು ನನಗೆ ಸಮ್ಮತ ಇಲ್ಲ. ನನ್ನ ನಿಲವೇ ಬ್ಯಾರೆ.

**ನಾರಾಯಣಭಟ್ಟ :** ಅಂದರ , ಬಿಜ್ಜಳನ ಸಂವಿಧಾನ ಬ್ಯಾರೆ, ಬಸವಣ್ಣನ ಸಂವಿಧಾನ ಬ್ಯಾರೆ ಅಂತ ನಿಮ್ಮ ಅರ್ಥs ?

**ಬಸವಣ್ಣ :** ಹಾಗೇ ಭಾವಿಸಬಹುದು.

**ಬಿಜ್ಜಳ :** ಸಾಧ್ಯವಿಲ್ಲ. ಈ ರಾಜ್ಯದಾಗ ನನ್ನ ಸಂವಿಧಾನಕ್ಕ ಸಮಾಂತರ ಇನ್ನೊಂದು ಸಂವಿಧಾನ ಬೆಳದರ ಅದನ್ನು ನಾಶಪಡಿಸ್ತೀನಿ. ಭಂಡಾರದ ಮ್ಯಾಲಿರೂದು ನನ್ನ ಹಕ್ಕು; ಜಾತಿಭೇದ ರಕ್ಷಿಸೂದು ನನ್ನ ಕರ್ತವ್ಯ

**ಬಸವಣ್ಣ :** ಇವೆರಡನ್ನೂ ಒಪ್ಪಲು ನನಗೆ ಆಗ್ತಿಲ್ಲ. ಇದು ನನ್ನ ಅಂತಿಮ ನಿಲುವು.

**ಬಿಜ್ಜಳ :** ನನ್ನ ಆಜ್ಞೆ ಮೀರಿದರ ಅನುಭವಿಸಬೇಕಾದ ಉಗ್ರ ಶಿಕ್ಷೆ ಊಹೆಗೂ ಮೀರಿದ್ದು.

**ಬಸವಣ್ಣ :** ಅದನ್ನು ನಾನು ಊಹಿಸಬಲ್ಲೆ, ಇವರು ದುಡಿಯುವವರು, ನನ್ನ ಜನ. ಇಂಥವ್ರು ಈ ರಾಜ್ಯದ, ಅಷ್ಟೇ ಯಾಕ ಈ ಲೋಕದ ಒಡೆಯರು (ಎಂದು ಹೇಳಿದವನೇ ಬಸವಣ್ಣ ಹೊರಡುವನು. ನೂರಾರು ಜನ ಅಸ್ಪೃಶ್ಯ ಗಂಡಸರು-ಹೆಂಗಸರು 'ವರ್ಣವಾದಿಗಳಿಗೆ ಧಿಕ್ಕಾರ' ಎನ್ನುತ್ತ ಅವನನ್ನು ಹಿಂಬಾಲಿಸುವರು. ವಿರುದ್ಧ ದಿಕ್ಕಿನಲ್ಲಿ ಬಿಜ್ಜಳ ಹೊರಡುವನು. 'ವರ್ಣವಿರೋಧಿಗಳಿಗೆ ಧಿಕ್ಕಾರ' ಎನ್ನುತ್ತ ಅವನನ್ನು ಅಧಿಕಾರಿಗಳು ಪುರೋಹಿತರು ಹಿಂಬಾಲಿಸುವರು. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಧ್ಯೇಯವಾಕ್ಯ ಕೇಳಿಸುತ್ತದೆ.)

## ದೃಶ್ಯ -೨೮

(ಬಸವಣ್ಣನ ಮಹಾಮನೆಯ ಮಲಗು ಕೋಣೆ. ಬಸವಣ್ಣ ಗಂಗಾದೇವಿ ಮಂಚದ ಮೇಲೆ ಕುಳಿತಿದ್ದಾರೆ. ಬಸವಣ್ಣ ವಿಚಾರಮಗ್ನನಾಗಿದ್ದಾನೆ.)

**ಬಸವಣ್ಣ :** ನನ್ನ ಮತ್ತು ಬಿಜ್ಜಳನ ಸಂಬಂಧ ಬಹಳ ದಿನ ಉಳೀಲಿಕ್ಕಿಲ್ಲ ಗಂಗಾ.

**ಗಂಗಾಂಬಿಕೆ :** ಯಾಕ ?

**ಬಸವಣ್ಣ :** ಸಮಾಜದ ಬಗೆಗಿನ ನನ್ನ ಹೊಸ ವಿಚಾರ, ಅದರಲ್ಲಿಯೂ ರಾಜ್ಯದ ಬಗೆಗಿನ ನನ್ನ ಹೊಸ ವಿಚಾರಗಳಿಂದ ಬಿಜ್ಜಳ ಮಹಾರಾಜ ವಿಚಲಿತರಾದ್ಹಾಂಗ ಕಾಣ್ತದ. ನನ್ನನ್ನು ಕೆಲಸದಿಂದ ತೆಗೆಯಬಹುದು.



**ಗಂಗಾಂಬಿಕೆ :** ಅದನ್ನು ಪ್ರಭುಗಳು ಆಡಿ ತೋರಿಸಿದರೆ ?

**ಬಸವಣ್ಣ :** ಇಲ್ಲ, ಜನ ಆಡಿಕೊಳ್ಳೂದು ನನ್ನ ಕಿವಿಗೆ ಬಿದ್ದದ.

**ಗಂಗಾಂಬಿಕೆ :** ನಿಮ್ಮ ಏಳಿಗೆ ಸಹಿಸದವರು ಸುಳ್ಳು ಸುದ್ದಿ ಹುಟ್ಟಿಸಿರಬಹುದು.

**ಬಸವಣ್ಣ :** ಇಲ್ಲ, ಅವರ ಮಾತಿನಲ್ಲಿ ಒಂದಿಷ್ಟು ನಿಜವಿರಬಹುದು. ಯಾಕಂದ್ರ ಇತ್ತೀಚೆ ಪ್ರಭುಗಳು ನನ ಕೂಡ ಸಮಾಲೋಚನೆ ನಡೆಸುವದನ್ನು ಕಡಿಮೆ ಮಾಡ್ಯಾರ.

**ಗಂಗಾಂಬಿಕೆ :** ಈಗ ನಿಮ್ಮ ಮುಂದಿನ ವಿಚಾರ ?

**ಬಸವಣ್ಣ : ನನ್ನ ಕಣ್ಣ ಮುಂದ ಈಗ ಎರಡು ಪ್ರಶ್ನೆಗಳಾವ. ಕೆಟ್ಟ ವ್ಯವಸ್ಥೆಯೊಂದಿಗಿ ಹೊಂದಿಕೊಂಡು ವರ್ತಮಾನದಾಗ ಬದುಕಬೇಕೋ, ಕೆಟ್ಟ ವ್ಯವಸ್ಥೆಯನ್ನು ಪ್ರತಿಭಟಿಸಿ ಭವಿಷ್ಯತ್ತಿನ್ಯಾಗ ಬದುಕಬೇಕೋ.**

**ಗಂಗಾಂಬಿಕೆ :** ಎರಡೂ ಕಾಲಘಟ್ಟಗಳಲ್ಲಿ ಬದುಕೂ ಹಾಂಗ ನಡೆಯಲು ಸಾಧ್ಯ ಇಲ್ಲs?

**ಬಸವಣ್ಣ :** ಸಾಧ್ಯ ಇಲ್ಲ, **ಇಲ್ಲಿ ಬದುಕಿದವ್ರು ಅಲ್ಲಿ ಸಾಯತಾರ. ಅಲ್ಲಿ ಬದುಕಬೇಕಾದವ್ರು ಇಲ್ಲಿ ಸಾಯಬೇಕಾಗ್ತದ.**

**ಗಂಗಾಂಬಿಕೆ :** ನನಗ ಏನೊಂದೂ ಅರ್ಥವಾಗ್ತಿಲ್ಲ. ನೀವು ಕಷ್ಟದಾಗ ಸಿಲುಕಿಕೊಳ್ಳಬಾರದು, ಅಷ್ಟು ಮಾತ್ರ ನನ ಅರ್ಥವಾಗ್ತದ.

**ಬಸವಣ್ಣ :** ಹೌದು. ನೀನು ಬಾಲ್ಯದಿಂದಲೂ ವೈದಿಕರ ಕರ್ಮಸಂಸ್ಕೃತಿಯೊಳಗ, ಅಧಿಕಾರಿಗಳ ಯಜಮಾನಸಂಸ್ಕೃತಿಯೊಳಗ ಬೆಳೆದುಬಂದವಳು. ಅದನ್ನು ತಕ್ಕಮಟ್ಟಿಗಿ ಬಿಡಿಸಿಕೊಂಡದ್ದೇ ದೊಡ್ಡ ಸಾಧನೆ.

**ಗಂಗಾಂಬಿಕೆ :** ಹೌದು, ಸಂಪ್ರದಾಯದಿಂದ ಬಿಡಿಸಿಕೊಳ್ಳೂದು ಅಷ್ಟು ಸುಲಭವಲ್ಲ ಅಂತ ಕಾಣ್ತದ. ಅದರಲ್ಲಿಯೂ ವ್ಯಕ್ತಿ ಹೊರಗ ಎಷ್ಟೇ ಸುಧಾರಣಾವಾದಿ ಆದ್ರೂ ಒಳಗ ಸಂಪ್ರದಾಯದ ಒಂದು ಗಟ್ಟಿ ಎಳಿ ಉಳಿದುಕೊಂಡಿರ್ತದ.

**ಬಸವಣ್ಣ :** ನಿಜ ಹೇಳಿದಿ ಗಂಗಾ. ನಮ್ಮ ಸಂಘಟನ್ಯಾಗ ಸೇರಿಕೊಂಡಿರುವ ಬಹಳಷ್ಟು ಜನ ಬ್ರಾಹ್ಮಣರಿಗಿ ನಾನು ಶೂದ್ರ ನಾಗಿಮಯ್ಯನ ಮನ್ಯಾಗ ಊಟ ಮಾಡಿದ್ದು ಮನಸ್ಸಿಗೆ ಬಂದಿಲ್ಲ ಅಂತ ತೋರ್ತದ. ಈ ಮಟ್ಟದಲ್ಲಿ ವರ್ಣನಾಶಮಾಡಬಾರದಾಗಿತ್ತು ಅಂತ ಅವರು ಮಾತಾಡಿಕೊಳ್ತಿದ್ದಾರ.

**ಗಂಗಾಂಬಿಕೆ :** ನನಗೂ ಹಾಂಗs ಅನಿಸ್ತದ. ಬ್ರಾಹ್ಮಣರ ಶ್ರೇಷ್ಠತೆಯನ್ನು ಇಷ್ಟು ಬೇಗ ನೀವು ಅಲ್ಲಗಳೆಯಬಾರದಿತ್ತು.

**ಬಸವಣ್ಣ :** ಬ್ರಾಹ್ಮಣರು ಶ್ರೇಷ್ಠರಲ್ಲ, ಶೂದ್ರರು ಕನಿಷ್ಠರಲ್ಲ. ಇವೆರಡೂ ಕೃತಕ ವಿಚಾರಗಳು. ಒಂದನ್ನು ಬಿಟ್ಟು ಒಂದನ್ನು ನಾಶಮಾಡಬಾರದು. ಎರಡನ್ನೂ ಏಕಕಾಲಕ್ಕ ನಾಶಮಾಡಿದಾಗಲೇ ಸಮಾಜದಲ್ಲಿ ಸಮಾನತೆ ಬೇಗ ಬರೂದು. ಶೋಷಣೆ ತಪ್ಪೂದು.

**ಗಂಗಾಂಬಿಕೆ :** ಏನೋ, ನಿಮ್ಮಷ್ಟು ನಾನು ಪ್ರಬುದ್ಧಳಲ್ಲ. ನಿಮಗ ತೊಂದರೆಯುಂಟಾಗಬಾರದು, ಅಷ್ಟೇ.

**ಬಸವಣ್ಣ :** ಎಲ್ಲಾ ಕೂಡಲಸಂಗನ ಇಚ್ಛೆ. ಇರಲಿ, ಹೊತ್ತಾಯಿತು ಮಲಗು. (ಮಲಗುತ್ತಾರೆ).

## ದೃಶ್ಯ - ೨೯

(ಬಿಜ್ಜಳನ ಅರಮನೆಯ ಶಯ್ಯಾಗೃಹ. ಬಿಜ್ಜಳ ರಂಭಾ ಮಂಚದ ಮೇಲೆ ಕುಳಿತಿದ್ದಾರೆ. ಬಿಜ್ಜಳ ಚಿಂತಾಮಗ್ನನಾಗಿದ್ದಾನೆ).

**ಬಿಜ್ಜಳ :** ನನ್ನ ಮತ್ತು ಬಸವಣ್ಣನ ಸಂಬಂಧ ಬಹಳ ದಿನ ಉಳೀಲಿಕ್ಕಿಲ್ಲ, ರಂಭಾ. ಅವನು ಸಾಂಪ್ರದಾಯಿಕ ರೀತಿಯಲ್ಲಿ ಹೊಸ ಧರ್ಮ ಕಟ್ಟತಾನಂತ ತಿಳಿದು ಈ ವರೆಗೆ ಸುಮ್ಮ ಇದ್ದೆ. ಆದರ ಅವನ ಕಲ್ಪನೆಯೇ ಬ್ಯಾರೆ ರೀತಿಯಲ್ಲ್ಯಾದ.

**ರಂಭಾ :** ಅಂದರ?

**ಬಿಜ್ಜಳ :** ಅವನ ದೃಷ್ಟಿಯಲ್ಲಿ ಧರ್ಮ ಬ್ಯಾರೆ ಅಲ್ಲ, ಸಮಾಜ ಬ್ಯಾರೆಯಲ್ಲ. ರಾಜಕೀಯವೂ ಇದರಿಂದ ಪ್ರತ್ಯೇಕ ಅಲ್ಲ ಅನ್ನೂ ಧೋರಣೆ ಅವನದು. ಒಂದು ಸಮಗ್ರ ಸುಧಾರಣೆಯ ರೀತಿಯಲ್ಲಿ ಅವನು ಮುಂದುವರಿಯೂದರಿಂದ ಪ್ರಾಚೀನ ಕಾಲದಿಂದಲೂ ನಡೆದುಬಂದ ಸಾಮಾಜಿಕ ಸಂಪ್ರದಾಯಗಳು ಒಂದೊಂದಾಗಿ ಸಡಿಲಾಗ್ತಾ ಇವೆ.

**ರಂಭಾ :** ಅವನ ಸುಧಾರಣೆಗಿ ಜನ ಆಕರ್ಷಿತರಾಗ್ಯಾರ?

**ಬಿಜ್ಜಳ :** ಆಗದೇ ಏನು ? ಈ ವರೆಗೆ ದಲಿತರೂ ಅಸ್ಪೃಶ್ಯರು ಮಾತ್ರ ಆಕರ್ಷಿತರಾಗ್ತಿದ್ದರು. ಈಗ ಸೊಡ್ಡಳ ಬಾಚರಸನಂಥ ಅಧಿಕಾರಿಗಳೂ ಅವನತ್ತ ಒಲವು ತೋರ್ತಿದ್ದಾರ. ನನ್ನ ತಂಗಿ ನೀಲಲೋಚನೆಯೂ ಅವನ ಸಿದ್ಧಾಂತ ಮೆಚ್ಚಿಧಾಂಗ ಕಾಣ್ತದ. ಮೊನ್ನೆ ಶರಣರ ವಚನಗಳಲ್ಲ ಕಟ್ಟಬಿಚ್ಚಿ ಓದತಿರೂದು ಗಮನಿಸಿದೆ.

**ರಂಭಾ :** ಹೌದು, ಮೊನ್ನೆ ನನಗೂ ಕೆಲವು ವಚನ ಓದಿ ಹೇಳಿದಳು. ಕೇವಲ ಮನಮುಖಿ ವಚನಗಳಲ್ಲ, ಜನಮುಖಿ ವಚನಗಳನ್ನೂ ನಾನು ಗಮನಿಸಿದೆ.

**ಬಿಜ್ಜಳ :** ನನಗೆ ತೊಂದರೆ ಬಂದದ್ದೇ ಜನಮುಖಿ ವಚನಗಳಿಂದ. ಅಲ್ಲಿ ಇಂದಿನ ರಾಜತ್ವ ವ್ಯವಸ್ಥೆಯ ವಿರೋಧಿ ವಚನಗಳಿವೆ. ಇವುಗಳನ್ನು ಓದಿ ಜನ ನನ್ನನ್ನು ಪ್ರಶ್ನಿಸುವ ಮನೋಧರ್ಮ ಬೆಳೆಸಿಕೊಳ್ಳಬಹುದೇನೋ.



**ರಂಭಾ :** ಯಾಕೆ ? ಸ್ತ್ರೀ-ಪುರುಷಭೇದ ಪ್ರಶ್ನಿಸುವ ವಚನಗಳನ್ನೂ ನೀಲಲೋಚನೆ ಓದಿ ಹೇಳಿದಳು. "ಹೆಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ", "ಹೆಣ್ಣು ಪ್ರತ್ಯಕ್ಷ್ಯ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂಬಂಥ ವಚನ ಕೇಳಿದಾಗಿನಿಂದ ನನ್ನ ಮನಸಿನಾಗೂ ಹೊಸ ವಿಚಾರ ಆರಂಭ ಆಗ್ಯಾವ.

**ಬಿಜ್ಜಳ :** ಹೌದು, ಪುರುಷವರ್ಗವನ್ನೂ, ಪ್ರಭುವರ್ಗವನ್ನೂ, ಪುರೋಹಿತವರ್ಗವನ್ನೂ ಪ್ರಶ್ನಿಸುವ ವಚನಗಳಿಂದಾಗಿ ಸಮಾಜ ಪ್ರಚೋದನೆಗೊಳ್ಳುವ ಸಾಧ್ಯತೆಯಿದೆ.

**ರಂಭಾ :** ಇರಲಿ, ಬಸವಣ್ಣನ ಧೋರಣೆ ನ್ಯಾಯಸಮ್ಮತವೋ, ಅಲ್ಲವೋ ? ನಿಮ್ಮ ಅಂತರಂಗ ಏನ ಹೇಳ್ತದ?

**ಬಿಜ್ಜಳ :** ರಂಭಾ, ಬಹಳ ಮಹತ್ವದ ಪ್ರಶ್ನೆ ಹಾಕಿದಿ. ಅವನ ದಾರಿ ಸರಿಯಾಗಿ ಅದ. ಆದರ ಸಮಾಜ ಈ ವರೆಗೆ ಬ್ಯಾರೆ ದಾರ್‍ಯಾಗ ಬಹಳ ದೂರ ನಡದು ಬಂದಾದ. ನಾವೆಲ್ಲ ಅದರ ಒಂದು ಭಾಗ ಆಗೀವಿ. ಏನ ಮಾಡೂದು ? ತಾತ್ವಿಕವಾಗಿ ಅವನದು ಸರಿ. ವಾಸ್ತವ ಬ್ಯಾರೆ ಅದ.

**ರಂಭಾ :** ನಿಮ್ಮ ತೊಳಲಾಟ ಅರ್ಥಮಾಡಿಕೊಂಡೀನಿ. ಬಸವಣ್ಣನವರೊಂದಿಗೆ ಹೊಂದಿಕೊಂಡು ಹೋಗೂದೇ ಸರಿಯಾದ ದಾರಿ.

**ಬಿಜ್ಜಳ :** ಬಹುಶಃ ಇದು ಸಾಧ್ಯವಿಲ್ಲ. ರಾಜಪರಿವಾರದವರು, ವೈದಿಕ ಬ್ರಾಹ್ಮಣರು, ಶೈವ ಮಠಾಧೀಶರು ಅವನ ವಿರೋಧಿಗಳಾಗಿ ಬೆಳೀತಿದ್ದಾರ. ಅವನ ಸಂಘಟನೆಯೊಳಗ ಬಿರುಕು ಉಂಟಾಗುವ ವರೆಗೂ ಕಾಯ್ತೀನಿ.

**ರಂಭಾ :** ಬಸವಣ್ಣನಂಥ ನೇತಾರ ಇರುವ ವರೆಗೂ ಅದು ಸಾಧ್ಯ ಇಲ್ಲ ಅಂತ ತೋರ್ತದ.

**ಬಿಜ್ಜಳ :** ನಿನಗ ಸಮಾಜದ ಮನಸ್ಸ ಗೊತ್ತಿಲ್ಲ. ನಮ್ಮ ದೇಶದಾಗ ಜಾತಿ ಆಧರಿಸಿಯೇ ಸಂಘಟನೆ ಬೆಳೀತಾವ, ಕೊನೆಗೆ ಜಾತಿ ಆಧರಿಸಿಯೇ ಒಡೀತಾವ. ಆಗ ಏನೋ ಅರ್ಥ ಹಚ್ಚಿ, ಮೊದಲ ಹೊರಗ ಬರವ್ರು ಬುದ್ಧಿವಂತರಾದ ಮೇಲುಜಾತಿಯವರೇ, ನೋಡ್ತಿರು.

**ರಂಭಾ :** ನನಗ ಅಷ್ಟೆಲ್ಲ ತಿಳಿಯೂದಿಲ್ಲ. ಇರಲಿ, ದಣಿದಿದ್ದೀರಿ, ಮಲಗಿರಿ (ಮಲಗುತ್ತಾರೆ).

## ದೃಶ್ಯ- ೩೦

(ಅನುಭವ ಮಂಟಪ. ಶರಣರೆಲ್ಲ ನೆರೆದಿದ್ದಾರೆ).

**ಬಸವಣ್ಣ :** ಬಂಧುಗಳೇ, ನಮ್ಮ ಈವರೆಗಿನ ಸಾಮಾಜಿಕ, ಆರ್ಥಿಕ ಕಾರ್ಯವಿಧಾನಗಳೇ ಬ್ಯಾರೆ, ಇನ್ನ ಮುಂದ ಅನುಸರಿಸಬೇಕಾದ ಕಾರ್ಯವಿಧಾನಗಳೇ ಬ್ಯಾರೆ. ಅರಸ ಮುನಿದರ ನಾಡೊಳಗಿರುವುದು ಕಠಿಣ. ರಾಜನ ವಿರೋಧ ಬಹಿರಂಗ ಆಗ್ಯಾದ.

**ಮಾಚಿದೇವ :** ರಾಜನ ವಿರೋಧ ಬಹಿರಂಗಾಗಿದ್ರ ನಮ್ಮ ಸುಧಾರಣಾ ಕ್ರಮಗಳನ್ನೂ ನಾವು ಬಹಿರಂಗವಾಗೇ ಮುಂದುವರಿಸಬೇಕು. ಅನೇಕ ರೀತಿಗಳಲ್ಲಿ ಮುನ್ನಡೆಸಬೇಕು.

**ಬಸವಣ್ಣ :** ಈಗಾಗಲೇ ಭಂಡಾರದ ಬಳಕೆಯ ಹೊಸ ಪ್ರಯೋಗದಿಂದಾಗಿ, ಕಾಯಕ-ದಾಸೋಹಗಳ ಪ್ರಜ್ಞೆ ಜಾಗೃತಗೊಂಡು, ಆರ್ಥಿಕ ಅಸಮಾನತೆ ಕಡಿಮೆಯಾಗುತ್ತ ನಡದು, ಬಡವ-ಶ್ರೀಮಂತರೆಂಬ ವರ್ಗಭೇದ ನಾಶವಾಗ್ತ ಸಾಗ್ಯಾದ.

**ಗಂಗಾಂಬಿಕೆ :** ನಮ್ಮ ನಮ್ಮ ಮನ್ಯಾಗ, ಅನುಭವ ಮಂಟಪದಂಥ ಸಮುದಾಯ ಭವನದಾಗ, ಶರಣರ ಕೇರ್ಯಾಗ ಸ್ತ್ರೀ ಪುರುಷರು ಮುಕ್ತವಾಗಿ ವ್ಯವಹರಿಸುವುದರಿಂದಾಗಿ, ಸ್ತ್ರೀ-ಪುರುಷ ಅನ್ನೂ ಭೇದವೂ ಕಡಿಮೆಯಾಗ್ತಾ ಇದೆ.

**ಬಸವಣ್ಣ :** ಆದರ ವರ್ಣಭೇದ ನಿವಾರಣೆಯಲ್ಲಿ ನಾವು ನಿರೀಕ್ಷಿಸಿದಷ್ಟು ಪ್ರಗತಿ ಸಾಧ್ಯವಾಗಿಲ್ಲ.

**ಮಾಚಿದೇವ :** ಹೌದು. ಈ ವರ್ಣಭೇದ ರೋಗನಿವಾರಣೆಗೆ ರಕ್ತಸಂಬಂಧವೇ ಒಳ್ಳೇ ಔಷಧ.

**ಬಸವಣ್ಣ :** ಏನು ಮಾಡೂದು? ಇದಕ್ಕ ನಾನೇ ಉದಾಹರಣೆಯಾಗ್ತಿದ್ದೆ. ಆದರ ಬಾಲ್ಯದಲ್ಲಿಯೇ ನನ್ನ ಮದುವಿ ಅನಿರೀಕ್ಷಿತವಾಗಿ ಜರುಗಿ ಹೋಯಿತು.

**ಗಂಗಾಂಬಿಕೆ :** ನೀವು ನಮ್ಮ ಚಳುವಳಿಯ ನೇತಾರರು. ಜನ ನಿಮ್ಮಿಂದ ಇಂತಹ ಆದರ್ಶ ಅಪೇಕ್ಷಿಸ್ತಾರ. ಎರಡನೆಯ ಮದುವೆ ತಪ್ಪು, ಆದರೆ ದೊಡ್ಡ ಆದರ್ಶಕ್ಕಾಗಿ ನೀವು ಈ ಸಣ್ಣ ತಪ್ಪು ಮಾಡಿದರ ದೋಷವಲ್ಲ ಅಂತ ನನ್ನ ಅಭಿಪ್ರಾಯ.

**ಮಾಚಿದೇವ ;** ಇದನ್ನು ನಾನು ಅನುಮೋದಿಸ್ತೀನಿ.

**ನೀಲಾಂಬಿಕೆ :** (ಜನರ ಮಧ್ಯದಿಂದ ನುಗ್ಗಿ ಬಂದು) ಅಕ್ಕ ಗಂಗಾಂಬಿಕೆಯ ಒಪ್ಪಿಗೆ ಇದ್ದರೆ, ಕ್ಷತ್ರಿಯ ಕನ್ಯೆಯಾದ ನಾನು ಈ ವಿವಾಹಕ್ಕ ಸಿದ್ಧಳಿದ್ದೀನಿ.

**ಗಂಗಾಂಬಿಕೆ :** ನಿನ್ನನ್ನು ತಂಗಿಯಾಗಿ ಸ್ವೀಕರಿಸಲು ನನಗ ಸಂತೋಷ ಅನಸ್ತದ. ಹೋರಾಟ ತೀವ್ರ ಆಗಿರುವ ಇಂದಿನ ಸಂದರ್ಭದಲ್ಲಿ ನಿನ್ನಂಥ ಬೌದ್ಧಿಕ ಸಾಹಚರ್ಯದ "ವಿಚಾರಪತ್ನಿ" ಬಸವಣ್ಣನವರಿಗೆ ಅವಶ್ಯ ಅದ.

**ಬಸವಣ್ಣ :** ನಾನು, ಇನ್ನೊಂದು ಮದುವೆ ?

**ಮಾಚಿದೇವ :** ಹೌದು, ಅಂತರ್ಜಾತಿ ವಿವಾಹದ ಆದರ್ಶಕ್ಕಾಗಿ ಕ್ಷತ್ರಿಯ ನೀಲಲೋಚನೆಯನ್ನು ಕನ್ಯೆ ಮದುವೆಯಾದರೆ ತಪ್ಪೇನು ?

**ಶರಣರು :** ಏನೂ ತಪ್ಪಿಲ್ಲ, ಏನೂ ತಪ್ಪಿಲ್ಲ.

**ಗಂಗಾಂಬಿಕೆ :** ಏನೂ ತಪ್ಪಿಲ್ಲ. (ಎನ್ನುತ್ತ ಇಬ್ಬರ ಕೈ ಹಿಡಿಸುತ್ತಾಳೆ, ನೆರೆದವರೆಲ್ಲ "ಶರಣರ ಜಾತ್ಯತೀತ ವಿವಾಹಕ್ಕೆ ಜಯವಾಗಲಿ, ಶರಣತತ್ವಕ್ಕೆ ಜಯವಾಗಲಿ" ಎನ್ನುತ್ತಾರೆ).



**ಬಸವಣ್ಣ :** ಎಲ್ಲ ದೇವರಿಚ್ಛೆ. ಇದು ವರ್ಣಭೇದ ನಿವಾರಣೆಯ ಮೊದಲ ಹೆಜ್ಜೆ.

**ಮಾಚಿದೇವ ;** ಇದು ಇಷ್ಟಕ್ಕ ನಿಲ್ಲಬಾರದು. ಬ್ರಾಹ್ಮಣ -ಶೂದ್ರ ಜಾತಿಗಳಿಂದ ಬಂದ ಶರಣರ ನಡುವೆಯೂ ಇಂಥ ಸಂಬಂಧಗಳು ಜರುಗಬೇಕು. ಮದುವೆಯಿಂದ ವಂಚಿತರಾದ ದಾಸಿಪುತ್ರಿಯರ, ವೇಶ್ಯಾಪುತ್ರಿಯರ ಸಂಖ್ಯೆ ನಮ್ಮಲ್ಲಿ ಬಹಳ ಅದ. ಅಂಥವರನ್ನೂ ಕೈ ಹಿಡೀಲಿಕ್ಕ ನಮ್ಮ ಶರಣರು, ಅದರಲ್ಲಿಯೂ ಯುವಕರು ಮುಂದ ಬರಬೇಕು.

**ಯುವ ಶರಣರು :** (ಎದ್ದು ನಿಂತು) ನಾವು ಸಿದ್ಧರಿದ್ದೀವಿ. ಅಂಥ ಹತಭಾಗಿನಿಯರ ಕೈ ಹಿಡಿಯಲು ನಮ್ಮ ಒಪ್ಪಿಗಿ ಅದ.

**ಬಸವಣ್ಣ :** ನೀವೆಲ್ಲ ನನಗಿಂತ ಒಂದು ಹೆಜ್ಜೆ ಮುಂದು. ಇದಕ್ಕೆಲ್ಲ ಕೂಡಲಸಂಗನೇ ದಾರಿ ತೋರಸಬೇಕು.

## ದೃಶ್ಯ - ೩೧

(ಬಿಜ್ಜಳನ ಅರಮನೆ. ನೀಲಾಂಬಿಕೆಯೊಂದಿಗೆ ಬಿಜ್ಜಳನ ಗಂಭೀರ ಮಾತುಕತೆ. ಕುಳಿತಿದ್ದಾರೆ).

**ಬಿಜ್ಜಳ :** ನೀಲಾ, ಚಕ್ರವರ್ತಿಯ ತಂಗಿಯಾದ ನೀನು ಬಸವಣ್ಣನಂಥ ಒಬ್ಬ ಸಾಮಾನ್ಯ ಅಧಿಕಾರಿಯನ್ನು ಮದುವೆಯಾಗುವುದು....

**ನೀಲಲೋಚನೆ :** ತಾನು ಮೂಲತಃ ಮನುಷ್ಯನೆಂಬುದನ್ನು ಮರೆತ ವ್ಯಕ್ತಿಗಿ ಇಂತಹ ಘಟನೆ ಪ್ರಶ್ನೆಯಾಗಿ ಕಾಡೂದು ಸಹಜ.

**ಬಿಜ್ಜಳ :** ಹಾಗಲ್ಲ, ಸಾಮಾಜಿಕ ವ್ಯವಸ್ಥೆಯೆನ್ನೂದು ಇರೂದಿಲ್ಲವೇ ?

**ನೀಲಲೋಚನೆ :** ಮಾನವಿಕ ವ್ಯವಸ್ಥೆಯ ಮ್ಯಾಲ ನಾವು ಮಾಡಿಕೊಂಡಿರೂ ಇನ್ನೊಂದು ವ್ಯವಸ್ಥೆಯೇ ಸಾಮಾಜಿಕ. ಅದರಲ್ಲಿ ಅರಿತೋ, ಅರಿಯದೆಯೋ ಬೆಳೆದು ಬಂದಿರೂ ಅರ್ಥರಹಿತ ಅಂಶಗಳನ್ನು ನಾವು ಬದಲಾಯಿಸಿಕೊಳ್ಳಬೇಕು. ಸ್ತ್ರೀಯರ ವಿಷಯದಲ್ಲಿ ಶರಣರು ಮಾಡತಾ ಇರೂದು ಅಂಥ ಬದಲಾವಣೆಯನ್ನು.

**ಬಿಜ್ಜಳ :** ಅಂಥ ಬದಲಾವಣೆ ಈಗ ಅವಶ್ಯವೇ? ಸ್ತ್ರೀಗೆ ಸಮಾಜದಲ್ಲಿ ಇಂದು ಗೌರವಗಳಿಲ್ಲವೇ ?

**ನೀಲಲೋಚನೆ :** ಇಲ್ಲ. ಕೆಲವೊಮ್ಮೆ ಸಂಪತ್ತು-ವೈಭವಗಳ ಅನುಕೂಲತೆಗಳಿರಬಹುದು. ಆದರ ಪುರುಷಪ್ರಧಾನ -ಸ್ತ್ರೀ ಅಪ್ರಧಾನ ದೃಷ್ಟಿಭೇದ ಕಾರಣಮಾಗಿ ಅವಳು ಸಾಮಾಜಿಕ ನ್ಯಾಯದಿಂದ ವಂಚಿತಳಾಗ್ಯಾಳ. ಅನೇಕ ಯಾತನೆಗಳಲ್ಲಿ ನರಳತಾ ಇದ್ದಾಳ. ಅದು ನಿಮ್ಮಂಥವರಿಗೆ ಕೇಳಿಸೂದಿಲ್ಲ. ಈ ಭೇದ ನಿವಾರಿಸೂದೇ ಶರಣ ಚಳುವಳಿಯ ಉದ್ದೇಶ.

**ಬಿಜ್ಜಳ :** ಹಾಗಲ್ಲ, ಮೂಲತಃ ಗಂಡು-ಹೆಣ್ಣಿನ ಭೇದ ಅನ್ನೂದು ಸ್ವಾಭಾವಿಕವಾದುದು.

**ನೀಲಲೋಚನೆ :** ಏನು ಭೇದ ? "ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು. ಒಳಗೆ ಸುಳಿವ ಆತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ" ಎಂಬ ತತ್ವ, ಶರಣಸಮಾಜದಲ್ಲಿ ಸ್ಥಾಪಿತವಾಗ್ತ ನಡದದ. ಪಾರಮಾರ್ಥಿಕ ಸ್ತರದೊಳಗ ಪ್ರಾರಂಭವಾದ ಈ ವೈಚಾರಿಕ ಕ್ರಾಂತಿ, ಪ್ರಾಪಂಚಿಕ ನೆಲೆಯೊಳಗೂ ಇಂದು ಕಾಣಿಸಿಕೊಂಡದ. ಅವಳಿಗಿ ಆತ್ಮಗೌರವ ಸಾಧ್ಯ ಆಗ್ಯಾದ. ಸಂಪ್ರದಾಯದ ಬಂದಿಯಾಗಿದ್ದ ಹೆಣ್ಣ ಜೀವಕ್ಕ ಚಲನಶೀಲ ವ್ಯಕ್ತಿತ್ವ ಪ್ರಾಪ್ತ ಆಗ್ಯಾದ.

**ಬಿಜ್ಜಳ :** ಒಪ್ಪಿದೆ. ಸ್ತ್ರೀ -ಪುರುಷರು ಆತ್ಮನೆಲೆಯಲ್ಲಿ, ಸಾಮಾಜಿಕ ನೆಲೆಯಲ್ಲಿ ಸಮಾನರು. ಆದರೆ ಸಾಮಾಜಿಕ ಪ್ರತಿಷ್ಠೆಯೆನ್ನುವುದು ಇರುವುದಿಲ್ಲವೇ ? ನಿನ್ನದು ಚಕ್ರವರ್ತಿ ಕುಟುಂಬ, ಬಸವಣ್ಣನದು ಸಾಮಾನ್ಯ ಕುಟುಂಬ.

**ನೀಲಲೋಚನೆ :** ಯಾವ ಕುಟುಂಬದಲ್ಲಿ ವ್ಯಕ್ತಿ ಹುಟ್ಟಿದ ಮುಖ್ಯವಲ್ಲ, ಎಂಥ ವ್ಯಕ್ತಿತ್ವ ಬೆಳೆಸಿಕೊಂಡಿದ್ದಾನೆಂಬುದು ಮುಖ್ಯ. ಕಿರೀಟಧಾರಿಯಾದ ಚೋಳ ಚಕ್ರವರ್ತಿಯ ಶಿರ ಧೂಳು ಮುಸುಕಿದ ಮಾದರ ಚೆನ್ನಯ್ಯನ ಪಾದಕ್ಕೆ ಎರಗಿತು. ಇವರಲ್ಲಿ ಯಾರು ಶ್ರೇಷ್ಠ? ಯಾರು ಕನಿಷ್ಠ ? ಹೇಳು ಅಣ್ಣಾ.

**ಬಿಜ್ಜಳ :** ನೀನು ಪರಮಸತ್ಯಗಳನ್ನು ನುಡಿದು ನನ್ನ ಬಾಯಿ ಮುಚ್ಚಿಸುತ್ತಿರುವಿ. ಆದರ ಎರಡು ಭಿನ್ನ ಜಾತಿಗಳಲ್ಲಿ ರಕ್ತಸಂಬಂಧ .......

**ನೀಲಲೋಚನೆ :** (ಗಹಗಹಿಸಿ ನಕ್ಕು).... ಜಾತಿ, ಜಾತಿ, ಜಾತಿ. ಅದು ನಾವು ಕಲ್ಪಿಸಿದ ಹೀನ ವ್ಯವಸ್ಥೆ. "ಆವ ಕುಲವಾದರೇನು ? ಶಿವಲಿಂಗವಿದ್ದವನೇ ಕುಲಜನು........ ಒಕ್ಕುದ ಕೊಂಬೆನವರನ್ನಲ್ಲಿ, ಕೂಸ ಕೊಡುವೆನವರಲ್ಲಿ" ಎಂದು ಬಸವಣ್ಣ ಸಾರಿದುದು ಲೋಕಮಾನ್ಯ ಮಾತಲ್ಲವೇ ?

**ಬಿಜ್ಜಳ :** ಊರ ಮಾತ ಬ್ಯಾಡ. ಅರಮನ್ಯಾಗ ನಿನಗ ಏನು ಕಡಿಮೆಯಿತ್ತು ?

**ನೀಲಲೋಚನೆ ;** ಅರಸರ ಮನ್ಯಾಗ ಅರಸಿಯಾಗಿರೂದಕಿಂತ ಶರಣರ ಮನ್ಯಾಗ ದಾಸಿಯಾಗಿರೂದು ಲೇಸು.

**ಬಿಜ್ಜಳ :** ಹಾಂ !

**ನೀಲಲೋಚನೆ ;** ಹೌದು, ಸ್ಥಗಿತ ಮೌಲ್ಯದ ಅರಸನ ರಾಣಿಯಾಗಿರೂದಕಿಂತ, ಚಲನಶೀಲ ಮೌಲ್ಯದ ಬಡವನ ಹೆಂಡತಿಯಾಗಿರೂದು ಸುಖ. ಈ ಆತ್ಮಸ್ವಾತಂತ್ರ್ಯಕ್ಕಾಗಿಯೇ ನಾನು ಆ ಸಣ್ಣ ಅಧಿಕಾರಿನ ಮದುವೆ ಆದದ್ದು. ಗಂಡು-ಹೆಣ್ಣಿನ ಲೌಕಿಕ ಸುಖಭೋಗ ಎಷ್ಟಿದ್ದರೇನು, ಅವರಲ್ಲಿ ವೈಚಾರಿಕ ಸಾಹಚರ್ಯ ಇಲ್ಲದಿದ್ದರ ? "ವಿಚಾರಪತ್ನಿ' ಆಗೂ ಉದ್ದೇಶದಿಂದ ಎರಡನೆಯ ಪತ್ನಿಯಾಗಿ ಬಸವಣ್ಣನ ಕೈ ಹಿಡಿದೀನಿ.



**ಬಿಜ್ಜಳ :** (ಸಿಟ್ಟಿನಿಂದ) ಶರಣತತ್ವದ ಸೆರೆ ಕುಡಿದವಳ ಹಾಂಗ ಮಾತಾಡಬ್ಯಾಡ.

**ನೀಲಲೋಚನೆ :** (ಉದಾಸೀನ ಭಾವದಿಂದ) ಮಹಾರಾಜ, ಕ್ಷಮಿಸಿ. (ತಟ್ಟನೆ ಎದ್ದು, ಕೈಮುಗಿದು ಹೋಗುತ್ತಾಳೆ).

## ದೃಶ್ಯ - ೩೨

(ಸಂಜೆಯ ಸಮಯ. ಅನುಭವ ಮಂಟಪ, ಶರಣರು ಸೇರಿದ್ದಾರೆ.)

**ಬಸವಣ್ಣ :** ಶರಣರೇ, ಕುಂತಳ ರಾಜ್ಯದಾಗ ಬದಲಾವಣೆ ತೀವ್ರವಾಗಿ ಜರುಗತಾ ನಡದಾದ. ನಮ್ಮ ಕನಸುಗಳು ನನಸಾಗತಾ ಸಾಗ್ಯಾವ. "ಕಾಯಕವೇ ಕೈಲಾಸ' ತತ್ವದ ಸಾಕಾರಮೂರ್ತಿಯಾಗ್ತಾ ಇರುವ ಶರಣರು, ತಮ್ಮ ಕೇರಿ ಕೈಲಾಸವನ್ನಾಗಿಸ್ತಾ ಇದ್ದಾರ. (ಹೊರಗ ಗದ್ದಲ. "ಅಯ್ಯೋ, ಹೊಡೀಬ್ಯಾಡ್ರಿ, ನಿಮ್ಮ ಕಾಲಿಗಿ ಬೀಳ್ತೀನಿ" ಎಂಬ ಧ್ವನಿ) ಏನದು ಗದ್ದಲ ? ಮಾಚಿದೇವರೇ, ವಿಚಾರಿಸಿರಿ. (ಮಾಚಿದೇವ ಹೋಗುತ್ತಾನೆ).

**ಬಸವಣ್ಣ :** ಏನು ಹೇಳುತ್ತಿದ್ದೆ ?

**ನೀಲಲೋಚನೆ :** ಕಾಯಕದ ಬಗ್ಗೆ.

**ಬಸವಣ್ಣ :** ಹೌದು. ಕಾಯಕದಾಗ ಯಾವುದೂ ಶ್ರೇಷ್ಠ ಅಲ್ಲ. ಯಾವುದೂ ಕನಿಷ್ಠ ಅಲ್ಲ ಎಂಬ ಧೋರಣೆಯಿಂದಾಗಿ ಎಲ್ಲ ಕಾಯಕಗಳಿಗೂ ಗೌರವ ಪ್ರಾಪ್ತ ಆಗ್ಯಾದ.

**ನೀಲಲೋಚನೆ** : ನಿಜ, ಎಲ್ಲರೂ ತಮ್ಮ ತಮ್ಮ ಮೂಲಕಾಯಕಗಳನ್ನು ಗೌರವದಿಂದ ಮುಂದುವರಿಸುತ್ತಿರುವುದಷ್ಟೇ ಅಲ್ಲ, ಎಲ್ಲ ಕಾಯಕಗಳೂ ಸಮಾನ ಅನ್ನೂ ನಂಬಿಕೆ ಕಾರಣವಾಗಿ, ಯಾವುದೇ ಜಾತಿ ವೃತ್ತಿಗಳಿಂದ ಬಂದ ಶರಣರು ಯಾವುದೇ ಕಾಯಕ ತೆರೆದ ಮನಸ್ಸಿನಿಂದ ಮಾಡತಿದ್ದಾರ. ಕಾಶ್ಮೀರದ ದೊರೆ ಮೋಳಿಗೆ ಮಾರಯ್ಯನವರು ಆಡಳಿತಕ್ಕ ಬದಲು ಕಟಗಿ ಕಾಯಕ ಕೈಗೆತ್ತಿಕೊಂಡರು. ಇದರಿಂದಾಗಿ ಕಾಯಕಗಳು ಮಡಿ ಮೈಲಿಗೆಗಳಿಂದ ಮುಕ್ತವಾಗ್ತ ನಡದಾವ. (ಅಷ್ಟರಲ್ಲಿ ಮಾಚಿದೇವ ಒಳಗೆ ಬರುತ್ತಾನೆ. ಅವನ ಹಿಂದೆ ಇಬ್ಬರು ತಳವಾರರು ತೋಳಿಗೆ ಹಗ್ಗ ಬಿಗಿದ ಹೆಂಗಸನ್ನು ಕರೆದುಕೊಂಡು ಬರುತ್ತಿದ್ದಾರೆ. ಅವಳ ಕೈಯಲ್ಲಿ ಅದೇ ಆಗ ಹುಟ್ಟಿದ ಕೂಸು).

**ಬಸವಣ್ಣ :** ಏನದು ?

**ತಳವಾರ :** ಪ್ರಭೂ, ಈಕಿ ಸೂಳೆ. ಹಡೆದ ಕೂಸ ಕತ್ತಲಾಗ ಎಸೆದು ಹೊಂಟಿರೂದು ಗೊತ್ತಾಯ್ತು, ಎಳಕೊಂಡು ನ್ಯಾಯಾಲಯಕ್ಕ ವಿಚಾರಣೆಗೆ ಹೊಂಟೀವಿ.

**ಬಸವಣ್ಣ :** (ಸಿಟ್ಟಿನಿಂದ) ಹಗ್ಗ ಬಿಚ್ಚಿರಿ. ನಾನೇ ವಿಚಾರಿಸಿತೀನಿ. (ಬಿಚ್ಚ ತೊಡಗುತ್ತಾರೆ. ನೀಲಲೋಚನೆ ತನ್ನ ಉತ್ತರೀಯವನ್ನು ಚಳಿಯಿಂದ ನಡುಗುವ ಸೂಳೆಗೆ ಹೊಚ್ಚುತ್ತಾಳೆ. ಮಗುವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಕಣ್ಣೀರು ಒರೆಸಿಕೊಳ್ಳುತ್ತಾಳೆ).

**ಬಸವಣ್ಣ :** ತಾಯೀ, ನಾನು ನಿನ್ನನ್ನು ಅರ್ಥ ಮಾಡಿಕೊಂಡೀನಿ. ಯಾವ ಅಸಹಾಯಕ ಪರಿಸ್ಥಿತಿ ಕಾರಣವಾಗಿ ನೀನು ಈ ವೃತ್ತಿಗಿ ಇಳಿದೀದಿ ಅನ್ನೂದನ್ನು ನಾನು ಊಹಿಸಿಕೊಳ್ಳಬಲ್ಲೆ.

**ಸೂಳೆ :** (ದುಃಖಿಸುತ್ತ) ಸ್ವಾಮೀ, ಆ ಅಸಹಾಯಕ ಪರಿಸ್ಥಿತಿಯೇ ನನ್ನನ್ನು ಈ ವೃತ್ತಿಗೆ ಮತ್ತೆ ಮತ್ತೆ ನೂಕತಾ ಇದೆ.

**ಬಸವಣ್ಣ :** ನನಗ ಗೊತ್ತು. ಈಗ ನಿನಗ ಹೊಟ್ಟೆತುಂಬ ಊಟ, ಮೈತುಂಬ ಬಟ್ಟೆ, ಕೈತುಂಬ ಕೆಲಸ, ಸಾಧ್ಯವಾದರೆ ಮದುವಿ-ಇಷ್ಟು ನಡೆಸಿಕೊಟ್ಟರ ಈ ವೃತ್ತಿ ಬಿಡತೀಯಾ ?

**ಸೂಳೆ :** ದೇವರೇ, ಇದಕ್ಕಿಂತ ದೊಡ್ಡ ಭಾಗ್ಯ ಏನದ ? ಪರಿಸ್ಥಿತಿಯ ಒತ್ತಡ ನನ್ನನ್ನು ಈ ವೃತ್ತಿಗಿ ತಳ್ಳ್ಯಾದ. ಎದ್ದು ಬರಲು ಪ್ರಯತ್ನಿಸಿದಷ್ಟೂ ಹೆಚ್ಚು ಆಳಕ್ಕ ಬೀಳ್ತ ನಡದೀನಿ. ನನ್ನ ಪಾಲಿನ ದೇವರು ನೀವು.

**ನೀಲಲೋಚನೆ :** ಶರಣರೇ, ಇವಳು ಸೂಳೆ, ಇದು ಇವಳ ಕೂಸು. ಇದೀಗ ಹುಟ್ಟಿದ ಈ ಹಸುಳೆ ಶರಣರಲ್ಲಿ ತನಗೂ ತನ್ನ ತಾಯಿಗೂ ಸಾಮಾಜಿಕ ನ್ಯಾಯ ಕೇಳ್ತದ (ಅಳುತ್ತದೆ). ಹೇಳಿ, ಹೇಳಿ ಇದಕ್ಕ ಸಾಮಾಜಿಕ ನ್ಯಾಯ ಏನು ?

**ಮಾಚಿದೇವ :** ಮತ್ತೇನು ? ಇನ್ನು ಮ್ಯಾಲ ಇವಳು ಶರಣೆ, ಇದು ಶರಣಶಿಶು.

**ಬಸವಣ್ಣ :** ಹಾಂ!

**ಮಾಚಿದೇವ ;** ಈ ಅನುಭವಮಂಟಪ ಕೇವಲ ವಿಚಾರ ಚರ್ಚೆಯ ಕೇಂದ್ರ ಅಲ್ಲ, ಆಚಾರಗಳ ಅನುಷ್ಠಾನ ಮಂದಿರ. ಇದು ಯುವಶರಣರ ತತ್ವನಿಷ್ಠೆ ಪರೀಕ್ಷಿಸುವ ಪ್ರಸಂಗ. ಈ ಹತಭಾಗಿನಿಯನ್ನು ಹೆಂಡತಿ ಅಂತ, ಈ ಅನಾಥ ಶಿಶುವನ್ನು ಮಗ ಅಂತ ಸ್ವೀಕರಿಸಲು ಯಾರು ಸಿದ್ಧರಿದ್ದೀರಿ? ಹೇಳಿ, ಹೇಳಿ.

**ಯುವಶರಣ :** (ತಟ್ಟನೆ ಎದ್ದು ಮುಂದೆ ಬಂದು ) ನಾನು ಸಿದ್ಧ ಇದ್ದೀನಿ. ದಾಸೀ ಪುತ್ರವಾಗಲಿ, ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಶರಣರೇ. ಇವಳಿಗೆ ಒಪ್ಪಿಗಿ ಇದ್ದರ ನಾನು.....

**ನೀಲಲೋಚನೆ ;** ಮಗಳೇ ನಿನಗೆ ಒಪ್ಪಿಗೆಯೇ ?

**ಸೂಳೆ :** ತಾಯಿ, ಇದಕ್ಕಿಂತ ದೊಡ್ಡ ಭಾಗ್ಯ ಏನದ. (ಗಂಗಾಂಬಿಕೆ ಬಂದು ಅವಳ ಹಣೆಗೆ ವಿಭೂತಿ ಹಚ್ಚುತ್ತಾಳೆ. ಯುವಕ ಬಂದು ಕೈ ಹಿಡಿಯುತ್ತಾನೆ).



**ಸೂಳೆ :** (ಬಸವಣ್ಣನನ್ನು ಕುರಿತು) ಅಣ್ಣಾ, ಕಲ್ಯಾಣ ಕೈಲಾಸ ಆಗ್ತಿರೂದಕ್ಕ ಇದಕ್ಕಿಂತ ದೊಡ್ಡ ಉದಾಹರಣೆ ಯಾವುದದ ? ದರಿದ್ರರು ಕಾಯಕದಿಂದ ಧನಿಕರಾದ ಪವಾಡ ಮಾಡಿದ ನೀನು, ಸೂಳೆಯಾದ ನನ್ನನ್ನು ಸತಿಯಾಗಿಸಿದುದು ಇನ್ನೊಂದು ಪವಾಡ. ನೀನು ನನ್ನ ಪಾಲಿನ ಪರಮಾತ್ಮ.

**ಬಸವಣ್ಣ :** ತಾಯಿ, ನಿನ್ನ ಹಣೆಯಲ್ಲಿ ವಿಭೂತಿ, ಮುಖದಲ್ಲಿ ನಗೆ ಕಂಡ ಪುಣ್ಯ ನನ್ನದಾಯಿತು.

**ಮಾಚಿದೇವ ;** ಈ ಕ್ರಿಯೆ ಇಲ್ಲಿಗೇ ನಿಲ್ಲಬಾರದು. ಇಂಥವರು ವೇಶ್ಯಾಸ್ತ್ರೀಯರಾಗಲು ಸಮಾಜವೇ ಕಾರಣ. ಈಗ ಸಮಾಜವೇ, ಅಂದರೆ ಸಮಾಜದ ಭಾಗವಾಗಿರುವ ನಾವೇ ಈಗ ಆ ತಪ್ಪ ತಿದ್ದಬೇಕು. ಇಂಥ ಪಣ್ಯಸ್ತ್ರೀಯರು ಪುಣ್ಯಸ್ತ್ರೀಯರಾಗಿ ತಲೆಯೆತ್ತಿ ಬಾಳೂ ಹಾಂಗ ಮಾಡಬೇಕು. ("ಇದಕ್ಕ ನಾವು ಸಿದ್ಧರಿದ್ದೇವೆ" ಎಂದು ಯುವಶರಣರು ಸಾರುತ್ತಾರೆ).

## ದೃಶ್ಯ -೩೩

(ದೇವಾಲಯದ ಕಟ್ಟೆಯ ಮೇಲೆ ಕುಳಿತು, ವೀಳ್ಯೆ ಅಗೆಯುತ್ತ ಮಾತುಕತೆ).

**ಪುರೋಹಿತ :** ಈ ಬಸವಣ್ಣ ಭಂಡಾರಮಂತ್ರಿಯಾದದ್ದು ನಮಗ ದೊಡ್ಡ ಶಾಪ ಆಗಿ ಪರಿಣಮಿಸಿತು. ಶಿವಶಿವಾ.

**ಶಿವಾಚಾರ್ಯ :** ನಮಗಷ್ಟೇ ಯಾಕ ? ಸ್ವತಃ ಬಿಜ್ಜಳ ರಾಜನಿಗೂ. ಈಗ ಪ್ರಜಾಶಕ್ತಿ ಒಂದು ಕಡೆ, ರಾಜಶಕ್ತಿ ಇನ್ನೊಂದು ಕಡೆ ಎಂಬಂಥ ಪರಿಸ್ಥಿತಿ ನಿರ್ಮಾಣಾಗ್ತಾ ಅದ. ಬಿಜ್ಜಳಗ ತಿಳೀಲಿಲ್ಲ. ಇವನಿಗಿ ಭಂಡಾರಮಂತ್ರಿ ಮಾಡೂದ ಬಿಟ್ಟು, ಬೇರೆ ಮಂತ್ರಿ ಮಾಡಿದ್ದರ ಈ ಪರಿಸ್ಥಿತಿ ನಿರ್ಮಾಣ ಆಗತಿರಲಿಲ್ಲ. ದೀನರು ದಲಿತರು ಹೋಗಲಿ, ಹೊಲೆಯರಾದರೂ ಹದ್ದುಬಸ್ತಿನಲ್ಲಿರ್ತಿದ್ರು (ವೀಳ್ಯ ಉಗುಳುತ್ತಾನೆ).

**ಪುರೋಹಿತ :** ಈ ಮೊದಲ ಹೊಲಗೇರಿಗಿ ಹೋಗಿ ಊಟ ಮಾಡಿ ಬಂದ ಬಸವಣ್ಣ, ಮೊನ್ನೆ ಲಿಂಗದೀಕ್ಷೆ ಹೊಂದಿದ್ದ ಯಾವನೋ ಹುಡುಗನೊಂದಿಗೆ ಸೂಳೆಯ ಮದುವೆ ಮಾಡಿಸಿದನಂತ!

**ಶಿವಾಚಾರ್ಯ :** ಕೇಳಿಲ್ಲೇನು ? ಗಂಡ ಸತ್ತ ಹೆಂಗಸರು ಚಿತಾಪ್ರವೇಶ ಮಾಡೂದನ್ನ ನಿಲ್ಲಿಸ್ಯಾನ. ವಿಧವಾ ವಿವಾಹನೂ ಮಾಡಿಸ್ತಾ ಇದ್ದಾನ.

**ಪುರೋಹಿತ :** ಏನು ಕೆಟ್ಟ ಕಾಲ! ರಾಜ್ಯಕ್ಕ ಅಪಶಕುನಗಳಿವು. ನಾವು ಜಾತಿಗಳನ್ನು ಪರಸ್ಪರ ಎಷ್ಟು ದೂರ ಇಡಬೇಕೆನ್ನುತಿವೋ, ಇವನು ಅಷ್ಟು ಹತ್ತಿರ ತರ್‍ತಾ ಇದ್ದಾನ.

**ಶಿವಾಚಾರ್ಯ :** ಹೌದು, ಈಗ ಹೊಲೇರು ನಮ್ಮ ಮಠಗಳ ಮುಂದ ನಿರ್ಭೀತಿಯಿಂದ ತಿರುಗಾಡ್ತಾ ಇದ್ದಾರ.

**ಪುರೋಹಿತ :** ನಮ್ಮನ್ನ ಕಂಡ ಕೂಡಲೇ ನೆಲಕ್ಕ ಹಣಿ ಹಚ್ಚತಿದ್ದ ಈ ಸೂಳಿಮಕ್ಕಳು, ಈಗ ತಲಿಯೆತ್ತಿ ತಿರಗ್ತಾರ. ಗಂಡಸರ ಹಾಂಗ ಹೆಂಗಸರೂ ಧಾರ್ಮಿಕ ಲಾಂಛನಗಳಾದ ಲಿಂಗ ವಿಭೂತಿ ಧರಸ್ತಾರ (ವೀಳ್ಯ ಉಗುಳುತ್ತಾನೆ).

**ಶಿವಾಚಾರ್ಯ :** ವಂಶಪರಂಪರೆಯಿಂದ ಜೀತದಾಳಾಗಿದ್ದ, ಕೂಲಿಗಾಗಿ ಕಾಲ ಹಿಡೀತಿದ್ದ ಹೊಲೆಮಾದಿಗರು ಈಗ ತಮ್ಮದs ಹೊಲ, ತಮ್ಮದs ವೃತ್ತಿ ಅವಲಂಬಿಸಿದ ಕಾರಣ, ಕೂಲಿ ಆಳs ಸಿಗತಾ ಇಲ್ಲ. ಇದೆಲ್ಲ ಬಸವಣ್ಣನ ಸಹಾಯ-ಸಹಾನುಭೂತಿಯ ಫಲ.

**ಪುರೋಹಿತ :** ಪಾಪ, ಗುರುಗಳಾದ ನಿಮಗ, ಪುರೋಹಿತರಾದ ನಮಗ ಸಹಾಯ ಮಾಡೂದು ಬಿಟ್ಟು, ಈ ಬಸವಣ್ಣ ರೈತರ ಕಂದಾಯ ಈ ವರ್ಷ ಅರ್ಧದಷ್ಟು ಕಡಿಮಿ ಮಾಡ್ಯಾನಂತ.

**ಶಿವಾಚಾರ್ಯ :** ಏನು ? ಅರ್ಧದಷ್ಟು ಕಂದಾಯ ಕಡಿಮಿ ಮಾಡಿದರ ಆರ್ಥಿಕವಾಗಿ ರಾಜ್ಯ ನಡೆಸೂದಾದರೂ ಹ್ಯಾಂಗ ?

**ಪುರೋಹಿತ :** ಪ್ರಜೆಗಳಲ್ಲಿ ಕಾಯಕ- ದಾಸೋಹಪ್ರಜ್ಞೆ ಜಾಗೃತವಾಗಿ "ದುಡಿಮೆ ಹೆಚ್ಚು ಸಂಗ್ರಹ ಕಡಿಮೆ" ಧೋರಣೆ ಬೆಳೆದು, ಬೊಕ್ಕಸ ಭಾಳ ಬೆಳದಾದಂತ ಜನ ಮಾತನಾಡಿಕೊಳ್ತಿದ್ದಾರ.

**ಶಿವಾಚಾರ್ಯ :** ಹೀಗೇನು ?

**ಪುರೋಹಿತ :** ಅದ್ಯಾಕ, ಜನರಿಗೆ ಹಂಚಿ ಬಸವಣ್ಣ ಬೊಕ್ಕಸ ಬರಿದು ಮಾಡ್ಯಾನ ಅನ್ನೂ ಆರೋಪದ ನ್ಯಾಯವಿಚಾರಣೆ ನಡದು, ಕೊನಿಗೆ ಅವನು ನಿರ್ದೋಷಿ ಅಂತ ಸಿದ್ಧಾಯ್ತು. ಭಂಡಾರ ಎರಡು ಪಟ್ಟು ಬೆಳೆದದ್ದು ಸಾಬೀತಾಗಿ ವಿರೋಧಿಗಳ ಮಾರಿ ಪೆಚ್ಚಾಯ್ತು.

**ಶಿವಾಚಾರ್ಯ :** ಅಂದರ, ಭಂಡಾರ ಬೆಳದದ್ದು ಬಿಜ್ಜಳಗ ಗೊತ್ತಿರಲಿಲ್ಲೇನು ?

**ಪುರೋಹಿತ :** ಗೊತ್ತಿತ್ತು, ಆದರೆ ಬಿಜ್ಜಳಗ ಇದು ಮುಖ್ಯ ಅಲ್ಲ. ಭಂಡಾರ ರಾಜನದಲ್ಲ, ಪ್ರಜೆಗಳದು ಅನ್ನೂದು ಅವನಿಗಿ ನುಂಗಲಾರದ ತುತ್ತಾಗ್ಯಾದ.

**ಶಿವಾಚಾರ್ಯ :** ಅಯ್ಯೋ, ಕೃಷಿಕರಿಗಿ, ಕೂಲಿಕಾರರಿಗಿ ಭಂಡಾರ ಬಳಸೂ ಬಸವಣ್ಣ ನಮಗಾಗಿ ಯಾಕ ಬಳಸ್ತಿಲ್ಲ. ದೇವರೇ.

**ಪುರೋಹಿತ :** ನಾವು ದೇವರು, ಭೂಮಿಯ ಮೇಲಿನ ದೇವರು - ನಮ್ಮ ಶಾಪ ಅವನಿಗಿ ತಟ್ಟದೇ ಹೋಗೂದಿಲ್ಲ.

**ಶಿವಾಚಾರ್ಯ :** ಶಾಪ ಅಂತ, ಶಾಪ. ನಿಮ್ಮ ಶಾಪ ಬಸವಣ್ಣನಂಥವರಿಗೆ ತಟ್ಟೂದಿಲ್ಲ.

**ಪುರೋಹಿತ :** ಯಾಕ ತಟ್ಟೂದಿಲ್ಲ ?



**ಶಿವಾಚಾರ್ಯ :** ಯಾಕ ತಟ್ಟಬೇಕು ? ಬಸವಣ್ಣ ನಿಮ್ಮ ವರ್ಣಭೇದಪದ್ಧತಿ ವಿರೋಧಿಸೂದು ನ್ಯಾಯ ಅಲ್ಲವೇ?

**ಪುರೋಹಿತ :** ನೂರಕ್ಕೆ ನೂರು ನ್ಯಾಯ. ಆದರs ಮೊದಲಿನಿಂದ ನಡೆದು ಬಂದ ಈ ಪದ್ಧತಿ ಬಿಡಲು ಹ್ಯಾಂಗ ಸಾಧ್ಯ ? ಒಂದು ವೇಳೆ ಬಿಟ್ಟರ ನಮ್ಮ ಗತಿ ? (ಊಟದಂತೆ ಕೈ ಮಾಡುತ್ತಾನೆ). ನಮ್ಮದಿರಲಿ, ಅವನು ನಿಮ್ಮ ದೇವಾಲಯ, ಮಠ ವಿರೋಧಿಸೂದು ನ್ಯಾಯವಲ್ಲವೇ ?

**ಶಿವಾಚಾರ್ಯ :** ನೂರಕ್ಕೆ ನೂರು ನ್ಯಾಯ. ಆದರೆ ಮೊದಲಿನಿಂದಲೂ ಬೆಳೆದು ಬಂದ ಈ ದೇವಾಲಯ ಸಂಸ್ಕೃತಿ, ಮಠಸಂಸ್ಕೃತಿ ಬಿಟ್ಟುಕೊಡಲು ಹೇಗೆ ಸಾಧ್ಯ? ಬಿಟ್ಟರ ನಮ್ಮ ಗತಿ? (ಊಟದಂತೆ ಕೈ ಮಾಡುತ್ತಾನೆ).

**ಪುರೋಹಿತ :** ಅಯ್ಯೋ, ಆಗಮಿಕ ಬ್ರಾಹ್ಮಣನಾಗಿ ಹುಟ್ಟಿ, ವೈದಿಕ ಬ್ರಾಹ್ಮಣ್ಯ ನಾಶಮಾಡಹತ್ತಿದ, ಈ ಬಸವಣ್ಣ (ಉಗುಳುತ್ತಾನೆ).

**ಶಿವಾಚಾರ್ಯ :** ಅಯ್ಯೋ ಆಗಮಿಕ ಬ್ರಾಹ್ಮಣನಾಗಿ ಹುಟ್ಟಿ, ಆಗಮಿಕ ಬ್ರಾಹ್ಮಣರಾದ ನಮ್ಮನ್ನೇ ನಾಶಮಾಡಹತ್ತಿದ, ಈ ಬಸವಣ್ಣ. ಕೊಡಲಿ ಕಾವು ಕುಲಕ್ಕೆ ಮೂಲ. (ಉಗುಳುತ್ತಾನೆ).

**ಇಬ್ಬರು :** ಅಂತೂ ಬಸವಣ್ಣನಿಂದಾಗಿ ನಮಗ ಉಳಿಗಾಲ ಇಲ್ಲ.

## ದೃಶ್ಯ - ೩೪

(ಅನುಭವ ಮಂಟಪ)

**ಮಾಚಿದೇವ :** ಶರಣರೇ, ಕುಂತಳ ನಾಡು ಆದರ್ಶ ಪ್ರಾಂತವಾಗಿ ರೂಪಗೊಳ್ತಾ ಅದ. ನಮ್ಮ ಆಂದೋಲನದಿಂದಾಗಿ ಲಿಂಗಭೇದ, ವರ್ಣಭೇದ, ವರ್ಗಭೇದರಹಿತ ಮುಕ್ತ ಸಮಾಜವೊಂದು ಉದಯಿಸ್ತಾ ಅದ. ಅನ್ಯ ಪ್ರಾಂತಗಳಲ್ಲಿ ರಾಜಸತ್ತೆ, ಪುರೋಹಿತಸತ್ತೆಗಳಿಂದ ಬ್ಯಾಸತ್ತವರು ಮುಕ್ತವಾತಾವರಣದಾಗ ಬದುಕೂದಕ್ಕಾಗಿ ಇಲ್ಲಿಗಿ ಧಾವಿಸ್ತಾ ಇದ್ದಾರ. ಇದರಿಂದಾಗಿ ಶರಣ ಸಮಾಜಕ್ಕ ವಿಸ್ತಾರ, ವೈವಿಧ್ಯ ಪ್ರಾಪ್ತವಾಗ್ತ ನಡದದ.

**ನೀಲಲೋಚನೆ :** ಹೌದು, ಸಮಾಜ ಅನೇಕತೆಯಿಂದ ಏಕತೆಯತ್ತ ಧಾವಿಸಲು ಪ್ರಾರಂಭಿಸ್ಯಾದ. ಜೈನಧರ್ಮದ ಮನುಮುನಿ ಗುಮ್ಮಟದೇವ, ನಾಥಪಂಥದ ಗೋರಕ್ಷ ಮೊದಲಾದವರು ದೊಡ್ಡ ಪ್ರಮಣದಾಗ ಬಂದು ಸೇರ್‍ಯಾರ. ಪಾಶುಪತ, ನಕುಲೀಶ, ಮಹಾವ್ರತಿ, ಶುದ್ಧಶೈವರು ಇನ್ನೂ ದೊಡ್ಡ ಪ್ರಮಾಣದಲ್ಲಿ ಒಳಗ ಬಂದಾರ. ಕೆಳವರ್ಣದವರಂತೂ ದಿನಾಲೂ ಒಳಗ ಸೇರತಿದ್ದಾರ. ಹೀಗಾಗಿ ವರ್ಣಭೇದ ಹುಸಿ ಕಲ್ಪನೆ ಅಂತ ಜನರಿಗಿ ಮನವರಿಕ್ಯಾಗ್ಯಾದ.

**ಮಾಚಿದೇವ :** ಮನವರಿಕೆ ಯಾಕ? ಇದಕ್ಕ ದೊಡ್ಡ ನಿದರ್ಶನ ಅನಿಸೂ ಮದುವಿಯೊಂದು ಇಂದು ಇಲ್ಲಿ ಜರುಗಲಿದೆ.

**ಬಸವಣ್ಣ :** ಯಾರ ಮದುವಿ ?

**ಮಧುವಯ್ಯ :** ನನ್ನ ಮಗಳ ಮದುವಿ. ಇವಳನ್ನು ಶರಣ ಹರಳಯ್ಯನ ಮಗನಿಗಿ ಕೊಡಲು ನಾವು ನಿಶ್ಚಯಿಸೀನಿ.

**ಹರಳಯ್ಯ :** ಇದಕ್ಕ ನಾನೂ ಒಪ್ಪೀನಿ.

**ಶರಣರು :** ಇದು ನಮಗ ಸಂತೋಷದ ಅಷ್ಟೇ ಅಲ್ಲ, ಹೆಮ್ಮೆಯ ಘಟನೆಯೂ ಆಗ್ಯಾದ. ಇದಕ್ಕ ನಮ್ಮ ಸಮ್ಮತಿ ಅದ.

**ಬಸವಣ್ಣ :** ಈ ಮದುವಿ ಜರುಗಿದ್ರೇ ಆದರ, ಜಗತ್ತಿನ ಇತಿಹಾಸದಲ್ಲೇ ಇದು ಮೊದಲ ಉದಾಹರಣೆಯಾಗ್ತದ.

**ಶರಣರು :** ಜರುಗಿದ್ರೇ ಆದರ..... ಯಾಕ ? ಈಗ ಮಧುವಯ್ಯ ಬ್ರಾಹ್ಮಣನಲ್ಲ, ಹರಳಯ್ಯ ಶೂದ್ರನಲ್ಲ, ಇಬ್ಬರೂ ಶರಣರು. ಶರಣರ ರಕ್ತಸಂಬಂಧದಲ್ಲಿ ತಪ್ಪೇನದ ?

**ಬಸವಣ್ಣ :** ತಪ್ಪೇನೂ ಇಲ್ಲ. ಮದುವಿs ವಿಷಯದಲ್ಲಿ ನಾವು ಈಗಾಗಲೇ ಸುಧಾರಣೆ ಆರಂಭಿಸೀವಿ. ಇದು ದೊಡ್ಡ ಸುಧಾರಣೆ.

**ಮಾಚಿದೇವ :** ಹೌದು, ಬಸವಣ್ಣಾ, ಈ ವರೆಗೆ ಕೆಲವೊಮ್ಮೆ ಹೆಂಡತಿದು ಒಂದು ಧರ್ಮಾಚರಣೆ, ಗಂಡನದು ಇನ್ನೊಂದು ಧರ್ಮಾಚರಣೆಯಾಗಿತ್ತು. ಇದರಿಂದಾಗಿ ಆ ಕುಟುಂಬಗಳ ದಾಂಪತ್ಯ ಅಶಾಂತಿಯಿಂದ ತುಂಬಿ ಹೋಗಿತ್ತು. ಆದರ ದಂಪತಿಗಳದು ಒಂದೇ ಧರ್ಮಾಚರಣೆಯಾಗಬೇಕೆಂಬ ನಮ್ಮ ಸಿದ್ಧಾಂತದಿಂದಾಗಿ, ಅವರಲ್ಲಿ ಒಂದೇ ಮನೋಧರ್ಮ ರೂಪಗೊಂಡು, ಮನೆಗಳು ಮಹಾಮನಿಗಳಾಗ್ತಾ ನಡದಾವ.

**ಹರಳಯ್ಯ :** ಹೌದು. "ಗಂಡ ಶಿವಲಿಂಗದೇವರ ಭಕ್ತ. ಹೆಂಡತಿ ಮಾರಿ ಮಸಣಿಯ ಭಕ್ತೆ. ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ-ಮಾಂಸ, ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ ಹೆಂಡದ ಮಡಕೆಯ ಹೊರಗೆ ತೊಳೆದಂತೆ". ಹೀಗಾಗಬಾರದೆಂಬ ಬಸವಣ್ಣನವರ ವಚನ ಆಚರಣೆಗೆ ಬಂದು, ಆದರ್ಶ ದಾಂಪತ್ಯಗಳು ಅಸ್ತಿತ್ವಕ್ಕ ಬರತೊಡಗ್ಯಾವ.

**ಮಾಚಿದೇವ :** ಸಧ್ಯ ಜರುಗಲಿರುವ ಮದುವಿ ಇನ್ನೊಂದು ಪ್ರಯೋಗ. ನಾಗಿಮಯ್ಯನ ಮನೆಯಲ್ಲಿ ನೀವು ಊಟ ಮಾಡುವ ಮೂಲಕ ಅಂತ್ಯಜರ ಕೃತಕ ಕನಿಷ್ಠತೆಯನ್ನು ಕೆಡವಿದ ನಾವು, ಈ ಮದುವಿ ಮೂಲಕ ಬ್ರಾಹ್ಮಣರ ಕೃತಕ ಶ್ರೇಷ್ಠತೆಯನ್ನು ಕೆಡವೂದು ನ್ಯಾಯವೇ ಆಗ್ಯಾದ.



**ಬಸವಣ್ಣ :** ನಿಜ. ಆದರ ಈವರೆಗಿನ ಮದುವಿಗಳೇ ಬ್ಯಾರೆ, ಇದೇ ಬ್ಯಾರೆ. ಇದು ಯಾವ ಯಾವುದೋ ಮೇಲು ವರ್ಣಗಳ ನಡುವಿನ ಮದುವಿ ಅಲ್ಲ, ಮೇಲುವರ್ಣ- ಕೆಳವರ್ಣಗಳ ಮದುವಿ. ಬ್ರಾಹ್ಮಣ-ಶೂದ್ರ ಇವು ಸಮಾಜದ ಎರಡು ತುದಿಗಳು. ವರ್ಣವಾದಿಗಳು ಈ ಮದುವಿ ಹ್ಯಾಂಗ ಸ್ವೀಕರಿಸತಾರೋ ನೋಡಬೇಕು. ವರ್ಗವಾದಿ ಬಿಜ್ಜಳ ಈಗಾಗಲೇ ಅಸಹನೆಯಿಂದ ಉರೀತಾನ. ಅವನೊಂದಿಗೆ ಈ ವರ್ಣವಾದಿಗಳು ಸೇರಿಕೊಂಡು ನಮ್ಮನ್ನು ಅಪರಾಧಿ ಸ್ಥಾನದಾಗ ನಿಲ್ಲಿಸಬಹುದು.

**ಮಧುವಯ್ಯ :** ನೀವು ಹೇಳುವ ಎಲ್ಲ ಅಪಾಯ ಊಹಿಸಿಕೊಂಡೇ ಎರಡೂ ಕುಟುಂಬದವರು ಈ ನಿರ್ಣಯಕ್ಕ ಬಂದೀವಿ. ತತ್ವ ಇರೂದು ಹೇಳಲಿಕ್ಕಲ್ಲ, ಬಾಳಲಿಕ್ಕ - ಎಂಬ ನಿಮ್ಮ ಮಾತ ನಂಬಿರುವ ನಮಗ, ಇದರಲ್ಲಿ ಏನೂ ತಪ್ಪ ಕಾಣಿಸೂದಿಲ್ಲ. "ಎಮ್ಮವರು ಬೆಸಗೊಂಡರೆ ಶುಭಲಗ್ನ" ಎಂಬ ನಿಮ್ಮ ವಚನವಾಣಿ ಆಚರಣೆಗಿಳಿಯಲಿ. ಶೀಲವಂತ, ನೀಲಾ ಬನ್ನಿರಿ. (ಇಬ್ಬರೂ ಸಭೆಯ ಮಧ್ಯೆ ಬಂದು ನಿಲ್ಲುತ್ತಾರೆ).

**ಬಸವಣ್ಣ :** ಪ್ರಮಾಣ ವಚನ ಸ್ವೀಕರಿಸಿರಿ.

**ಶೀಲವಂತ :** ನಾನು ನೀಲಾವತಿಯನ್ನು ಆತ್ಮಸಾಕ್ಷಿಯಾಗಿ, ಶರಣಸಮಾಜ ಸಾಕ್ಷಿಯಾಗಿ ಪತ್ನಿ ಅಂತ ಸ್ವೀಕರಿಸ್ತೀನಿ.

**ನೀಲಾವತಿ ;** ನಾನು ಶೀಲವಂತನನ್ನು ಆತ್ಮಸಾಕ್ಷಿಯಾಗಿ, ಶರಣಸಮಾಜ ಸಾಕ್ಷಿಯಾಗಿ ಪತಿ ಅಂತ ಸ್ವೀಕರಿಸ್ತೀನಿ. (ಹಾರ ವಿನಿಮಯ).

**ಬಸವಣ್ಣ ;** "ಉಭಯದೃಷ್ಟಿ ಏಕದೃಷ್ಟಿಯಲ್ಲಿ ಕಾಂಬಂತೆ, ದಂಪತಿ ಏಕಭಾವವಾಗಿ ನಿಂದಲ್ಲಿ ಗುಹೇಶ್ವರಲಿಂಗಕ್ಕೆ ಅರ್ಪಿತವಾಗಿತ್ತು" ಎಂಬ ಪ್ರಭುದೇವರ ವಚನೋಕ್ತಿಯ ಆದರ್ಶದಲ್ಲಿ ಬಾಳಿರಿ.

**ಶರಣರು :** ಶರಣದಂಪತಿಗಳಿಗೆ ಕಲ್ಯಾಣವಾಗಲಿ. ಜಾತ್ಯತೀತ ವಿವಾಹಕ್ಕೆ ಜಯವಾಗಲಿ. ("ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಧ್ಯೇಯವಾಕ್ಯ ಮತ್ತೆ ಮತ್ತೆ ಕೇಳಿಸುತ್ತದೆ).

## ದೃಶ್ಯ - ೩೫

(ಬಸವಣ್ಣನ ಮಹಾಮನೆ. ಹೊರಗೆ 'ಬಸವಣ್ಣನಿಗೆ ಧಿಕ್ಕಾರ', 'ಸನಾತನ ಪೀಠದ್ರೋಹಿಗೆ ಧಿಕ್ಕಾರ' ಫಲಕ ಎತ್ತಿ ಹಿಡಿದು ಮಾಹೇಶ್ವರರು ಕೂಗುತ್ತಿದ್ದಾರೆ. ಹಣೆಯ ಮೇಲೆ ವಿಭೂತಿ, ಕೊರಳಲ್ಲಿ ರುದ್ರಾಕ್ಷಿಗಳಿವೆ. ಮಾಚಿದೇವ ಅವಸರದಿಂದ ಬರುತ್ತಾನೆ).

**ಮಾಚಿದೇವ :** ಬಸವಣ್ಣಾ, ಹೊರಗ ಲಕುಲೀಶಪಂಡಿತ ವಾಮದೇವಶಿವಾಚಾರ್ಯ ಮೊದಲಾದ ಶಿವಾಚಾರ್ಯರ ದೊಡ್ಡ ಗುಂಪು ನೆರದಾದ. ನಿನ್ನೆ ಅಲ್ಲಮನನ್ನು ನಾವು ಶೂನ್ಯಪೀಠಾಧಿಕಾರಿಯನ್ನಾಗಿ ಮಾಡಿದೆವು. ಅದನ್ನು ವಿರೋಧಿಸಿ, ಘೋಷಣೆ ಕೂಗತಿದ್ದಾರ.

**ಬಸವಣ್ಣ :** ಹೀಗೋ, ಇದನ್ನು ನಾನು ನಿರೀಕ್ಷಿಸಿದ್ದೆ. (ಅಷ್ಟರಲ್ಲಿ ವಾಮದೇವ ಶಿವಾಚಾರ್ಯ, ಲಕುಲೀಶಪಂಡಿತ ಮೊದಲಾದ ಶಿವಾಚಾರ್ಯರು ಒಳಗೆ ನುಗ್ಗುತ್ತಾರೆ). ಏನು ಆಚಾರ್ಯರೇ? ಧರ್ಮಪೀಠಗಳು ಕೆಟ್ಟ ಸರಕಾರದ ಹಾಂಗ ಜನರ ಶೋಷಣೆ ಮಾಡುವುದನ್ನು ಬಿಟ್ಟು, ಪ್ರಗತಿಪರ ವಿಚಾರಗಳ ವಾಹಕವಾಗಬೇಕು ಎಂಬ ವಾದ ನಾವು ಸಮಾಜದ ಮುಂದಿಟ್ಟೆವು. ಎಲ್ಲರೂ ಒಪ್ಪಿಕೊಂಡರು. ಶಿವಾಚಾರ್ಯರಾದ ನೀವು ಮಾತ್ರ ಒಪ್ಪಲಿಲ್ಲ.

**ವಾಮದೇವ ಶಿವಾಚಾರ್ಯ :** ಪೀಠಕ್ಕ ಬುದ್ಧಿ ಹೇಳಲು ನೀ ಯಾರು ? ಸಾವಿರ ವರ್ಷಗಳಿಂದ ಬಂದ ಪೀಠಸಂಪ್ರಾದಯ ನಾವ್ಯಾಕ ಬದಲಿಸಬೇಕು ?

**ಬಸವಣ್ಣ :** ಬಿಡಿರಿ, ನಿಮ್ಮ ಕಂದಾಚಾರಪೀಠ ನಿಮಗಿರಲಿ. ಈಗ ನಾವು ಅಸ್ತಿತ್ವಕ್ಕೆ ತಂದುದು 'ಜಾತಿಪೀಠ'ವಲ್ಲ. 'ಜ್ಞಾನಪೀಠ'. ನಮ್ಮ ಚಳುವಳಿಯಿಂದಾಗಿ ಒಂದು ಪರಿಪೂರ್ಣ ಜೀವನಸಿದ್ಧಾಂತ ರೂಪಗೊಂಡಾದ. ಅದನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಜವಾಬ್ದಾರಿಯುಳ್ಳ ಇಂಥ ಒಂದು ಪೀಠಪದ್ಧತಿ ನಮಗ ಅನಿವಾರ್ಯ ಆಗಿತ್ತು. ಕಾರಣ, ನಮ್ಮ ಪಾಡಿಗೆ ನಾವು ಈ ಪೀಠ ಅಸ್ತಿತ್ವಕ್ಕ ತಂದೀವಿ.

**ಲಕುಲೀಶ ಪಂಡಿತ :** ಆದರ ಈ ಪೀಠ ನಮ್ಮ ಪರಂಪರೆಗೆ ತೊಡಕಾಗ್ತದ.

**ಮಾಚಿದೇವ :** ಇದೆಲ್ಲಿಯ ಮಾತು ? ನಿಮಗೂ ನಮಗೂ ಎಲ್ಲಿಯ ಸಂಬಂಧ ?

**ವಾಮದೇವ ಶಿವಾಚಾರ್ಯ :** ತಲೆಹರಟೆ ಬೇಡ. ಕಳೆದ ೧೨ ವರ್ಷಗಳಿಂದ ಅದನ್ನು ಯಾರೂ ಏರದಂತೆ ಅಡ್ಡಿಪಡಿಸಿದ ನಾವು ಈಗಲೂ ಅಡ್ಡಿಪಡಿಸ್ತೀವಿ. ಶಿವಪರ ಪರ್ಯಾಯಪೀಠ ಸ್ಥಾಪಿಸಿದಂತಾಗಿ ಖಂಡಿತ ಇದು ನಮಗ ತೊಡಕಾಗ್ತದ.

**ಬಸವಣ್ಣ :** ಯಾವುದೇ ಜನಪರ ವಿಚಾರ ನಿಮ್ಮ ವ್ಯವಸ್ಥೆಗೆ ತೊಡಕಾಗತಿದ್ದರ ನಾವೇನು ಮಾಡಬೇಕು? ಅಲ್ಲಮ ಜ್ಞಾನಿ, ಶರಣಸಿದ್ಧಾಂತದ ಸಮರ್ಥವಾಹಕ.

**ಲಕುಲೀಶ ಪಂಡಿತ :** ಸಮರ್ಥನೋ, ಅಸಮರ್ಥನೋ ನಮಗ ಅದು ಮುಖ್ಯ ಅಲ್ಲ. ಯಾವ ದೇಶದವನೋ ಏನೋ, ಶೂದ್ರನು ಪೀಠವೇರುವ ಈ ಸಂಪ್ರದಾಯ ನಾವು ವಿರೋಧಿಸ್ತೀವಿ,

**ಬಸವಣ್ಣ :** ಲಕುಲೀಶಪಂಡಿತರೇ "ಜಂಗಮಕ್ಕ ಜಾತಿಯಿಲ್ಲ, ಗಂಗಿಗಿ ಹೊಲೆಯಿಲ್ಲ." ಜ್ಞಾನಕ್ಕೂ ಜಾತಿಗೂ ಸಂಬಂಧವಿಲ್ಲ. ದಾಸೀಪುತ್ರವಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದೇ ವಂದಿಸಬೇಕು -ಇದು ಶರಣ ಸಿದ್ಧಾಂತ.

**ವಾಮದೇವ ಶಿವಾಚಾರ್ಯ :** ಬೇರೆ ಸಾಮಾಜಗಳ ಪೀಠ ವ್ಯವಸ್ಥೆಯಲ್ಲಿ ಏನು ಬೇಕಾದರೂ ಮಾಡಿಕೋ. ಆದರ ನಮ್ಮ ಶಿವಪರ ಪೀಠವ್ಯವಸ್ಥೆಯ ವರೆಗೆ ಬರೂದಂದರ, ನಮ್ಮ ಧಾರ್ಮಿಕ ಅಧಿಕಾರವನ್ನೇ ಕಸಿದುಕೊಂಡ್ಹಾಂಗ. ಇದನ್ನು ನಾವು ಸಹಿಸೂದಿಲ್ಲ. ಶೈವ ಆಚಾರ್ಯ ವಂಶಸಂಭೂತರಾದ ನಾವೇ ಪೀಠವೇರೂ ಅಧಿಕಾರವುಳ್ಳ ಶುದ್ಧಜಂಗಮರು. ಯಾವುದೇ ಶಿವಪರ ಧಾರ್ಮಿಕ ಅಗ್ರಪೀಠ ಸಲ್ಲಬೇಕಾದುದು ನಮಗೇ.

**ಬಸವಣ್ಣ :** ಇನ್ನೊಮ್ಮೆ ಹೇಳತೀನಿ ಕೇಳಿ. ಜಂಗಮ ಅನ್ನೂದು ಜಾತಿವಾಚಿಯಲ್ಲ, ಜ್ಞಾನವಾಚಿ. ಸಾಮಾಜಿಕವೇ ಇರಲಿ, ಧಾರ್ಮಿಕವೇ ಇರಲಿ, ಎಲ್ಲ ಹಂತಗಳಲ್ಲಿಯೂ **ಜಾತಿಯನ್ನು ನಿರಾಕರಿಸಿ ಜ್ಞಾನ ಎತ್ತಿಹಿಡಿಯುವುದು ನಮ್ಮ ಧ್ಯೇಯ.** ("ಇದನ್ನು ನಾವು ವಿರೋಧಿಸತೀವಿ, ಪ್ರತಿಭಟಿಸತೀವಿ" ಎನ್ನುತ್ತ ಕೆಲವು ಮಾಹೇಶ್ವರರು ಕುಳಿತುಕೊಳ್ಳುತ್ತಾರೆ).

**ಮಾಚಿದೇವ :** ನೀವು ಹೀಂಗ ಹಟ ಹಿಡಿದರ ಏನೂ ಪ್ರಯೋಜನವಾಗೂದಿಲ್ಲ. ಪ್ರಭುದೇವ ಕೇವಲ ಜಂಗಮನಲ್ಲ, ಮಹಾಜಂಗಮ. ಅವನಲ್ಲದ ಮತ್ತಾರು ಈ ಪೀಠಕ್ಕ ಅರ್ಹರು ?

**ಲಕುಲೀಶ ಪಂಡಿತ :** ಹೀಗೋ. (ಬಸವಣ್ಣನನ್ನು ಉದ್ದೇಶಿಸಿ) ಬಸವಣ್ಣಾ, ಇನ್ನೊಮ್ಮೆ ವಿಚಾರಿಸು. ನೀನು ಜಂಗಮ ಪರಿಕಲ್ಪನೆ ಇಷ್ಟು ದೂರ ಒಯ್ಯೂದರಿಂದ ದೊಡ್ಡ ಸಮಸ್ಯೆ ಉದ್ಭವಿಸ್ತದ.

**ಬಸವಣ್ಣ :** ನೀವು ಬಡಿಗಿ ಬಳಸಿ ಘಟ್ಟಿವಾಳಯ್ಯನನ್ನು ಮಾರಣಾಂತಿಕವಾಗಿ ಹಿಂಸಿಸಿದಾಗಲೇ 'ಸಮಸ್ಯೆ' ಉದ್ಭವ ಆಗ್ಯಾದ. **ಸತ್ಯದ ದಾರ್‍ಯಾಗ ಮುಂದಿಟ್ಟ ಹೆಜ್ಜೆ ಹಿಂದಿಡಲು ನನಗ ಆಗೂದಿಲ್ಲ.**

**ವಾಮದೇವ ಶಿವಾಚಾರ್ಯ ;** ಈ ನಿನ್ನ ಧೋರಣೆ ಕಲ್ಯಾಣ ಹಾಳಾಗಲು ಕಾರಣವಾದೀತು. ಬಸವಣ್ಣಾ, ಕೆಟ್ಟೀತು ಕಲ್ಯಾಣ, ಹಾಳಾದೀತು ನೋಡು, ನಿನ್ನ ಈ ಹೊಸ ರೀತಿಯ ಜಂಗಮದ ಅಭಿಮಾನದಿಂದ.

**ಬಸವಣ್ಣ :** ಹಾಳಾದರ ಇಂಥ ಹತ್ತು ಕಲ್ಯಾಣ ಕಟ್ಟಬಹುದು. ನನಗೆ ಮುಖ್ಯವಾದುದು ಜನಕಲ್ಯಾಣ. ನಾನು ಮಾತ್ರ ಜಾತಿಜಂಗಮ ಪೀಠಪರಂಪರೆ ಕೆಡವಿ, ಜ್ಞಾನಿಜಂಗಮ ಪೀಠಪರಂಪರೆ ಬೆಳೆಸ್ತೀನಿ.

**ಲಕುಲೀಶ ಪಂಡಿತ :** ಎಲ್ಲ ಕಾಲಕ್ಕೂ ಅಲ್ಲಮನಂಥವರು ಎಲ್ಲಿ ಸಿಗತಾರ ? ಅಧಿಕಾರ ಅನ್ನೂದು ಬಹಳ ಸೂಕ್ಷ್ಮ. ಸ್ವಾರ್ಥ ಯಾರಿಗೂ ಬಿಟ್ಟಿಲ್ಲ. ಕಾಲಕ್ರಮದಲ್ಲಿ ನಿನ್ನವರೇ ಈ ಪೀಠವನ್ನು ಸಂಕುಚಿತ ಅರ್ಥದಾಗ ಬೆಳೆಸ್ತಾರ.

**ಬಸವಣ್ಣ :** ನೀವು ಹೇಳುವುದೇನು ಬಂತು ? ಇದನ್ನು ನಾನು ಈ ಮೊದಲೇ ಊಹಿಸೀನಿ. ಚಳಿಗಾಲದಲ್ಲಿ ಹೆಪ್ಪುಗಟ್ಟುವುದೂ, ಬೇಸಿಗೆ ಕಾಲದಲ್ಲಿ ಕರಗಿ ಹರಿಯುವುದೂ ನೀರಿನ ಗುಣಧರ್ಮ. ಅದೇ ರೀತಿ ಕರ್ಮದಿಂದ ಸ್ಥಗಿತಗೊಳ್ಳೂದೂ ಧರ್ಮದಿಂದ ಚಲನಶೀಲಗೊಳ್ಳೂದೂ ಸಮಾಜದ ಲಕ್ಷಣ. ಮುಂದ ಸ್ಥಗಿತಗೊಳ್ಳತಾದಂತ ಇಂದು ಅದನ್ನು ಚಲನಶೀಲಗೊಳಿಸದೆ ಬಿಡಬಾರದು. ಆಗಾಗ ಚಲನಶೀಲಗೊಳಿಸೂ ಪ್ರಯೋಗ- ಪ್ರಯತ್ನಗಳು

ನಡೆಯಲೇಬೇಕು. ಅದಕs ನಾವು ನಿಮ್ಮಂಗ ಧರ್ಮಗ್ರಂಥ ರಚಿಸಿಲ್ಲ. ವಚನಗಳಲ್ಲಿ ಬೀಜ ಮಾತ ಹೇಳೀವಿ. ನಮ್ಮ ಜನ ಇವುಗಳಿಗೆ ಸಮಕಾಲೀನ ಸಂಸ್ಕಾರ ಕೊಡತಾ ಹೋಗತಾರ. ಪೂರ್ಣಧರ್ಮವಾಗಿರುವ ಇದನ್ನು ಪೂರ್ಣದಿಂದ ಪೂರ್ಣಕ್ಕ ಮುನ್ನಡಸ್ತಾರ.

**ವಾಮದೇವ ಶಿವಾಚಾರ್ಯ :** ಅಂಥ ಮಹಾತ್ಮರು ಮತ್ತೆ ಮತ್ತೆ ಹುಟ್ಟಲಾರರು.

**ಬಸವಣ್ಣ :** ವ್ಯಕ್ತಿ- ಸಮಾಜಗಳ ಸ್ಥಗಿತತೆಗೆ ಅವಕಾಶ ಕೊಡದ ರೀತಿಲ್ಲಿ ನಮ್ಮ ಸಿದ್ಧಾಂತ ರೂಪಿಸೀವಿ. ಹೀಗಾಗಿ ಮುಂದೆಯೂ ನಮ್ಮ ಜನ, ಸಮಾಜವನ್ನು ಸ್ಥಗಿತ ರೀತಿಯಲ್ಲಿ ಬೆಳಸೂದಿಲ್ಲ. ಅಂತ ನಂಬೀನಿ.

**ವಾಮದೇವ ಶಿವಾಚಾರ್ಯ :** ( ನಿರ್ಗಮನ ಸ್ಥಿತಿಯಲ್ಲಿ ನಿಂತು) ಅವರು ಹಾಂಗ ಬೆಳಸಲಿ, ಬಿಡಲಿ. ಕ್ರಮೇಣ ನಿನ್ನ ಈ ಜಂಗಮಪೀಠ ಜಾತಿ ಜಂಗಮಪೀಠವಾಗಿ ಪರಿವರ್ತನೆಗೊಳ್ಳೂ ಹಾಂಗ ನಾವ್ ನೋಡಿಕೊಳ್ತೀವಿ.

**ಎಲ್ಲರೂ :** ( ನಿರ್ಗಮನ ಸ್ಥಿತಿಯಲ್ಲಿ ಎದ್ದು ನಿಂತು) ನೀನು ಸತ್ತರೂ ನಿನ್ನನ್ನು, ನಿನ್ನ ಈ ಸಿದ್ಧಾಂತವನ್ನು ಶತಶತಮಾನಗಳಲ್ಲಿಯೂ ವಿರೋಧಿಸತೀವಿ. (ಎನ್ನುತ್ತ "ಬಸವಣ್ಣನಿಗೆ ಧಿಕ್ಕಾರ" "ಶಿವಾಚಾರ್ಯ ಪೀಠದ್ರೋಹಿಗೆ ಧಿಕ್ಕಾರ" ಎನ್ನುತ್ತ ಎಲ್ಲರೂ ಹೋಗುತ್ತಾರೆ)

## ದೃಶ್ಯ- ೩೬

(ಸ್ಥಾನಾಚಾರ್ಯರ ಮಠದಲ್ಲಿ ಸಭೆ. ಸ್ಥಾನಾಚಾರ್ಯರು, ಶಿಷ್ಯರು)

**ಲಕುಲೀಶ ಪಂಡಿತ :** ಬಸವಣ್ಣನ ಸಮಾಜಘಾತಕ ಕಾರ್ಯಗಳು ಒಂದರ ಮೇಲೊಂದು ಘಟಿಸ್ತ ನಡದಾವ. ಮೊನ್ನೆ ವಿಪ್ರರ ವರ್ಣವ್ಯವಸ್ಥೆಗೆ ಅವಹೇಳನ ಅನ್ನೂ ಹಾಂಗ ವೈದಿಕ ಬ್ರಾಹ್ಮಣ-ಅಂತ್ಯಜರ ಮದುವಿ ಜರುಗಿಸಿದ. ನಿನ್ನೆ ಹನ್ನೆರಡು ವರ್ಷಗಳ ನಮ್ಮ ವಿರೋಧವನ್ನೂ ಲೆಕ್ಕಿಸದೆ, ಧರ್ಮಪೀಠದ ಮ್ಯಾಲ ಜ್ಞಾನದ ಹೆಸರಿನ್ಯಾಗ ಒಬ್ಬ ಶೂದ್ರನ್ನ ಕುಳ್ಳಿರಿಸಿದ.

**ಶಿಷ್ಯ:** ಹೌದು ಬುದ್ಧೀ, ಹೊಲಗೇರ್‍ಯಾಗ ಊಟ ಮಾಡಿದಾಗಿನಿಂದ ಬಸವಣ್ಣನ ಮ್ಯಾಲ ಉರಿದೇಳ್ತಿದ್ದ ಬ್ರಾಹ್ಮಣರು, ಮೊನ್ನೆಯ ಹರಳಯ್ಯ - ಮಧುವಯ್ಯಗಳ ಮಕ್ಕಳ ಮದುವೆಯಿಂದ ಇನ್ನಷ್ಟು ಕೆರಳ್ಯಾರ. ಆದರ ಅಸಹಾಯಕರಾಗಿ ಕೈಚೆಲ್ಲಿ ಕುಳಿತುಬಿಟ್ಟಾರ.

**ವಾಮದೇವ ಶಿವಾಚಾರ್ಯ :** ಯಾಕ ಅಸಹಾಯಕರಾಗಬೇಕು ? ಅನ್ಯಾಯ ಗೆಲ್ಲಲು ಬಿಡಬಾರದು. ಅಲ್ಲಮನನ್ನು ಶೂನ್ಯಸಿಂಹಾಸನದ ಮ್ಯಾಲ ಕುಳ್ಳಿರಿಸಿದ ಸೇಡ ತೀರಿಸಿಕೊಳ್ಳಲು ಇದು ಒಳ್ಳೆಯ ಸಂದರ್ಭ. ಮದುವಿ ಘಟನೆಯಿಂದ ರೊಚ್ಚಿಗೆದ್ದಿರುವ ಬ್ರಾಹ್ಮಣರನ್ನೂ ಈಗ ಬಳಸಿಕೊಂಡು, ಬಸವಣ್ಣನ ಮ್ಯಾಲ ನಾವು ದೊಡ್ಡ ದಾಳಿ ಮಾಡಬೇಕು.



**ಶಿಷ್ಯ :** ಬ್ರಾಹ್ಮಣರು ಈ ಸಂದರ್ಭದಲ್ಲಿ ಸುಮ್ಮನಿದ್ದರೂ ನಾವು ಸುಮ್ಮನಿರಬಾರದು.

**ವಾಮದೇವ ಶಿವಾಚಾರ್ಯ :** ಹೌದು, ಈಗ ಬ್ರಾಹ್ಮಣರಿಗಿಂತ ದೊಡ್ಡ ಹಾನಿ, ನೇರವಾದ ಹಾನಿ ನಮಗಾಗ್ಯಾದ. ಇದನ್ನು ತಡೆಯೂದಕ್ಕಾಗಿ ಮದುವೆಯ ಅವಮಾನದಿಂದ ನರಳುತ್ತಲಿರುವ ಬ್ರಾಹ್ಮಣರಿಗಿ ಬರಲಿಕ್ಕ ಹೇಳೀನಿ (ಅಷ್ಟರಲ್ಲಿ ಬ್ರಾಹ್ಮಣರು ಬರುತ್ತಾರೆ).

**ಕೇಶವಭಟ್ಟ :** ನಮಸ್ಕಾರ, ಶಿವಾಚಾರ್ಯರಿಗೆ.

**ಲಕುಲೀಶ ಪಂಡಿತ :** ಬರ್ರಿ, ಬರ್ರಿ ಕುಳಿತುಕೊಳ್ರಿ, (ಸೂಕ್ತ ಸ್ಥಳದಲ್ಲಿ ಬ್ರಾಹ್ಮಣರು ಕುಳಿತುಕೊಳ್ಳುತ್ತಾರೆ).

**ಕೇಶವಭಟ್ಟ :** ಏನು ಸಮಾಚಾರ ? ಕರಸಿದ್ದು ಯಾಕ?

**ಲಕುಲೀಶ ಪಂಡಿತ :** ಈ ಬಸವಣ್ಣನ ಬಗ್ಗೆ ನಾವೂ ನೀವೂ ಕೂಡಿ ಒಂದು ನಿರ್ಣಯಕ್ಕ ಬರಲೇಬೇಕಾಗ್ಯಾದ.

**ಕೇಶವಭಟ್ಟ :** ಯಾಕ ತೆಲಿ ಕೆಡಿಸಿಕೋತೀರಿ? ಕೆಸರಿನ ಮ್ಯಾಗ ಕಲ್ಲ ಒಗದು ಮೈ ಹೊಲಸ ಮಾಡಿಕೋತೀರಿ ?

**ಶಿಷ್ಯ :** ಎದೆಯ ವರೆಗೂ ಬಂದಿರುವ ಈ ಕೆಸರಿನ್ಯಾಗ ತಿರುಗಾಡೂದು ಹ್ಯಾಂಗ ? ಹೀಂಗs ಬಿಟ್ಟರ ಅದು ಕುತ್ತಿಗಿ ವರೆಗೂ ಬೆಳೀತದ.

**ಕೇಶವಭಟ್ಟ :** ಏನು ಮಾಡೂದು? ನಮಗಂತೂ ಅವನ ಬಗ್ಗೆ ಬ್ಯಾಸರ, ಹೇಸಿಕಿ ಬಂದುಬಿಟ್ಟಾದ.
**ವಾಮದೇವ ಶಿವಾಚಾರ್ಯ :** ಯಾಕ ?

**ನಾರಣ ಭಟ್ಟ :** ಹೊಲಗೇರ್‍ಯಾಗ ಊಟ ಮಾಡಿದಾಗಲೇ ರಾಜನಿಗೆ ದೂರು ನೀಡಿದೆವು. ವಿಚಾರಣೆ ನಡೀತು. ಏನೂ ಪ್ರಯೋಜನ ಆಗಲಿಲ್ಲ. ಈಗ ಮದುವೆಯ ಬಗ್ಗೆ ದೂರು ಒಯ್ಯುವುದೂ ವ್ಯರ್ಥ. ಇದನ್ನು ಕೈಬಿಡಬೇಕಂತ ಇಂದು ಮುಂಜಾನೆ ಸೇರಿದ್ದ ಸಭೆಯಲ್ಲಿ ನಿರ್ಣಯಿಸೀವಿ. ನಮಗ ಮಾಡಲು ಬ್ಯಾರೆ ಒಳ್ಳೆ ಕೆಲಸ ಅವ.

**ಲಕುಲೀಶ ಪಂಡಿತ :** ನಿಮ್ಮ ಒಳ್ಳೆ ಕೆಲಸ ಅಂವ ಹಾಳ ಮಾಡ್ತಿದ್ದಾನ. ವರ್ಣಭೇದ ಪರಿಪಾಲನೆ ನಿಮ್ಮ ಕರ್ತವ್ಯ. ಮೊನ್ನೆ ಬ್ರಾಹ್ಮಣ - ಶೂದ್ರ ಮದುವಿ ಜರುಗಿಸಿ ಅದನ್ನು ಮುರದು ಹಾಕದ. ಶಿವಧರ್ಮ ಪೀಠವೇರುವುದು ನಮ್ಮ ಹಕ್ಕು; ನಿನ್ನೆ ಒಬ್ಬ ಶೂದ್ರನ್ನ ಅದರ ಮ್ಯಾಲ ಕುಳ್ಳಿರಿಸಿಬಿಟ್ಟ. ಇವೆರಡೂ ನಿಮ್ಮ ನಮ್ಮ ಸಂಪ್ರದಾಯಗಳಿಗಿ ದೊಡ್ಡ ಅವಹೇಳನಗಳು.

**ಕೇಶವಭಟ್ಟ :** ಮದುವೆ ಬಿಡಿ. ಅಪವಾದಾತ್ಮಕವೆಂಬಂಥ ಈ ಘಟನೆ ಉಪೇಕ್ಷಿಸಿ, ನಮ್ಮ ವರ್ಣವ್ಯವಸ್ಥೆ ಯಥಾಪ್ರಕಾರ ಮುಂದುವರೀತದ. ಅಲ್ಲಮನ ಘಟನೆ ಹೀಂಗಲ್ಲ. ಧರ್ಮಪೀಠದ ಮೇಲೆ ಒಬ್ಬ ಶೂದ್ರನ್ನ ಕುಳ್ಳಿರಿಸೂದಂದರ ಸಾಕ್ಷಾತ್ ಶಿವನೇ ನಿಮಗೆ ದಯಪಾಲಿಸಿದ ಜಗದ್ಗುರು ಅಧಿಕಾರವನ್ನs ಶಾಶ್ವತ ಕಸಿದುಕೊಂಡ್ಹಂಗ. ಇದು ಬಹಳ ದೊಡ್ಡ ಅನ್ಯಾಯ.

**ವಾಮದೇವ ಶಿವಾಚಾರ್ಯ:** ಹೌದು, ಅಲ್ಲಮನ ಘಟನೆ ನಮ್ಮ ಧರ್ಮಾಧಿಕಾರದ ಬುಡಕ್ಕೇ ಬೀಸಿದ ಕೊಡಲಿ ಆಗ್ಯಾದ. ಅದಕ್ಕಾಗೇ ನೀವು ಬಿಟ್ಟರೂ ನಾವು ಬಿಡೂದಿಲ್ಲ. ಹೋರಾಟ ಕೈಗೆತ್ತಿಕೊಳ್ತೀವಿ.

**ನಾರಣಭಟ್ಟ :** ವಾಮದೇವರೇ ಹೋರಾಟಕ್ಕ ಜನ ಬೇಕು.

**ವಾಮದೇವ ಶಿವಾಚಾರ್ಯ :** ಅದು ನಮಗ ಗೊತ್ತದ. ಶರಣದೀಕ್ಷೆ ಹೊಂದಿದ್ದ ನಮ್ಮವರು ಬಸವಣ್ಣನೊಂದಿಗಿ ಒಂದು ಹಂತದ ವರೆಗಿ ಸಹಕರಿಸಿದ್ದರು. ಆದರ ನಮ್ಮ ಧರ್ಮಪೀಠದ ಅಧಿಕಾರ ಪ್ರಶ್ನಿಸಿದರ ಬಿಟ್ಟಾರs? ಬಸವಣ್ಣನ ಸಂಘಟನೆಯಿಂದ ಆ ನಮ್ಮ ಜನ ಈಗ ಹೊರಬಂದಾರ. ನಮ್ಮೊಂದಿಗಿ ಸೇರಿಕೊಂಡಾರ. ಇದರಿಂದ ಅವನ ಸಂಘಟನ್ಯಾಗ ದೊಡ್ಡ ಬಿರುಕು ಕಾಣಿಸಿಕೊಂಡದ.

**ನಾರಣಭಟ್ಟ :** ದೀಕ್ಷೆ ಪಡೆದು ಶರಣರಾಗಿದ್ದ ಅನೇಕ ಜನ ನಮ್ಮ ಬ್ರಾಹ್ಮಣರೂ ಈ ಶೂದ್ರ-ಬ್ರಾಹ್ಮಣ ಮದುವೆಯಿಂದ ಸಿಟ್ಟಿಗೆದ್ದು, ಬಸವಣ್ಣನ ಸಂಘಟನೆಯಿಂದ ಹೊರಬಂದಾರ.

**ಲಕುಲೀಶ ಪಂಡಿತ :** ಅರಸು ಬಿಜ್ಜಳನೂ, ಅವನ ಪರಿವಾರವೂ ಬಸವಣ್ಣನ ಆರ್ಥಿಕ ಸುಧಾರಣೆಯಿಂದ ಬ್ಯಾಸತ್ತಾರ. ಬಸವಣ್ಣನ ಸಂಘಟನ್ಯಾಗ ಈಗ ಹೆಚ್ಚಾಗಿ ದೀನರು-ದಲಿತರು ಮಾತ್ರ ಉಳಕೊಂಡಾರ.

**ನಾರಣಭಟ್ಟ :** ರೈತರಾದ ಪಂಚಮಸಾಲಿನವರು, ರೈತರಿಗೆ ಪೂರಕವಾದ ಸಣ್ಣಪುಟ್ಟ ಕೈಗಾರಿಕೆಯವರು ಮತ್ತು ಇವರ ಉತ್ಪಾದನೆಗಳನ್ನು ಮಾರಾಟಮಾಡುವ ವರ್ತಕ ವರ್ಗದವರು ಬಸವಣ್ಣಗ ಬೆಂಬಲವಾಗಿ ಉಳಕೊಂಡಾರ.

**ಲಕುಲೀಶ ಪಂಡಿತ :** ಸಹಜ ಅದ. ಬಸವಣ್ಣನ ಕಾಯಕ ನೀತಿಯಿಂದಾಗಿ ರಾಜ್ಯದಾಗ ಉದ್ಯೋಗ ಚಟುವಟಿಕೆ ಬೆಳೆದು ನಿಂತಾದ. ಈ ಹಿಂದೆ ಎಂದೂ ಕಾಣದಂಥ ದೊಡ್ಡ ಲಾಭ ಪಂಚಮಸಾಲು ಮೊದಲು ಮಾಡಿ ಐದೂ ಸಾಲುಗಳ ವರ್ತಕರಿಗಿ ಆಗ್ತಾ ಇದೆ. ಹೀಗಾಗಿ ಅವರು ಬಸವಣ್ಣನ ಆಂದೋಲನ ಬೆಂಬಲಿಸೂದು ಸಹಜ ಆಗ್ಯಾದ.

**ಕೇಶವ ಭಟ್ಟ :** ಚಳುವಳಿಯ ಎದೆಯೇ ಸೀಳಿರುವಾಗ ಈ ನರ-ನಾಡಿಗಳಂಥ ಶೂದ್ರ - ಕೃಷಿಕ - ವರ್ತಕರ ಬೆಂಬಲದಿಂದ ಆಗುವ ಪ್ರಯೋಜನವಾದರೂ ಏನು ? ಯಾವುದೇ ಚಳುವಳಿ ಹೊರಗಿನ ವಿರೋಧ ಹೆಚ್ಚಿದಷ್ಟೂ ಉಗ್ರ ಆಗ್ತದ; ಒಳಗಿನ ವಿಘಟನೆ ಹೆಚ್ಚಿದಷ್ಟೂ ದುರ್ಬಲ ಆಗ್ತದ. ಬಸವಣ್ಣ ಈಗ ಅಂಥ ದುರ್ಬಲ ಪರಿಸ್ಥಿತಿಗಿ ಇಳದಾನ.

**ಲಕುಲೀಶ ಪಂಡಿತ :** ನೀವು ಹೇಳೂದು ನಿಜ. ಗೂಳಿ ಬಿದ್ದಾಗಲೇ ಆಳಿಗೊಂದು ಕಲ್ಲು ಹಾಕಬೇಕು. ಹೇಳಿ, ಕೇಶವಭಟ್ಟರೇ ಈಗ ನಿಮ್ಮ ವಿಚಾರವೇನು ?



**ಕೇಶವಭಟ್ಟ :** ವಿಚಾರವೇನಿದೆ ? ಬಸವಣ್ಣನ ಮ್ಯಾಲ ಎಲ್ಲರೂ ಸೇರಿ ದಾಳಿ ಮಾಡೂ ಕಾಲ ಈಗ ಪಕ್ವ ಆಗ್ಯಾದ. ಮುಂದುವರಿಯೋಣ.

**ಲಕುಲೀಶ ಪಂಡಿತ :** ಹಾಗಾದರ ಇವತ್ತs ರಾಜರಿಗಿ ಹೇಳಿ ಕಳಿಸ್ರಿ. ನಾಳೆ ರಾಜಾಸ್ಥಾನದಾಗ ನಾವೆಲ್ಲ ಸೇರೋಣ. ನೋಡಿ, ಒಂದು ವಿಷಯ : ಅಲ್ಲಮನ ಪೀಠಾರೋಹಣದಿಂದಾದ ನಮ್ಮ ಪೀಠಾಧಿಕಾರದ ನಾಶ, ಏನಂದರೂ ನಮ್ಮ ಧರ್ಮದ ಪ್ರಶ್ನೆ ಅನಸ್ತದ. ಮದುವಿs ಘಟನೆಯಿಂದಾದ ಸಾಮಾಜಿದ ವ್ಯವಸ್ಥೆಯ ನಾಶ ಮಾತ್ರ ಆಡಳಿತದ ಪ್ರಶ್ನೆ ಅನಸ್ತದ. ರಾಜನ ಕಾನೂನು ಮೀರಿದ ಉದ್ಧಟತನ ಅನಸ್ತದ. ......

**ವಾಮದೇವ ಶಿವಾಚಾರ್ಯ :** ಹೌದು, ಅದಕ್ಕs ನಾಳೆ ರಾಜಸಭೆಯಲ್ಲಿ ಅಲ್ಲಮನ ಪ್ರಸಂಗಕ್ಕಿಂತ ಮದುವೆಯ ಪ್ರಸಂಗವನ್ನೇ ದೊಡ್ಡದು ಮಾಡಿ, ವಾದ ಹೂಡೋಣ.

**ಕೇಶವಭಟ್ಟ :** ನೀವು ಹೇಳೂದೂ ನಿಜ. ಮದುವಿs ವಿಷಯವನ್ನೇ ಮುಖ್ಯವಾಗಿಟ್ಟುಕೊಂಡು ವಾದಿಸೋಣ.

## ದೃಶ್ಯ -೩೭

(ಬಿಜ್ಜಳನ ಅಸ್ಥಾನ. ವೈದಿಕರು, ಸ್ಥಾನಾಚಾರ್ಯರು, ರಾಜಪ್ರಮುಖರು ಸೇರಿದ್ದಾರೆ. ತೆರೆಯ ಹಿಂದೆ "ಬಸವಣ್ಣನಿಗೆ ಧಿಕ್ಕಾರ, ವರ್ಣವಿರೋಧಿಗೆ ಧಿಕ್ಕಾರ". - 'ಬಸವಣ್ಣನಿಗೆ ಜಯವಾಗಲಿ, ವರ್ಣವಾದಿಗಳಿಗೆ ಧಿಕ್ಕಾರ, ಎಂಬ ಪರ-ವಿರೋಧ ಧ್ವನಿಗಳು ಗದ್ದಲದ ನಡುವೆ ಆಗಾಗ ಕೇಳಿಸುತ್ತವೆ). ಸ್ವಸ್ತಿ ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ, ಮಹಾರಾಜಾಧಿರಾಜ ರಾಜಪರಮೇಶ್ವರ, ಕಾಳಾಂಜರಪುರವರಾಧೀಶ್ವರ, ಡಮರುಗತೂರ್ಯ ನಿರ್ಘೋಷಣ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್ - (ಬಿಜ್ಜಳನ ಆಗಮನ).

**ದ್ವಿಜರು :** ಅಗ್ರಹಾರ - ಗೋ-ಬ್ರಾಹ್ಮಣ ಪರಿಪಾಲಕ, ವರ್ಣಧರ್ಮ ಸಂರಕ್ಷಕ, ಶ್ರೀ ಬಿಜ್ಜಳ ಭೂಪಾಲಾಯ ಶುಭಮಸ್ತು, ಶುಭಮಸ್ತು, ಶುಭಮಸ್ತು.

ಗುರುಗಳು : ಗುರುಜನ, ದೇವಾಲಯ, ಮಠ ಪರಿಪಾಲಕ ಶ್ರೀ ಬಿಜ್ಜಳ ಭೂಪಾಲಾಯ ಸಿದ್ಧಿರಸ್ತು, ಸಿದ್ಧಿರಸ್ತು, ಸಿದ್ಧಿರಸ್ತು.

**ದ್ವಿಜರು ಮತ್ತು ಗುರುಗಳು :** ದುಷ್ಟ ಶಿಕ್ಷಕ, ಶಿಷ್ಟರಕ್ಷಕ, ಶ್ರೀ ಶ್ರೀ ಬಿಜ್ಜಳ ಭೂಪಾಲಾಯ ಜಯಮಸ್ತು, ಸಿದ್ಧಿರಸ್ತು, ಶುಭಮಸ್ತು, (ಬಿಜ್ಜಳ ಸಿಂಹಾಸನದ ಮೇಲೆ ಆರೂಢನಾಗುತ್ತಾನೆ).

**ಬಿಜ್ಜಳ :** ಇಂದು ನಾವು ಒಂದು ಧರ್ಮಯುದ್ಧದ ಸನ್ನಿವೇಶದಲ್ಲಿದ್ದೀವಿ. ನನ್ನ ಜೀವನದಾಗ ಅನೇಕ ಆಹ್ವಾನ ಸ್ವೀಕರಿಸಿ, ಮಹಾಯುದ್ಧಗಳಲ್ಲಿ ಜಯಶಾಲಿಯಾಗ್ತಾ ಬಂದೀನಿ. ಆದರ ನಿಮಗ ತಿಳಿದಿರೂ ಹಾಂಗ ಬಸವಣ್ಣನ ನ್ಯಾಯವಿಚಾರಣೆ ಇಂದು ನನಗ ಇನ್ನೂ ದೊಡ್ಡ

ಆಹ್ವಾನವಾಗಿ, ದೊಡ್ಡ ಯುದ್ಧವಾಗಿ ಪರಿಣಮಿಸ್ಯಾದ. ಈ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯ ತಿಳಿಯಬಯಸೀನಿ.

**ಕೇಶವ ಭಟ್ಟ** : ಸಮಾಜಸುಧಾರಣೆಯ ಹೆಸರಿನ್ಯಾಗ "ವರ್ಣವ್ಯವಸ್ಥೆ" ನಾಶಮಾಡತಿರುವ ಬಸವಣ್ಣಗ ನಮ್ಮ ಧಿಕ್ಕಾರ.

**ವಾಮದೇವ ಶಿವಾಚಾರ್ಯ** ; ಧರ್ಮಸುಧಾರಣೆಯ ಹೆಸರಿನ್ಯಾಗ "ಧರ್ಮವ್ಯವಸ್ಥೆ" ನಾಶಮಾಡತಿರುವ ಬಸವಣ್ಣಗ ನಮ್ಮ ಧಿಕ್ಕಾರ.

**ಮಂಚಣ್ಣ** : ರಾಜಕೀಯ ಸುಧಾರಣೆಯ ಹೆಸರಿನ್ಯಾಗ "ರಾಜಧರ್ಮ" ನಾಶಮಾಡತಿರುವ ಬಸವಣ್ಣಗ ನಮ್ಮ ಧಿಕ್ಕಾರ.

**ಬಿಜ್ಜಳ** : ಈ ಧಿಕ್ಕಾರಕ್ಕ ನನ್ನ ಅನುಮೋದನೆ ಅದ. ಆದರ ಈ ಸಮಸ್ಯೆ ಹ್ಯಾಂಗ ಎದುರಿಸೂದು ಎಂಬುದು ನಮ್ಮ ಮುಂದಿನ ಪ್ರಶ್ನೆ.

**ಕೇಶವಭಟ್ಟ** : ಸಾಮೋಪಾಯದಿಂದ ಎದುರಿಸುವ ಎಲ್ಲ ಪ್ರಯತ್ನಗಳೂ ನಮ್ಮ ಮಟ್ಟಿಗೆ ಮುಗದಾವ. ಕಾಯಕ -ದಾಸೋಹತತ್ವದ ಶರಣರ ಮುಂದ ದಾನೋಪಾಯದ ನಮ್ಮ ಆಟ ನಡೆಯದು.

**ಬಿಜ್ಜಳ** : (ನಡುವೆಯೇ ಬಾಯಿ ಹಾಕಿ ) ಹೌದು, ದಂಡೋಪಾಯವೊಂದೇ ನಮಗ ಉಳಿದಿರುವ ದಾರಿ. 'ಭಂಡಾರದ ಮೇಲಿರೂದು ಪ್ರಜೆಗಳ ಒಡೆತನ' ಎಂಬ ಆರ್ಥಿಕ ನೀತಿ ಅಸ್ತಿತ್ವಕ್ಕ ತಂದ ದಿನವೇ ಅವನನ್ನ ಶಿಕ್ಷಿಸಬೇಕಿತ್ತು. ತಿದ್ದಿಕೊಳ್ಳಬಹುದೆಂದು ಭಾವಿಸಿ ಸುಮ್ಮನಾದೆ. ಹೋಗಲಿ, ನಾಗಿಮಯ್ಯನ ಮನ್ಯಾಗ ಊಟಮಾಡಿ ಬಂದು ವಿಪ್ರರ ಮನಸ್ಸಿಗಿ ನೋವು ಮಾಡಿದಾಗಲೇ ಶಿಕ್ಷಿಸಬೇಕಿತ್ತು. ಆಗ ಕಾಲ ಪಕ್ವವಾಗಿಲ್ಲ ಅಂತ ನನ್ನ ಮನಸ್ಸ ಹೇಳ್ತು. ಅವನ ಸಂಘಟನೆಯೊಳಗ ಬಿರುಕು ಹುಟ್ಟುವ ದಿನವನ್ನು ಎದುರು ನೋಡುತಿದ್ದೆ.

**ನಾರಣಭಟ್ಟ** : ಈಗ ಬಿರುಕು ಹುಟ್ಟ್ಯಾದ. ಅವನ ಸಂಘಟನೆಯೊಳಗ ಸೇರಿಕೊಂಡಿದ್ದ ಆಗಮಿಕ ಲಿಂಗಿಬ್ರಾಹ್ಮಣರು, ವೈದಿಕ ಬ್ರಾಹ್ಮಣರು ನಡುನೀರಿನಲ್ಲಿಯೇ ಅವನ ಕೈಬಿಟ್ಟು ನಮ್ಮೊಂದಿಗೆ ಬಂದಾರ. ಭೇದೋಪಾಯ ತಾನಾಗಿಯೇ ಸೃಷ್ಟಿಯಾಗಿ, ದಂಡೋಪಾಯಕ್ಕ ಕಾಲ ಕೂಡಿ ಬಂದದ.

**ವಾಮದೇವ ಶಿವಾಚಾರ್ಯ** : ಕಾಯ್ದಿರುವಾಗಲೇ ಕಬ್ಬಿಣ ಬಡೀಬೇಕು.

**ಬಿಜ್ಜಳ** : ನೀವು ಹೇಳೋದೇನೋ ನಿಜ. ಆದರೂ ಇನ್ನೊಮ್ಮೆ ವಿಚಾರ ಮಾಡ್ರಿ.

**ಮಂಚಣ್ಣ** : ವಿಚಾರ ಮಾಡೂದೇನದ ? ನಾರಣಭಟ್ಟರ, ವಾಮದೇವಯ್ಯನವರ ಈ ಅಭಿಪ್ರಾಯವನ್ನ ಆಡಳಿತ ವರ್ಗದ ನಾವೂ ಬೆಂಬಲಿಸ್ತೀವಿ, ನಿನ್ನೆ ನಡದ ಮದುವಿಯಂತೂ ಈ ರಾಜ್ಯದಲ್ಲಿ ಕಾನೂನಿನ ವ್ಯವಸ್ಥೆಯೇ ಇಲ್ಲ ಅನ್ನೂ ಹಾಂಗ ಘಟಿಸಿಬಿಟ್ಟಿತು.



**ಲಕುಲೀಶ ಪಂಡಿತ** : ಕುಂತಳ ರಾಜ್ಯದಲ್ಲಿ ಸಮಾಜ ವ್ಯವಸ್ಥೆ ನೋಡಿಕೊಳ್ಳುವವರು ನೀವೋ? ಆ ಬಸವಣ್ಣನೋ ?

**ಕೇಶಭಟ್ಟ** : ಸಮಾಜ ಅನ್ನೂದು ಒಂದು ದೊಡ್ಡ ಅಸ್ತ್ರ. ಅದನ್ನು ರಾಜನಿಗೆ ಅನುಕೂಲವಾಗೂ ಹಾಂಗ ನಾವು ಈ ವರಿಗೆ ರೂಪಿಸ್ತ ಬಂದೀವಿ. ಹೀಗೆ ಬಿಟ್ಟರ ಅದು ನಿಮಗ ಪ್ರತಿಕೂಲ ಅಸ್ತ್ರವಾಗಿ ಬೆಳೆದೀತು.

**ಬಿಜ್ಜಳ** : ಹಾಗಾದರ ಹರಳಯ್ಯ-ಮಧುವಯ್ಯಗಳನ್ನು, ಈ ಮದುವಿಗಿ ಕಾರಣನಾದ ಬಸವಣ್ಣನನ್ನು ನ್ಯಾಯ ವಿಚಾರಣೆಗೆ ಗುರುಪಡಿಸೋಣವೇ ?

**ಕೇಶವಭಟ್ಟ** ; ಇದರಾಗ ಕೇಳೂದೇನದ ? ವಿಚಾರಣಾಸ್ಥಾನದಲ್ಲಿ ನಿಲ್ಲಿಸಿ ಮಹಾರಾಜರು ಇಂದು ತೀರ್ಪು ನೀಡಲೇಬೇಕು.

**ಬಿಜ್ಜಳ** : ಅಪರಾಧಿಗಳನ್ನು ಬಂಧಿಸಿಕೊಂಡು ಬೀದಿಯಲ್ಲಿ ಕರೆದು ತನ್ನಿ. (ಇಬ್ಬರು ಯೋಧರು ಹೋಗುತ್ತಾರೆ. ಬಿಜ್ಜಳ ಸ್ವಗತ ) ನಾನೊಂದು ಬಗದರ ದೈವವೊಂದು ಬಗೀತು. ಬಸವಣ್ಣನ ಪ್ರಭಾವವನ್ನು ಸ್ವಾರ್ಥಕ್ಕ, ರಾಜಸತ್ತೆಗೆ ರಕ್ಷಣೆಯಾಗಿ ಬಳಸಿಕೊಳ್ಳಲು ಯೋಚಿಸಿದೆ. ಕೈಗೂಡಲಿಲ್ಲ. ಅಸತ್ಯದೊಂದಿಗೆ ಸತ್ಯ ಹ್ಯಾಂಗ ಸಹಕರಿಸೀತು. (ಅಷ್ಟರಲ್ಲಿ ಬಸವಣ್ಣ, ಹರಳಯ್ಯ-ಮಧುವಯ್ಯಗಳನ್ನು ಅನುಭವಮಂಟಪದಲ್ಲಿ ಬೇಡಿ ತೊಡಿಸಿ ಬಂಧಿಸಲಾಗುವುದು. ದೂರದಿಂದ 'ಭವಿ ಬಿಜ್ಜಳನಿಗೆ ಧಿಕ್ಕಾರ, ಪುರೋಹಿತಶಾಹಿಗೆ ಧಿಕ್ಕಾರ, ಇತ್ಯಾದಿ ಧ್ವನಿಗಳು ಕೇಳಿಸುತ್ತವೆ. ಬೀದಿಯಲ್ಲಿ ಮೂವರನ್ನು ಕರೆದುಕೊಂಡು ಬರುತ್ತಾರೆ. ಶರಣ ಸಮೂಹ "ಭವಿ ಬಿಜ್ಜಳನಿಗೆ ಧಿಕ್ಕಾರ, ಪುರೋಹಿತ ಶಾಹಿಗೆ ಧಿಕ್ಕಾರ" ಎಂದು ಹೇಳುತ್ತ ಹಿಂಬಾಲಿಸುತ್ತದೆ. ಬಸವಣ್ಣನ ಮೈಮೇಲೆ ಬಿಳಿ ಪಂಚೆ ಮಾತ್ರವಿದೆ. ಹರಳಯ್ಯ-ಮಧುವಯ್ಯಗಳದು ಎಂದಿನಂತೆ ಸರಳವೇಷ. ಆಸ್ಥಾನಕ್ಕೆ ಪ್ರವೇಶ. "ಬಸವಣ್ಣನಿಗೆ ಧಿಕ್ಕಾರ, ವರ್ಣವಿರೋಧಿಗೆ ಧಿಕ್ಕಾರ" ಎಂಬ ಕೂಗು ಪುರೋಹಿತ ವರ್ಗದಿಂದ ಕೇಳಿ ಬರುತ್ತದೆ).

**ಬಿಜ್ಜಳ** : ಬಸವಣ್ಣಾ, ಸುಧಾರಣೆಯ ನೆವದಾಗ ಸಮಾಜಧರ್ಮ, ರಾಜಧರ್ಮಗಳೆರಡನ್ನೂ ನೀನು ನಾಶಮಾಡುತ್ತೀ ಎಂಬ ಆರೋಪ ನಿಮ್ಮ ಮ್ಯಾಲದ.

**ಬಸವಣ್ಣ** : ಪ್ರಭೂ ನಾನು ನಾಶಮಾಡಿಲ್ಲ. **'ನಾಶ' ಮಾಡುವವ ಅಲ್ಲ. 'ನಿರ್ಮಾಣ' ಮಾಡಬೇಕು ಅನ್ನುವವ.**

**ಕೇಶವಭಟ್ಟ** : ಇವನಿಗಿ ಬಂಧನದ ಅವಮಾನದಿಂದ ಇನ್ನೂ ಜ್ಞಾನೋದಯವಾಗಿಲ್ಲ ಅಂತ ಕಾಣತದ.

**ಬಸವಣ್ಣ** : ನಾನು ತಪ್ಪು ಮಾಡಿಲ್ಲ. ಹೀಗಿರುವಾಗ ಈ ಬಂಧನ ನನಗ ಅವಮಾನವಲ್ಲ. ಅವಮಾನ, ಈ ಬಂಧನ ಮಾಡಿದವರಿಗಿ.

**ಬಿಜ್ಜಳ :** ಅಂದರ ನನಗ ?

**ಬಸವಣ್ಣ ;** ನಾನು ಹಾಗೆ ಹೇಳಿದೆನೆ ? **ವರ್ತಮಾನದಲ್ಲಿ ಸತ್ಯಕ್ಕ ಅವಮಾನ ಮಾಡಿದವರು ಭವಿಷ್ಯತ್ತಿನಲ್ಲಿ ಶಾಶ್ವತ ಅವಮಾನಕ್ಕ ಗುರಿಯಾಗ್ತಾರ,** ಅಷ್ಟೇ.

**ಬಿಜ್ಜಳ ;** ನಾಲಗಿ ಬಿಗಿಹಿಡಿದು ಮಾತಾಡು. ಪ್ರಜೆಗಳನ್ನು ಜಾಗ್ರತಗೊಳಿಸುವ ಮೂಲಕ ನನ್ನ ಅಧಿಕಾರವನ್ನೇ ದುರ್ಬಲಮಾಡಿ, ಅವಮಾನಿಸಿದವರು ಯಾರು ?

**ಬಸವಣ್ಣ :** ಅಧಿಕಾರ, ಅಧಿಕಾರ, ಅಧಿಕಾರ. ರಾಜ್ಯದ ಮ್ಯಾಲ ಯಾರ ಅಧಿಕಾರ ? ರಾಜ್ಯವನ್ನು ಪ್ರೀತಿಸುವವರ ಅಧಿಕಾರವೇ ಹೊರತು, ಅಧಿಕಾರವನ್ನು ಪ್ರೀತಿಸುವವರ ಅಧಿಕಾರವಲ್ಲ.

**ಬಿಜ್ಜಳ ;** ನೀನು ರಾಜ್ಯವನ್ನು ಪ್ರೀತಿಸುವವ, ನಾನು ಅಧಿಕಾರವನ್ನು ಪ್ರೀತಿಸುವವ ?

**ಶರಣರು :** ಹೌದು. ಬಸವಣ್ಣ ರಾಜ್ಯವನ್ನು ಪ್ರೀತಿಸಿದ ಕಾರಣ ಕುಂತಳದೇಶ ಸುಖೀರಾಜ್ಯವಾಗಿ ಬೆಳೀತಾ ಇದೆ. **"ಶ್ರಮ ವ್ಯಕ್ತಿಗಿ, ಶ್ರಮದ ಫಲ ಸಮಾಜಕ್ಕ"** ಎಂದು ಬದುಕಲು ಕಲಿಸಿದ ಕಾರಣ, ಸುಖೀರಾಜ್ಯ ಬೆಳೀತಾ ಇದೆ.

**ಮಂಚಣ್ಣ :** 'ರಾಜಸತ್ತೆ' ನಾಶಮಾಡಿ ತರಲಿರುವ ಇಂಥ ಸುಖೀರಾಜ್ಯ ನಮಗ ಬೇಕಿಲ್ಲ.

**ನಾರಣಭಟ್ಟ :** 'ವರ್ಣಸತ್ತೆ' ಹಾಳುಮಾಡಿ ತರಲಿರುವ ಇಂಥ ಸುಖೀರಾಜ್ಯ ನಮಗ ಬೇಕಿಲ್ಲ.

**ವಾಮದೇವ ಶಿವಾಚಾರ್ಯ :** 'ಧರ್ಮಸತ್ತೆ' ಹಾಳು ಮಾಡಿ ತರಲಿರುವ ಇಂಥ ಸುಖೀರಾಜ್ಯ ನಮಗ ಬೇಕಿಲ್ಲ.

**ಎಲ್ಲರೂ :** ರಾಜ್ಯಕ್ಕ ಸುಖವಾಗಬೇಕಾದರ ನಿನ್ನಂಥ ದ್ರೋಹಿಗಿ ತಕ್ಕ ಶಿಕ್ಷೆಯಾಗಲೇಬೇಕು.

**ಬಿಜ್ಜಳ :** ಬಸವಣ್ಣಾ, ಕೊನೆಯ ಎಚ್ಚರಿಕೆ ನೀಡತೀನಿ. ಇನ್ನೊಮ್ಮೆ ವಿಚಾರಿಸು. ನಿನ್ನ ಧಾರ್ಮಿಕ ಸುಧಾರಣೆಗೆ ನನ್ನ ಸಮ್ಮತಿ ಅದ. ಆದರ 'ಆರ್ಥಿಕ ಸಮಾನತೆ", "ಸಾಮಾಜಿಕ ಸಮಾನತೆ" ಈ ಎರಡೂ ಹುಚ್ಚು ವಿಚಾರಗಳನ್ನು ಕೈ ಬಿಡು.

**ಬಸವಣ್ಣ :** ಪ್ರಭು, **ಸತ್ಯವನ್ನು ಕೈಬಿಡುವುದು ನನ್ನಿಂದ ಸಾಧ್ಯವಿಲ್ಲ.**

**ಬಿಜ್ಜಳ :** ಇದೇ ನಿನ್ನ ಅಂತಿಮ ನಿರ್ಧಾರವಾಗಿದ್ದರ ಮಂತ್ರಿಪದವಿ ಬಿಡಬೇಕಾಗ್ತದ.

**ಬಸವಣ್ಣ :** ಮಂತ್ರಿ ಪದವಿ ಯಾಕ? ಪ್ರಾಣವನ್ನು ಬಿಡಲೂ ಸಿದ್ಧ. ಆದರ ಆರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ, ಧಾರ್ಮಿಕ ಅಸಮಾನತೆಗಳ ನಿವಾರಣೆಯ ವಿಚಾರವನ್ನೂ ಇದನ್ನು ಬಾಳುತ್ತಲಿರುವ ಈ ಪ್ರಜೆಗಳನ್ನೂ ಕೈಬಿಡಲಾರೆ.

**ಕೇಶವಭಟ್ಟ :** ರಾಜ ದೊಡ್ಡವರೋ, ಈ ಪ್ರಜೆಗಳು ದೊಡ್ಡವರೋ ?



**ಬಸವಣ್ಣ :** ಭವಿಗಿಂತ ಭಕ್ತ ದೊಡ್ಡವ.

**ಲಕುಲೀಶಪಂಡಿತ :** ಹಾಗಾದರ ಚಕ್ರವರ್ತಿಗಳು ಭವಿ ?

**ಬಸವಣ್ಣ :** ನಾನು ಬಿಡಿಸಿ ಹೇಳಲಾರೆ. ಭವಿ ಎಷ್ಟೇ ದೊಡ್ಡವನಿರಲಿ ವ್ಯಕ್ತಿವಾದಿ. ಭಕ್ತ ಎಷ್ಟೇ ಸಣ್ಣವನಿರಲಿ ಸಮಾಜವಾದಿ, ಮಾನವತಾವಾದಿ.

**ಕೇಶವಭಟ್ಟ ;** ಹಾಗಾದರ ನಿನ್ನ ಶರಣರು ಮಾನವತಾವಾದಿ, ನಮ್ಮ ಚಕ್ರವರ್ತಿಗಳು ವ್ಯಕ್ತಿವಾದಿ? ಬಸವಣ್ಣಾ, ಎಚ್ಚರದಿಂದ ಮಾತಾಡು, ಕೇಟ್ಟೀತು ಕಲ್ಯಾಣ, ಹಾಳಾದೀತು.....

**ಬಿಜ್ಜಳ :** (ಕಿವಿಮುಚ್ಚಿಕೊಳ್ಳುತ್ತಾ) ಸಾಕು, ಸಾಕು, ನಾನು ಕಷ್ಟಪಟ್ಟು ಗಳಿಸಿದ ಈ ಕಲ್ಯಾಣದ ಬಗ್ಗೆ ಅಪಶಕುನ ಕೇಳಲಾರೆ. ಮಾತು ಹೆಚ್ಚು ಬೆಳೆಸಬ್ಯಾಡರಿ. (ಗಂಭೀರವಾಗಿ) ಇದು ಚಕ್ರವರ್ತಿಯ ತೀರ್ಪು:ರಾಜಸತ್ತೆ ವರ್ಣಸತ್ತೆ ಧರ್ಮಸತ್ತೆಗಳನ್ನು ಮೀರಿದ ಬಸವಣ್ಣನವರನ್ನು ಮಂತ್ರಿಪದವಿಯಿಂದ ಚ್ಯುತಗೊಳಿಸಿ, ಗಡಿಪಾರು ಶಿಕ್ಷೆ ನೀಡಲಾಗಿದೆ. ವರ್ಣ ವ್ಯವಸ್ಥೆ ಧಿಕ್ಕರಿಸಿದ ಹರಳಯ್ಯ-ಮಧುವಯ್ಯನವರ ವಿಚಾರಣೆ ನಾಳೆಗೆ ಮುಂದೂಡಲಾಗಿದೆ.... (ತಟ್ಟನೇ ಬಿಜ್ಜಳ ಎದ್ದು ಹೋಗುವಷ್ಟರಲ್ಲಿ)

**ಬಸವಣ್ಣ :** ಪ್ರಭೂ ಪ್ರಭೂ. (ಎನ್ನುವಷ್ಟರಲ್ಲಿ ಬಿಜ್ಜಳ ಕಿವಿಯಲ್ಲಿ ಹಾಕಿಕೊಳ್ಳದೆ ಎದ್ದು ಹೋಗುತ್ತಾನೆ. ಸೈನಿಕರು ಖಡ್ಗ ಹಿರಿದು ಬಸವಣ್ಣನ ಸುತ್ತು ನಿಲ್ಲುತ್ತಾರೆ. ಮೊದಲು ಹರಳಯ್ಯ-ಮಧವಯ್ಯಗಳನ್ನು ಕರೆದುಕೊಂಡು ಹೋಗುತ್ತಾರೆ. ಬಳಿಕ ಬಸವಣ್ಣನನ್ನು ಕರೆದುಕೊಂಡು ಹೋಗುವಾಗ ಅವನ ಹೆಜ್ಜೆಗಳು ಮಾತ್ರ ನೆಲದ ಮೇಲೆ ಮೂಡುತ್ತ ಮುಂದುವರಿಯುತ್ತವೆ. ಬಿಜ್ಜಳನಿಗೆ ಜಯವಾಗಲಿ, ಬಸವಣ್ಣನಿಗೆ ಜಯವಾಗಲಿ, ಬಿಜ್ಜಳನಿಗೆ ಧಿಕ್ಕಾರ, ಬಸವಣ್ಣನವರಿಗೆ ಧಿಕ್ಕಾರ ಎಂಬ ಪರ-ವಿರೋಧ ಘೋಷಣೆಗಳು ಕೇಳಿಸುತ್ತವೆ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ವಾಕ್ಯ ದೊಡ್ಡ ದನಿಯಲ್ಲಿ ಪದೇ ಪದೇ ಕೇಳಿಸುತ್ತದೆ. ಕೊನೆಗೆ ಪ್ರತಿಧ್ವನಿ ರೂಪದಲ್ಲಿ ಕ್ಷೀಣವಾಗುತ್ತ ಹೋಗುತ್ತದೆ).

## ದೃಶ್ಯ -೩೮

**ಡಂಗುರದವ :** ಕೇಳಿರಿ, ಕೇಳಿರಿ, ಮಕ್ಕಳ ಮದುವೆಯ ಮೂಲಕ ವರ್ಣಧರ್ಮ ನಾಶಮಾಡಿದ ಹರಳಯ್ಯ ಮಧುವಯ್ಯಗಳಿಗೆ ಬಿಜ್ಜಳ ಮಹಾರಾಜರು ಇಂದು ಎಳೆಹೂಟೆ ಶಿಕ್ಷೆ ವಿಧಿಸ್ಯಾರ. ಎಳೆಹೂಟೆ, ಎಳೆಹೂಟೆ (ಸಾರುತ್ತ ಹೋಗುತ್ತಾನೆ. ಆಮೇಲೆ ಬಂಧಿತರನ್ನು ಕರೆದುಕೊಂಡು ಹೋಗುವ ದೃಶ್ಯ, ಬಳಿಕ ಎಳೆಹೂಟೆ ದೃಶ್ಯ).

**ಡಂಗುರದವ :** ಕೇಳಿರಿ, ಕೇಳಿರಿ, ರಾಜಸತ್ತೆ, ವರ್ಣಸತ್ತೆಗಳನ್ನು ಪ್ರಶ್ನಿಸುವ ವಚನಸಾಹಿತ್ಯಕ್ಕ ಬಿಜ್ಜಳ ಮಹಾರಾಜರು ಬಹಿಷ್ಕಾರ ವಿಧಿಸ್ಯಾರ. ವಚನಸಾಹಿತ್ಯಕ್ಕ ಬಹಿಷ್ಕಾರ, ಬಹಿಷ್ಕಾರ,

ಬಹಿಷ್ಕಾರ (ಸಾರುತ್ತ ಹೋಗುತ್ತಾನೆ. ಬಳಿಕ ಶರಣರು ವಚನಕಟ್ಟುಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಮುಚ್ಚಿಡುತ್ತಿದ್ದಾರೆ. ಪುರೋಹಿತರು, ಶಿವಾಚಾರ್ಯರು, ಅಧಿಕಾರಿಗಳು ಅವುಗಳನ್ನು ಹುಡುಕಿ ಅಲ್ಲಲ್ಲಿ ಸುಡುತ್ತಲಿದ್ದಾರೆ).

## ದೃಶ್ಯ -೩೯

(ಬಿಜ್ಜಳನ ಅರಮನೆಯ ಮುಂಭಾಗ. ಜಗದೇವ ಮಲ್ಲಿಬೊಮ್ಮಣ್ಣ ದೀವಟಿಗೆ ಸಜ್ಜುಗೊಳಿಸುತ್ತಲಿದ್ದಾರೆ).

**ಜಗದೇವ ;** ಮಲ್ಲಿಬೊಮ್ಮಣ್ಣ, ಮೂರು ತಿಂಗಳ ಹಿಂದೆ ಜರುಗಿದ ಹರಳಯ್ಯ -ಮಧುವಯ್ಯಗಳ ಎಳೆಹೂಟೆ ಶಿಕ್ಷೆ ನೋಡಬಾರದು. ಕೇಳಬಾರದು.

**ಮಲ್ಲಿಬೊಮ್ಮಣ್ಣ :** ಜಗದೇವಾ, ಎಂಥ ಕ್ರೂರ ಘಟನೆ. ವೈದಿಕ ಪುರೋಹಿತ ವರ್ಗ, ಶೈವ ಆಚಾರ್ಯವರ್ಗ, ಬಿಜ್ಜಳ ಮೊದಲಾದ ರಾಜವರ್ಗವೆಂಬ ಪಟ್ಟಭದ್ರರು ಸೇರಿ, ಹಾಡುಹಗಲೇ ನಮ್ಮ ಶರಣರಿಗೆ ಅಪಮಾನ ಮಾಡಿದರು. ನಮ್ಮ ಸಾಹಿತ್ಯಕ್ಕ ಅನ್ಯಾಯ ಮಾಡಿದರು.

**ಜಗದೇವ :** ವೈದಿಕ ಬ್ರಾಹ್ಮಣರು, ಅವರಿಗಿಂತ ಆಗಮಿಕ ಶೈವ ಆಚಾರ್ಯರು ನಮ್ಮಿಂದ ದೂರ ಸರಿಯುವಲ್ಲಿ ನಮ್ಮ ಸಂಘಟನೆಯ ಅರ್ಧಭಾಗವೇ ದುರ್ಬಲವಾಯಿತು. ಪಾರ್ಶ್ವರೋಗಪೀಡಿತ ಶರೀರದ ಸ್ಥಿತಿ ಅದಕ್ಕ ಒದಗಿತು.

**ಮಲ್ಲಿಬೊಮ್ಮಣ್ಣ :** ನಮ್ಮ ನಾಯಕವ್ಯಕ್ತಿ ಬಸವಣ್ಣನನ್ನು ಗಡಿಪಾರುಗೊಳಿಸಿ, ಆ ಶರೀರದ ತಲೆಯನ್ನೇ ಕತ್ತರಿಸಿದಂತೆ ಮಾಡಿದರು.

**ಜಗದೇವ ;** ಹೌದು, ಬಸವಣ್ಣನವರನ್ನು ಅಂದೇ ತಕ್ಷಣ ಕಲ್ಯಾಣದಿಂದ ಹೊರಹಾಕಿದರು. ಅಲ್ಲಮಪ್ರಭುವೆಂಬ ಜಂಗಮನನ್ನು ಅನುಭವ ಮಂಟಪದ ಅಧ್ಯಕ್ಷನನ್ನಾಗಿ ನೇಮಿಸಿದುದನ್ನೇ ಮುಂದು ಮಾಡಿ, ಇಷ್ಟೆಲ್ಲ ಅನಾಹುತ ಮಾಡಿದರು. 'ಅರಸು ವಿಚಾರ, ಸಿರಿಯ ಶೃಂಗಾರ, ಸ್ಥಿರವಲ್ಲ ಮಾನವಾ, ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ ಒಬ್ಬ ಜಂಗಮದ ಅಭಿಮಾನದಿಂದ" ಎಂಬ ವಚನವನ್ನು ಬಸವಣ್ಣನವರು ಹೇಳುತ್ತಿದ್ದಂತೆಯೇ ಎಲ್ಲಿಗೋ ಅವರನ್ನು ದೂರ ಕರೆದುಕೊಂಡು ಹೋದರು.

**ಮಲ್ಲಿಬೊಮ್ಮಣ್ಣ :** ಜಗದೇವಾ, ಬಸವಣ್ಣನವರು ಬಿಜ್ಜಳನ ದೃಷ್ಟಿಯಲ್ಲಿ ದೂರ ಹೋಗಿರಬಹುದು. ಆದರ ಅವರ ತತ್ವಗಳು ನಮ್ಮಲ್ಲಿ ಜೀವಂತವಾಗಿರುವ ವರೆಗೆ ಅವರು ನಮ್ಮಲ್ಲಿಯೇ, ನಮ್ಮೊಳಗs ಇರ್ತಾರ. ಶತಶತಮಾನಗಳ ವರೆಗೆ ನಮ್ಮ ಚಳುವಳಿಯನ್ನು ಮುನ್ನಡೆಸತಾರ.

**ಜಗದೇವ :** ನಿಜ. **ಸತ್ಯ ಸಾಯೂದಿಲ್ಲ, ಸತ್ಯಕ್ಕ ಸಾವೆಂಬುದೇ ಇಲ್ಲ,**



**ಮಲ್ಲಿಬೊಮ್ಮಣ್ಣ ;** ಜಗದೇವಾ, ಕರ್ಮಕ್ಕ ಬದಲು ಧರ್ಮ ರೂಢಿಸಿದೆವು. ದೇವಾಲಯಕ್ಕ ಬದಲು ದೇಹದೇವಾಲಯ ಸಂಸ್ಕೃತಿ ರೂಪಿಸಿದೆವು.

**ಜಗದೇವ :** ಅರಮನಿಗೆ ಬದಲು ಮಹಾಮನಿ ಸಂಸ್ಕೃತಿ ರೂಪಿಸಿದೆವು. ಮಠಕ್ಕ ಬದಲು ಅನುಭವಮಂಟಪ ಸಂಸ್ಕೃತಿ ರೂಢಿಸಿದೆವು. ಇದನ್ನು ಯಾರೂ ಅರ್ಥಮಾಡಿಕೊಳ್ಳಲಿಲ್ಲ.

**ಮಲ್ಲಿಬೊಮ್ಮಣ್ಣ ;** ಕಿವುಡರಿಗೆ ಕಿನ್ನುರಿ ಹ್ಯಾಂಗ ಕೇಳಿಸೀತು ?

**ಜಗದೇವ :** ಇವರು ಕಿವುಡರಲ್ಲ, ಕೇಳಿಯೂ ಕೇಳಿಸದಂತೆ ವರ್ತಿಸುವ ಜಾಣಕಿವುಡರು. ಅದಿರಲಿ, ನಮ್ಮ ಶರಣರ ಮುಂದಿನ ವಿಚಾರವೇನು ?

**ಮಲ್ಲಿಬೊಮ್ಮಣ್ಣ :** ಅನುಭವಮಂಟಪದಾಗ ಎರಡು ಮೂರು ಸಲ ಸಭೆ ಸೇರಿದ್ದರು. 'ದಯವೇ ಧರ್ಮದ ಮೂಲ' ಸಿದ್ಧಾಂತದ ನಾವು ಈ ಹಿಂಸೆಯನ್ನು ಅಹಿಂಸೆಯಿಂದಲೇ ಎದುರಿಸಬೇಕೆಂದು ನಿರ್ಣಯಿಸಿದರು.

**ಜಗದೇವ :** ಏನು?ಖಡ್ಗವನ್ನು ಕುಸುಮದಿಂದ ಎದುರಿಸುವುದs? ಅಲ್ಲ, ಅಲ್ಲ. ಖಡ್ಗವನ್ನು ಖಡ್ಗದಿಂದಲೇ ಎದುರಿಸಬೇಕು. ಎಳೆಹೂಟೆಯಲ್ಲಿ ನಮ್ಮ ಶರಣರ ರಕ್ತದಿಂದ ಕಲ್ಯಾಣ ರಕ್ತಕಲ್ಯಾಣವಾಯ್ತು. ಹಾದಿಬೀದಿಯಲ್ಲಿ ಹರಳಯ್ಯ-ಮಧುವಯ್ಯಗಳ ರಕ್ತ.... ರಕ್ತ.... ರಕ್ತ..... ನೆನಪಿಸಿಕೊಂಡರೆ ನನ್ನ ರಕ್ತ ಕುದೀತದ (ಖಡ್ಗ ಹಿರಿಯುತ್ತಾನೆ). ಇಂದಿನಿಂದ ಇದು ನಮಗೆ ಅರಮನೆಯ ಕಾಯಕವಲ್ಲ, ಸೆರೆಮನೆಯ ಸೇವೆ.

**ಮಲ್ಲಿಬೊಮ್ಮಣ್ಣ :** (ಖಡ್ಗ ಹಿರಿಯುತ್ತ) ಹೌದು ಜಗದೇವಾ, ರಾಜನ ಎಡಬಲದಲ್ಲಿ ನಿಂತು ನಾವು ಮಾಡುವ ದೀವಟಿಗಿ ಸೇವೆಗೆ ಇಂದಿನದು ಕೊನೆಯ ದಿನವಾಗಬೇಕು.

**ಜಗದೇವ :** ಹೌದು. ಹಿರಿದ ಖಡ್ಗ ಬಿಜ್ಜಳನನ್ನು ಬಲಿ ತೆಗೆದುಕೊಳ್ಳಲೇಬೇಕು. (ಮಲ್ಲಿದೇವನ ಕಿವಿಯಲ್ಲಿ ಏನೋ ಹೇಳುತ್ತಾನೆ. 'ಸ್ವಸ್ತಿ ಸಮಸ್ತ ಭುವನಾಶ್ರಯ, ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ರಾಜಪರಮೇಶ್ವರ, ಕಾಳಾಂಜರ ಪುರವರಾಧೀಶ್ವರ, ಸುವರ್ಣವೃಷಭಧ್ವಜ, ಶ್ರೀ ಶ್ರೀ ಬಿಜ್ಜಳ ಚಕ್ರವರ್ತಿ ಭೋ ಪರಾಕ್, ಭೋ ಪರಾಕ್, ಭೋ ಪರಾಕ್' ಘೋಷಣೆಯ ಧ್ವನಿ ತೆರೆಯ ಹಿಂದೆ ಕೇಳಿಸುತ್ತದೆ).

ರಾಜರು ಅರಮನೆಯಿಂದ ಆಸ್ಥಾನಕ್ಕೆ ಹೊರಟರೆಂದು ಕಾಣ್ತದ. ದೀವಟಿಗಿ ಹೊತ್ತಿಸೋಣ. (ಇಬ್ಬರೂ ದೀವಟಿಗೆ ಹೊತ್ತಿಸಿ ಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ದೀವಟಿಗೆ ಹಿಡಿದು ಸಜ್ಜಾಗುತ್ತಾರೆ. "ಸ್ವಸ್ತಿ ಸಮಸ್ತ ಭುವನಾಶ್ರಯ ...." ಎಂಬ ಘೋಷಣೆಯೊಂದಿಗೆ, ವಾದ್ಯ ಓಲಗದ ನಡುವೆ ಪಲ್ಲಕ್ಕಿಯಲ್ಲಿ ಕುಳಿತು ಬಿಜ್ಜಳ ಹೊರಬರುತ್ತಾನೆ. ದೀವಟಿಗೆ ಹಿಡಿದ ಜಗದೇವ ಮಲ್ಲಿಬೊಮ್ಮಣ್ಣಗಳು ಎಡಬಲದಲ್ಲಿ ಮುಂದುವರಿದು ಪರಸ್ಪರ ಸನ್ನೆ-ಸೂಚನೆಗಳ ಮೂಲಕ ನಡೆಯುತ್ತ, ಕೊನೆಗೆ ಆಯಕಟ್ಟಿನ ಸ್ಥಳಕ್ಕೆ ಬರುತ್ತಲೇ ದೀವಟಿಗೆ ಒಗೆದು,

'ಶರಣದ್ರೋಹಿ ಬಿಜ್ಜಳನಿಗೆ ಧಿಕ್ಕಾರ, ಭವಿ ಬಿಜ್ಜಳನಿಗೆ ಧಿಕ್ಕಾರ, ಧಿಕ್ಕಾರ' ಎನ್ನುತ್ತ ಅವನನ್ನು ಪಲ್ಲಕ್ಕಿಯಿಂದ ಹೊರಗೆಳೆದು, ನಡುಬೀದಿಯಲ್ಲಿ ರುಂಡ ಕತ್ತರಿಸಿ, ಖಡ್ಗದ ತುದಿಯಲ್ಲಿ ಎತ್ತಿಹಿಡಿದು ಕುಣಿಯುತ್ತಾರೆ. ಕೆಲವರು ದಿಕ್ಕೆಟ್ಟು ಓಡುತ್ತಾರೆ. ಗದ್ದಲ, ಪರಸ್ಪರ ಘರ್ಷಣೆ, ಬೆಂಗಾವಲಿನ ಬಿಜ್ಜಳನ ಸೈನಿಕರು ಜಗದೇವ, ಮಲ್ಲಿಬೊಮ್ಮಣ್ಣರನ್ನು ಬೆನ್ನಟ್ಟಿ ಕೊಲ್ಲುತ್ತಾರೆ).

## ದೃಶ್ಯ - ೪೦

("ಅನುಭವಮಂಟಪಕ್ಕೆ ನಡೆಯಿರಿ" ಎಂದು ಬಿಜ್ಜಳನ ಸೈನಿಕರು ಕೂಗುತ್ತ ಸಾಗಿ ಅನುಭವಮಂಟಪವನ್ನು ಮುತ್ತುತ್ತಾರೆ. ಸೈನ್ಯಕ್ಕೂ ಅಲ್ಲಿರುವ ಶರಣರಿಗೂ ಘರ್ಷಣೆ. ಶರಣರ ಶವ ಬೀಳುತ್ತವೆ. ಶರಣರೂ-ಶರಣೆಯರೂ ವಚನಸಾಹಿತ್ಯವನ್ನು ಕಟ್ಟಿಕೊಂಡು ದಿಕ್ಕುಪಾಲಾಗಿ ಓಡುತ್ತಾರೆ. ಬಿಜ್ಜಳನ ಸೈನ್ಯ ಬೆನ್ನಟ್ಟಿ ಬೇಟೆಯಾಡುತ್ತದೆ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂಬ ಎತ್ತರದ ಧ್ವನಿ ಕೋಲಾಹಲಕ್ಕೆ ಹಿನ್ನೆಲೆಯಾಗಿ ಪದೇ ಪದೇ ಕೇಳಿಸುತ್ತದೆ).

■■



## ಪಾತ್ರಗಳು

**ಬಾಗೆವಾಡಿ :**

ಬಸವಣ್ಣ, ನಾಗಲಾಂಬಿಕೆ, ಬಲದೇವ, ಮಾದರಸ, ಮಾದಲಾಂಬೆ, ವೇದಭಟ್ಟ, ವೃದ್ಧಪುರೋಹಿತ, ಪುರೋಹಿತ-೧, ಪುರೋಹಿತ -೨, ಪೂವಮ್ಮ, ಸದಸ್ಯ. ಆಳುಗಳು, ಡಂಗುರದವ, ಸೇವಕ, ಬ್ರಾಹ್ಮಣರು, ಜನರು.

**ಕೂಡಲಸಂಗಮ :**

ಬಸವಣ್ಣ, ನಾಗಲಾಂಬಿಕೆ, ಈಶಾನ್ಯಗುರು, ಪಶುಪತಿ ಶಿವಾಚಾರ್ಯ, ಸದ್ಯೋಜಾತ, ಮಾರ್ಜಾಲಪ್ಪ, ನಂದಿಕೇಶ, ವಿದ್ಯಾರ್ಥಿ -೧, ವಿದ್ಯಾರ್ಥಿ -೨, ವಿದ್ಯಾರ್ಥಿ -೩, ವಿಪ್ರ -೧, ವಿಪ್ರ -೨, ಒಬ್ಬ.

**ಕಲ್ಯಾಣ :**

ಬಸವಣ್ಣ, ನಾಗಲಾಂಬಿಕೆ, ಬಲದೇವ, ಗಂಗಾಂಬಿಕೆ, ಬಿಜ್ಜಳ, ರಂಭಾ, ಕೇಶವಭಟ್ಟ, ನಾರಣಭಟ್ಟ, ವಾಮದೇವ ಶಿವಾಚಾರ್ಯ, ಲಕುಲೀಶ ಪಂಡಿತ. ಮಂಚಣ್ಣ, ಮಾಚಿದೇವ, ನಾಗಿಮಯ್ಯ, ಹರಳಯ್ಯ, ಮಧುವಯ್ಯ, ಘಟ್ಟಿವಾಳಯ್ಯ, ಜಗದೇವ, ಮಲ್ಲಿಬೊಮ್ಮಣ್ಣ, ಶಿವಾಚಾರ್ಯ, ಪುರೋಹಿತ, ಶೀಲವಂತ, ನೀಲಾವತಿ, ವೃದ್ಧ, ಸೂಳೆ, ದನಗಾಹಿ, ಹೆಳವ ಹೂವಯ್ಯ, ಅಧಿಕಾರಿ, ಶಿಷ್ಯ.

ಸೇವಕ -೧, ಸೇವಕ -೨, ಪ್ರಜೆ -೧, ಪ್ರಜೆ -೨, ಜಂಗಮ-೧, ಜಂಗಮ -೨, ಜಂಗಮ-೩, ಜಂಗಮ-೪, ಒಬ್ಬ, ಇನ್ನೊಬ್ಬ, ಮತ್ತೊಬ್ಬ, ತಳವಾರ-೧, ತಳವಾರ-೨, ಮಹಾಸತಿ-೧, ಮಹಾಸತಿ-೨, ಹೊಲೆಯ (ಬಾಲಕ), ಹೊಲೆಯ (ಮುದುಕ), ಹೊಲೆಯ (ಮುದುಕಿ), ಡಂಗುರದವ, ಯುವ ಶರಣರು, ಶರಣರು, ದ್ವಿಜರು. ಜನರು.

■■